Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ


ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 45 | ಅಕ್ಟೋಬರ್ 31–ನವೆಂಬರ್ 6, 2022 | ಪುಟ 16 | ರೂ.10/-

Volume: 16 Issue: 45 October 31-November 6 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಕನ್ನಡ ಎಂದರೆ ಜೀವ ಕಣ, ಭಾವ ಕಣಾ



ಹೆಚ್ಚುತ್ತಿರುವ ಹಸಿವು ಬೆಳೆಯುತ್ತಿರುವ ಬಡತನ




ರಾಜ್ಯೋತ್ಸವದ ವಿಶೇಷ ಲೇಖನಗಳು

- ಭಾಷಾವಾರು ಪ್ರಾಂತ್ಯಗಳ ರಚನೆ: ಪ್ರಶ್ನೆ ಮತ್ತು ಪ್ರಕ್ರಿಯೆ
- ರಾಜ್ಯದ ರಾಜಕೀಯ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾಯತ್ತತೆಗೆ ಅಪಾಯ
- ಒಕ್ಕೂಟವಲ್ಲದ ಭಾರತ ಉಳಿಯಬಲ್ಲದೇ?

74 ವರ್ಷಗಳ ಹಿಂದೆ ಸ್ವತಂತ್ರ ಭಾರತದ ಮೊದಲ ಗೃಹಮಂತ್ರಿ ಸರ್ದಾರ್ ವಲ್ಲಭಬಾಯಿ ಪಟೇಲ್ ಮಹಾತ್ಮ ಗಾಂಧಿಯವರ ಹತ್ಯೆಗೆ ಕಾರಣರಾದವರೆಂದು ಹೇಳಿದ್ದ ವಿ.ಡಿ.ಸಾವರ್ಕರ್ ಇಂದು ಅದೇ ಮಹಾತ್ಮ ಗಾಂಧಿಯವರೊಂದಿಗೆ ಸಮಾನ ಸ್ಥಾನಮಾನವನ್ನು ಪಡೆಯುತ್ತಿದ್ದಾರೆ. ಸಂಸದ್ ಭವನದಲ್ಲಿ ಇವರಿಬ್ಬರ ಫೋಟೋಗಳು ಒಂದೆಡೆಯಲ್ಲೇ ಇವೆ. ಈಗ ದೇಶವನ್ನು ಆಳುತ್ತಿರುವ ಮಂದಿ ಅವರನ್ನು ಸ್ವಾತಂತ್ರ್ಯ ಸಮರದ 'ವೀರ' ಎನ್ನುತ್ತಿದ್ದಾರೆ. ಆದರೆ ಅವರು ಬ್ರಿಟಿಶ್ ಆಳರಸರ ಕ್ಷಮೆ ಕೋರಿ, ತನ್ನನ್ನು ಬಿಡುಗಡೆ ಮಾಡಬೇಕು ಎಂದು ಒಂದಲ್ಲ, ಎರಡಲ್ಲ, ಐದು ಕ್ಷಮಾಪತ್ರಗಳನ್ನು ಬರೆದಿದ್ದರು ಎಂದು ಬಯಲಾದಾಗ, ಅದು, ಸ್ವಾತಂತ್ರ್ಯ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸಲು ಅವರ ರಣನೀತಿಯಾಗಿತ್ತು ಎಂದು ಅವರ ಬೆಂಬಲಿಗರು ಹೇಳುತ್ತಿದ್ದರೆ, ಕಳೆದ ವರ್ಷ ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್‌ರವರು ಅವರು ಸ್ವತಃ ಗಾಂಧೀಜಿಯ ಸಲಹೆಯಯಂತೆ ಆ ಪತ್ರಗಳನ್ನು ಬರೆದಿದ್ದರು ಎಂದರು. ಇದು ನಿಜವಲ್ಲ ಎಂದು ಬೇಗನೇ ಸಾಬೀತಾಯಿತು, ಜತೆಗೆ ಈ 'ವೀರ'ನ ಈ ಕ್ಷಮಾಪತ್ರಗಳು 'ರಣನೀತಿ'ಯೇನೂ ಆಗಿರಲಿಲ್ಲ ಎಂದೂ ಅವರ ಬೆಂಬಲಿಗರು ಪರೋಕ್ಷವಾಗಿ ಒಪ್ಪಿಕೊಂಡಂತಾಯಿತು.

ಆದರೂ ಇಂತಹ ಮಿಥ್ಯೆಗಳನ್ನು ಹೆಣೆಯುವ, ಪಸರಿಸುವ ಪ್ರಯತ್ನಗಳು ನಿಂತಿಲ್ಲ. ಇವುಗಳಲ್ಲಿ ಇತ್ತೀಚಿನದ್ದು ಅವರು ಅಂಡಮಾನ್ ಜೈಲಿನಲ್ಲಿದ್ದುಕೊಂಡೇ ಬುಲ್‌ಬುಲ್ ಹಕ್ಕಿಯ ರೆಕ್ಕೆಯೇರಿ ಪ್ರತಿದಿನ ಗುಲಾಮ ಭಾರತದಲ್ಲಿನ ಪರಿಸ್ಥಿತಿಯ ನೋಟವನ್ನು ಪಡೆಯುತ್ತಿದ್ದರು ಎಂಬುದು. ಸಹಜವಾಗಿ ಈ ಮಿಥ್ಯೆಗಳನ್ನು ಬಯಲಿಗೆಳೆಯುವ ಪ್ರಯತ್ನಗಳೂ ನಡೆದ್ದಿವೆ. ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಅಂತಹ ಒಂದು ಪ್ರಮುಖ ಕೃತಿ. ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಈ ಕೃತಿ ಹಿಂದೂ ಮಹಾಸಭಾ, ಆರೆಸೆಸ್ ಮತ್ತು ಭಾರತ ಸರಕಾರದ ಪತ್ರಾಗಾರಗಳಲ್ಲಿ ಇರುವ ಮೂಲ ದಸ್ತಾವೇಜುಗಳು ಮತ್ತು ಅಂಡಮಾನ್ ಜೈಲಿನಲ್ಲಿ ಸಾವರ್ಕರ್ ಜತೆಗಿದ್ದ ಕ್ರಾಂತಿಕಾರಿಗಳ ಸ್ಮರಣೆಗಳನ್ನು ಆಧರಿಸಿದೆ. ಇದರಲ್ಲಿ ಏಳು ಮಿಥ್ಯೆಗಳನ್ನು ಬಯಲಿಗೆಳೆಯಲಾಗಿದೆ. ಇವನ್ನು ಈ ಪುಟದಲ್ಲಿ ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.



ಡಾ.ಶಮ್ಸುಲ್ ಇಸ್ಲಾಂ ಅನು: ಟಿ.ಸುರೇಂದ್ರ ರಾವ್

'ವೀರ' ಸಾವರ್ಕರ್– ಏಳು ಮಿಥ್ಯೆಗಳು

ಪ್ರಸ್ತಾವನೆ

ಈಗ ಸುದ್ದಿ ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರ ಪಡೆಯುತ್ತಿರುವ ಹೆಸರು ಸಾವರ್ಕರ್. ಅವರ ಫೋಟೋವು ಈಗ ಸಂಸತ್ ಭವನದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಫೋಟೋಗಳ ಜತೆ ರಾರಾಜಿಸುತ್ತಿದೆ. ಅವರನ್ನು 'ವೀರ' ಸಾವರ್ಕರ್ ಎಂದು ಕರೆಯುತ್ತಾರೆ. ಆ ವೀರನ ಕುರಿತು ಭಾರತದ ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯ್ ಪಟೇಲ್ ಏನು ಹೇಳುತ್ತಾರೆ ನೋಡೋಣ. ಫೆಬ್ರವರಿ 27, 1948 ರಲ್ಲಿ ಪ್ರಧಾನ ಮಂತ್ರಿ ನೆಹರೂರವರಿಗೆ ಬರೆದ ಪತ್ರದಲ್ಲಿ ಅವರು ಹೇಳುತ್ತಾರೆ: "ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾದ ಮತಾಂಧರ ಗುಂಪೊಂದು ಪಿತೂರಿಯನ್ನು ಮಾಡುತ್ತದೆ ಮತ್ತು ಅದನ್ನು ಆಗುವಂತೆ ನೋಡಿಕೊಳ್ಳುತ್ತದೆ." ಮಹಾತ್ಮಾ ಗಾಂಧಿಯವರ ಹತ್ಯೆಯ ಕುರಿತು ಪಟೇಲರು ಬರೆದ ಪತ್ರ ಅದಾಗಿತ್ತು.

ಇವತ್ತಿನ ಹಿಂದುತ್ವ ಅನುಯಾಯಿಗಳು ಸಾವರ್ಕರ್ ಅವರನ್ನು ಒಬ್ಬ ಸ್ವಾತಂತ್ರ್ಯ ಹೋರಾಟಗಾರನೆಂದು ವೈಭವೀಕರಿಸಲು ಅಬ್ಬರದ ಪ್ರಚಾರ ಮಾಡುತ್ತಿದ್ದಾರೆ. ಆರ್.ಎಸ್.ಎಸ್. ನ ಇಬ್ಬರು ಕಟ್ಟಾಳು ಸ್ವಯಂಸೇವಕರಾದ ಅಟಲ್ ಬಿಹಾರಿ ವಾಜಪೇಯಿ ಮತ್ತು ಲಾಲ್ ಕೃಷ್ಣ ಅದ್ವಾನಿ ಅವರ ನೇತೃತ್ವದಲ್ಲಿ 1990 ರ ಕೊನೆಯಲ್ಲಿ ಅಧಿಕಾರಕ್ಕೆ ಬಂದ ನ್ಯಾಷನಲ್ ಡೆಮಾಕ್ರಾಟಿಕ್ ಅಲಯನ್ಸ್ (ಎನ್.ಡಿ.ಎ) ಸಮಯದಲ್ಲಿ ಸಾವರ್ಕರ್ ಅವರನ್ನು ದೈವತ್ವಕ್ಕೆ ಏರಿಸುವ ಪ್ರಯತ್ನ ಆರಂಭವಾಯಿತು. ಹಿಂದುತ್ವ ಸಿದ್ಧಾಂತದ ಪ್ರತಿಪಾದಕನನ್ನು ಸ್ವಾತಂತ್ರ ಹೋರಾಟಗಾರನೆಂದು ಬಿಂಬಿಸುವ ಕಾರ್ಯ ಶುರುವಾಯಿತು. ಅಂಡಮಾನಿನ ಪೋರ್ಟ್ ಬ್ಲೇರ್ ವಿಮಾನ ನಿಲ್ದಾಣವನ್ನು ವಿ.ಡಿ.ಸಾವರ್ಕರ್ ವಿಮಾನ ನಿಲ್ದಾಣವೆಂದು ಮೇ 4, 2002 ರಂದು ಘೋಷಿಸುವಾಗ ಆಗಿನ ಗೃಹ ಸಚಿವರಾಗಿದ್ದ ಎಲ್.ಕೆ.ಅದ್ವಾನಿಯವರು "ಸಾವರ್ಕರ್ ಅವರು ಪ್ರತಿಪಾದಿಸಿದ ಹಿಂದುತ್ವವು ದೇಶದ ಪರಂಪರೆಯ ಬೇರುಗಳೊಂದಿಗೆ ಸಂಪೂರ್ಣವಾಗಿ ಬೆರೆತುಹೋದ ಸಿದ್ಧಾಂತವಾಗಿದೆ." ಎಂಬ ಆರ್.ಎಸ್.ಎಸ್. ನ ನಿಲುವನ್ನು ಅಲ್ಲಿ ಪ್ರತಿಧ್ವನಿಸಿದರು. ಹಿಂದುತ್ವದ ವೈಭವೀಕರಣ ಅಲ್ಲಿಗೇ ನಿಲ್ಲಲಿಲ್ಲ. ಫೆಬ್ರವರಿ 26, 2003 ರಂದು ಸಂಸತ್ ಭವನದಲ್ಲಿ ಕೇಂದ್ರ ಸಭಾಂಗಣದಲ್ಲಿ ಸಾವರ್ಕರ್ ಅವರ ಫೋಟೋವನ್ನು ಅನಾವರಣ ಮಾಡಲಾಯಿತು. ಮಹಾತ್ಮಾ ಗಾಂಧಿ ಮುಂತಾದ ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಸಾವರ್ಕರ್ ಅವರ ಫೋಟೋ ಕೂಡ ಸಂಸತ್ ಭವನದ ಕೇಂದ್ರ ಸಭಾಂಗಣದಲ್ಲಿ ರಾರಾಜಿಸುವಂತಾಯಿತು. ದ್ವಿರಾಷ್ಟ್ರ ನೀತಿಯ ಬಗ್ಗೆ ಸದಾ ಒಲವು ಹೊಂದಿದ್ದ ಮತ್ತು ಪ್ರಜ್ಞಾಪೂರ್ವಕವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಿಂದ ದೂರವಿದ್ದ ಸಾವರ್ಕರ್ ಅವರನ್ನು ಭಾರತದ ರಾಷ್ಟ್ರೀಯವಾದಿ ಹಾಗೂ ದೇಶಪ್ರೇಮಿ ಎಂದು ವೈಭವೀಕರಿಸಬಹುದಾದರೆ, ಮಹಮದಾಲಿ ಜಿನ್ನಾ ಅವರೂ ಕೂಡ ಅದೇ ಸ್ಥಾನಮಾನವನ್ನು ಬಯಸಿದರೆ ತಪ್ಪಾಗುವುದಿಲ್ಲ ಅಲ್ಲವೇ?

ಸಾವರ್ಕರ್ ಅವರು 1966 ರಲ್ಲಿ ಯಾವುದೇ ಹೆಚ್ಚು ಶೋಕಾಚರಣೆ ಇಲ್ಲದೆ ಸಾವನ್ನಪ್ಪಿದರು ಎಂಬ ಸಂಗತಿ ಬಹಳ ಜನಕ್ಕೆ ಗೊತ್ತೇ ಇಲ್ಲ. ಅವರು ತಮ್ಮ 83 ನೇ ವಯಸ್ಸಿನಲ್ಲಿ ಯಾರ ಗಮನಕ್ಕೂ ಬಾರದೆಯೇ ಸದ್ದುಗದ್ದಲವಿಲ್ಲದೆ ಮರಣ ಹೊಂದಿದರು. ಗಾಂಧಿ ಹತ್ಯೆಯ ಪಿತೂರಿಯ ಭಾಗವಾಗಿದ್ದರು ಎಂಬ ಕಳಂಕದಿಂದ ಅವರ ಬದುಕಿನುದ್ದಕ್ಕೂ ಹೊರಬರಲು ಅವರಿಗೆ ಸಾಧ್ಯವಾಗಲಿಲ್ಲ. ಪ್ರಖ್ಯಾತ ಅಂಕಣಕಾರರಲ್ಲಿ ಒಬ್ಬರಾದ ವೀರ್ ಸಾಂಘ್ವಿ ಅವರು: "1990 ರ ದಶಕದ ಕೊನೆಯವರೆಗೂ 'ಅವರನ್ನು ಸ್ವಾತಂತ್ರ್ಯ ಹೋರಾಟಗಾರರ ಮಹಾಪುರುಷ' ಎಂದು ಬಿಂಬಿಸಲು ದೊಡ್ಡ ಪ್ರಯತ್ನ ಮಾಡುವ ತನಕವೂ, ಅವರ ಬಗ್ಗೆ ಯಾರಿಗೂ ಗೊತ್ತೇ ಇರಲಿಲ್ಲ" ಎಂದು ಸರಿಯಾಗಿಯೇ ಹೇಳಿದ್ದಾರೆ. "ಅವರು ಹಿಂದುತ್ವ ಪದವನ್ನು ಆವಿಷ್ಕಾರ ಮಾಡಿದರು ಮತ್ತು ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರತಿಪಾದಕರಾಗಿದ್ದರು ಎಂದೆಲ್ಲಾ ನಮಗೆ ಹೇಳಲಾಯಿತು. 'ಸಾವರ್ಕರ್ ಅವರನ್ನು ಪುನಃಸ್ಥಾಪಿಸುವ' ಆಂದೋಲನವು ಆಗ ಅಧಿಕಾರಕ್ಕೆ ಬಂದಿದ್ದ ಭಾರತೀಯ ಜನತಾ ಪಕ್ಷದ ಅಧಿಕೃತ ನೀತಿಯಾಗಿತ್ತು."





ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರನನ್ನಾಗಿ ಬಿಂಬಿಸುವ ಯಾವುದೇ ಯೋಜನೆ 1998 ಕ್ಕೂ ಮುಂಚೆ ಹಿಂದುತ್ವ ಬ್ರಿಗೇಡಿಗೆ ಇರಲಿಲ್ಲ. 1998 ಕ್ಕೂ ಮುಂಚೆ ಮಹಾರಾಷ್ಟ್ರದಲ್ಲಿ ಬಹಳ ವರ್ಷಗಳ ಕಾಲ ಅಧಿಕಾರದಲ್ಲಿದ್ದ ಬಿಜೆಪಿ–ಶಿವಸೇನಾ ಮೈತ್ರಿ ಸರ್ಕಾರವು ಮುಂಬಯಿಯ ವಿಧಾನ ಸಭೆಯ ಗೋಡೆಗಳ ಮೇಲೆ ಸಾವರ್ಕರ್ ಅವರ ಫೋಟೋಗಳನ್ನು ಪ್ರದರ್ಶಿಸುವ ಆಲೋಚನೆಯನ್ನೇ ಮಾಡಿರಲಿಲ್ಲ. 2003 ರಲ್ಲಿ ಸಂಸತ್ತಿನಲ್ಲಿ ಸಾವರ್ಕರ್ ಫೋಟೋ ಅನಾವರಣ ಮಾಡಿದ ನಂತರ ಮಾತ್ರವೇ, ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರವು ಮುಂಬಯಿಯಲ್ಲೂ ಅವರ ಫೋಟೋವನ್ನು ಕೂಡ ಹಾಕಿತು.

ತದನಂತರ, ಕಾಂಗ್ರೆಸ್ ನಾಯಕತ್ವದ ಒಂದು ವಿಭಾಗವು "ಸಾವರ್ಕರ್ ಅವರನ್ನು ಪುನಃಸ್ಥಾಪಿಸುವ' ಆಂದೋಲನದಲ್ಲಿ ಪಾಲ್ಗೊಂಡಿತು. ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರು ನವ ದೆಹಲಿಯಲ್ಲಿ ತಮ್ಮ ಮೊಟ್ಟ ಮೊದಲ ಪತ್ರಿಕಾ ಗೋಷ್ಠಿಯಲ್ಲಿ (ಆಗಸ್ಟ್ 4, 2004) ವಿನಾಯಕ್ ದಾಮೋದರ್ ಸಾವರ್ಕರ್ ಅವರನ್ನು "ಒಬ್ಬ ದೇಶಪ್ರೇಮಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ" ಎಂದು ಕೊಂಡಾಡಿದ್ದರು. ಆಗ ಪೆಟ್ರೋಲಿಯಂ ಸಚಿವರಾಗಿದ್ದ ಮಣಿ ಶಂಕರ್ ಅಯ್ಯರ್ ಅವರು ಅದಾಗಲೇ 'ಸಾವರ್ಕರ್ ಅವರ ದೇಶಪ್ರೇಮದ ಸಾಕ್ಷ್ಯಾಧಾರಗಳ ಬಗ್ಗೆ' ಪ್ರಶ್ನೆ ಮಾಡಿದ್ದರಿಂದ, ಆ ಕುರಿತು ಕೇಳಲಾದ ಪ್ರಶ್ನೆಗೆ ಮನ ಮೋಹನ್ ಸಿಂಗ್ ಅವರು "ಸಾವರ್ಕರ್ ಅವರ ಕುರಿತ ವಿವಾದಕ್ಕೆ ಸಂಬಂಧಪಟ್ಟಂತೆ, ಅವು ಮಣಿ ಶಂಕರ್ ಅಯ್ಯರ್ ಅವರ ವೈಯಕ್ತಿಕ ಅಭಿಪ್ರಾಯ, ನಮ್ಮ ಸರ್ಕಾರದ್ದಲ್ಲ, . . . ಅದೊಂದು ಅನಗತ್ಯವಾದ ವಿವಾದ." ಎಂದು ಉತ್ತರಿಸಿದ್ದರು.

ಮನಮೋಹನ್ ಸಿಂಗ್ ಅವರು ಸಾವರ್ಕರ್ ಅವರ ಪರವಾಗಿ ಮಾತನಾಡುವಾಗ ಒಬ್ಬ ದಾರ್ಶನಿಕನಂತೆ ತೋರಿದರು: "ಘಟನೆಗಳನ್ನು ವಿವಿಧ ರೀತಿಯಲ್ಲಿ ಅರ್ಥೈಸುವ ಸ್ವಾತಂತ್ರ್ಯವನ್ನು ಇತಿಹಾಸ ನಮಗೆ ನೀಡಿದ್ದರೂ, ನಿಧನರಾದವರ ಬಗ್ಗೆ ಅನುಚಿತವಾಗಿ ಮಾತನಾಡುವುದರಿಂದ ಒಳ್ಳೆಯದೇನನ್ನೂ ಸಾಧಿಸಲಾಗುವುದಿಲ್ಲ ಎಂದು ನನಗನಿಸುತ್ತದೆ." ಒಬ್ಬ ಕಾಂಗ್ರೆಸ್ ಪ್ರಧಾನ ಮಂತ್ರಿಯೊಬ್ಬರು ಸಾವರ್ಕರ್ ಅವರನ್ನು ಸಮರ್ಥಿಸಿ ಮಾತನಾಡಿದ್ದು ಅದೇ ಮೊದಲು. ಅದಕ್ಕೂ ಮುಂಚೆ, ಅವರ ಸಚಿವ ಸಂಪುಟದಲ್ಲಿ ಸಂಸದೀಯ ವ್ಯವಹಾರಗಳ ಸಚಿವರಾಗಿದ್ದ, ಗುಲಾಂ ನಬಿ ಆಜಾದ್ ಅವರು 'ಸಾವರ್ಕರ್ ಅವರ ಬಗ್ಗೆ ಅಯ್ಯರ್ ಅವರು ಮಾಡಿದ ವ್ಯಾಖ್ಯಾನವು ಅವರ ವೈಯಕ್ತಿಕ ನಿಲುವು ಮತ್ತು ಸರ್ಕಾರ ಅದನ್ನು ಒಪ್ಪುವುದಿಲ್ಲ' ಎಂದರು. ಸಾವರ್ಕರ್ ಅವರ ಬಗ್ಗೆ ಅಯ್ಯರ್ ಅವರು ಮಾಡಿದ ಟೀಕಾತ್ಮಕ ಅಭಿಪ್ರಾಯ ಕುರಿತು ಮಹಾರಾಷ್ಟ್ರದಲ್ಲಿ ಮುಖ್ಯ ಮಂತ್ರಿ ಸುಶೀಲ್ ಕುಮಾರ್ ಶಿಂಧೆ ಅವರು ಮಾತ್ರ ಕೋಪದಿಂದ ಪ್ರತಿಕ್ರಿಯೆ ಮಾಡಿದ್ದಲ್ಲ, ಮತ್ತೊಬ್ಬ ಪ್ರಮುಖ ಕಾಂಗ್ರೆಸ್ ಮುಖಂಡ ಆರ್.ಅಡಿಕ್ ಅವರು ಶಿವಸೇನಾದ ಮರಾಠಿ ಪತ್ರಿಕೆ ಸಾಮ್ನಾದಲ್ಲಿ ಸಾವರ್ಕರ್ ಅವರನ್ನು ಹಾಡಿಹೊಗಳಿ ಮುಖಪುಟದ ಲೇಖನ ಬರೆದಿದ್ದರು.

ಸಾವರ್ಕರ್ ಅವರ ಹೊಗಳುಭಟರ ತಂಡದಲ್ಲಿ ಕಾಂಗ್ರೆಸ್ ಕೂಡ ಸೇರಿಕೊಂಡದ್ದು ವಿಷಾದದ ಸಂಗತಿ. ವೀರ್ ಸಾಂಘ್ವಿಯವರ ಪ್ರಕಾರ, "ಕಾಂಗ್ರೆಸ್ ಸಿದ್ಧಾಂತವನ್ನು ಅಥವಾ ಪುಟ 10 ಕ್ಕೆ

ಡಾ. ಶಮ್ಸುಲ್ ಇಸ್ಲಾಂ 1973 ರಿಂದ 2013 ರ ವರೆಗೆ ದಿಲ್ಲಿ ವಿಶ್ವವಿದ್ಯಾಲಯದಲ್ಲಿ ರಾಜಕೀಯಶಾಸ್ತ್ರದ ಫ್ರಾಧ್ಯಾಪಕರಾಗಿದ್ದರು ಸಂಶೋಧಕರಾಗಿ, ಅಂಕಣಕಾರರಾಗಿ ಮತ್ತು ನಾಟಕಕಾರರಾಗಿಯೂ ಪ್ರಸಿದ್ಧರು; ಭಾರತದಲ್ಲಿ ರಾಷ್ಟ್ರೀಯವಾದದ ಉದಯ ಮತ್ತು ಬೆಳವಣಿಗೆಯ ಬಗ್ಗೆ ಮೂಲಭೂತ ಸಂಶೋಧನೆಗಳಿಗೆ ಹೆಸರಾದವರು. ಇವರ ಸುಮಾರು 13 ಕೃತಿಗಳು ಮತ್ತು 1000ಕ್ಕೂ ಹೆಚ್ಚು ಲೇಖನಗಳು ಮುಖ್ಯವಾಗಿ ಮತಾಂಧತೆ, ಅಮಾನವೀಯ ವಿಚಾರಗಳು, ಸರ್ವಾಧಿಕಾರ, ಮಹಿಳೆಯರಿಗೆ, ದಲಿತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕಿರುಕುಳಗಳನ್ನು ಕುರಿತಾದವುಗಳು.

ಸಂಪಾದಕೀಯ

ನಾಡು, ನುಡಿ, ಬದುಕಿನ ಸಂರಕ್ಷಣೆಯ ಸಂಕಲ್ಪದಲ್ಲಿ

ಈಗ ರಾಜ್ಯೋತ್ಸವದ ಸಂಭ್ರಮ. ಎಲ್ಲರಿಗೂ 67 ನೇಯ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ಕನ್ನಡದ ಭಾಷೆಗೂ ಕರ್ನಾಟಕದ ಜನರ ಬದುಕಿಗೂ ಅವಿನಾವಭಾವ ಸಂಬಂಧವಿದೆ. ಭಾಷೆ ಎನ್ನುವುದು ಕೇವಲ ಅಭಿವ್ಯಕ್ತಿಯ ಮಾಧ್ಯಮ ಮಾತ್ರವಲ್ಲ. ಅದು ಸಜೀವ ಸಂಸ್ಕೃತಿ ಮತ್ತು ಜನ ಜೀವನದ, ನಾಗರೀಕತೆಯ ಜೀವತಂತು. ಹಾಗಾಗಿ ಜಗತ್ತಿನಾದ್ಯಂತ ಭಾಷೆಯ ಆಧಾರದಲ್ಲೇ ರಾಷ್ಟ್ರೀಯತೆಯನ್ನು ಗುರುತಿಸುವುದು ಅತ್ಯಂತ ವೈಜ್ಞಾನಿಕ ಮತ್ತು ಸಮರ್ಥನೀಯ ಎಂದು ಪರಿಗಣಿಸಲಾಗಿದೆ. ರಾಜ್ಯಗಳ ಸಂರಚಿಸುವಾಗ ಭಾಷಾವಾರು ಪ್ರಾಂತ್ಯಗಳಾಗಿಯೇ ಪರಿಗಣಿಸಿ ರಾಜ್ಯಗಳನ್ನು ಸಂಘಟಿಸಿರುವುದು ನಿಜ. ನಾವು ಭಾಷಾವಾರು ಪ್ರಾಂತ್ಯದ ರಚನೆಯ ದಿನವನ್ನು ಆಚರಿಸುವಾಗಲೂ ಇದು ಕೇವಲ ಕನ್ನಡಿಗರ ರಾಜ್ಯೋತ್ಸವವಲ್ಲ. ಭಾರತದ ಒಕ್ಕೂಟದ ವ್ಯವಸ್ಥೆಯಲ್ಲಿ ಕರ್ನಾಟಕದ ರಾಜ್ಯೋತ್ಸವವೂ ಹೌದು. ರಾಷ್ಟ್ರಕವಿ ಕುವೆಂಪು ಅವರು ಹಾಡಿದಂತೆ ಸರ್ವ ಜನಾಂಗದ, ಸರ್ವ ಭಾಷೆಯ ವಿವಿಧ ಧರ್ಮಗಳ ಶಾಂತಿಯ ತೋಟ ಕರ್ನಾಟಕ. ಹೀಗಾಗಿ ಕರ್ನಾಟಕದ ರಾಜ್ಯೋತ್ಸವವನ್ನು ಕನ್ನಡೇತರರೂ ಆಚರಿಸುವುದು ಮತ್ತು ಅವರೆಲ್ಲರನ್ನೂ ನಮ್ಮವರಾಗಿ ಒಳಗೊಳ್ಳುವುದು ಕೂಡ ಅತಿ ಮುಖ್ಯವಾಗಿದೆ. ಇವನಾರವ ಯುವ ನಾರವ ಎಂದೆನಿಸದೆ ಒಳಗೊಳ್ಳುವುದು ಕನ್ನಡ ನಾಡಿನ ಸಂಸ್ಕೃತಿ.

ಉದಯವಾಗಲಿ ಚೆಲುವ ಕನ್ನಡ ನಾಡು ಎಂದು ಸಂಕಲ್ಪಿಸಿ ತ್ಯಾಗ ಬಲಿದಾನಗಳ ಹೋರಾಟಗಳನ್ನು ಗೈದು ಹೊಸ ನಾಡೊಂದನ್ನು ಕಟ್ಟಿ ಸುಖದ ಬೀಡು ನಿರ್ಮಿಸುವ ಕನಸು ಕಂಡದ್ದು ಸಹ ನಿಜ. ಅದು ಅಂದು ಎಲ್ಲರದೆಯ ಹಾಡು. ಪ್ರತಿ ರಾಜ್ಯೋತ್ಸವದ ಸಂದರ್ಭದಲ್ಲಿ ಇಂತಹ ಕನಸುಗಳು ನನಸಾಗಿವೆಯೇ? ಸಂಕಲ್ಪ, ಸಾಧನೆ ಮತ್ತು ಸವಾಲುಗಳ ಪರಿವ್ಯಾಪ್ತಿಯಲ್ಲಿ ಪ್ರತಿಯೊಂದನ್ನೂ ಪುನರ್ ಅವಲೋಕನ ಮಾಡುವುದು ಸಹ ಎಲ್ಲ ಪ್ರಜೆಗಳ ಅಲಿಖಿತ ಹೊಣೆಗಾರಿಕೆ.

ಭಾರತದ ಒಕ್ಕೂಟದಲ್ಲಿ ಒಂದು ಭಾಷಿಕ ಜನರು ಒಂದುಗೂಡಿ ಒಂದು ಆಡಳಿತದ ಅಡಿಯಲ್ಲಿ ಪುನರ್ ಸಂಘಟಿತಗೊಂಡು ಹಲವು ದಶಕಗಳು ಕಳೆದಿವೆ. ಭಾರತದ ಅಭಿವೃದ್ಧಿಯ ಪಥಕ್ಕೆ ಹೊಂದಿಕೊಂಡೇ ಕರ್ನಾಟಕವು ಅದೇ ಜಾಡಿನಲ್ಲಿ ಅಭಿವೃದ್ಧಿಯ ವಿವಿಧ ಸ್ಥಿತ್ಯಂತರಗಳನ್ನು ಕಂಡಿದೆ. ಆದರೆ ದೇಶದಲ್ಲಿ ಇಂದು ಅಂತಹ ಮೂಲ ಆಶಯಗಳಿಗೆ ಧಕ್ಕೆ ತರುವ ಪ್ರಯತ್ನಗಳು ನಮ್ಮೆದುರು ದಟ್ಟವಾಗಿ ಕಾಣಿಸಿಕೊಳ್ಳುತ್ತಿವೆ. ನಮ್ಮದೇ ಭಾಷೆ, ಅಸ್ಮಿತತೆ, ಸಾಂಸ್ಕೃತಿಕ ವೈಶಿಷ್ಟತೆಗಳನ್ನು ಹೊಸಕಿ ಹಾಕಬಹುದೇ ಎನ್ನುವ ಆತಂಕವು ತಲೆದೋರಿದೆ. ಈ ಒಟ್ಟು ಸನ್ನಿವೇಶವನ್ನು ಸರಿಯಾದ ರೀತಿಯಲ್ಲಿ ಅವಲೋಕಿಸಿ ಭಾರತದ ಸಂವಿಧಾನ ಕೊಡ ಮಾಡಿದ ಒಕ್ಕೂಟದ ಸ್ವರೂಪವನ್ನು, ವೈವಿಧ್ಯತೆಯಲ್ಲಿನ ಏಕತೆಯನ್ನು ಸಂರಕ್ಷಿಸಿಕೊಳ್ಳಬೇಕಿದೆ. ಬಲಿಷ್ಠ ಭಾರತ ಕಟ್ಟುವುದು ಎಂದರೆ ಅಪರಿಮಿತ ಅಧಿಕಾರದ ಕೇಂದ್ರ ಇದ್ದರೆ ಸಾಕು ಎನ್ನುವುದು ಇಡೀ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಆ ಮೂಲಕ ದೇಶವನ್ನೂ ದುರ್ಬಲಗೊಳಿಸುತ್ತದೆ. ಬಲಿಷ್ಠ ರಾಜ್ಯಗಳಿಲ್ಲದೆ ಬಲಿಷ್ಠ ಕೇಂದ್ರ ಎನ್ನುವುದು ಸರ್ವಾಧಿಕಾರತ್ವದ ಅತಿರೇಕವಾಗಬಲ್ಲದು.

ಹೀಗೇಕಾಗುತ್ತದೆ ಎನ್ನುವುದರತ್ತ ವಿವೇಚನಾಯುತವಾದ ಅವಲೋಕನವೂ ಅಗತ್ಯ. ವಿಶೇಷವಾಗಿ 'ಒಂದು ದೇಶ, ಒಂದು ಭಾಷೆ, ಒಂದು ಧರ್ಮ, ಒಂದು ದೇಶ–ಒಂದು ಸಮವಸ್ತ್ರ, ಒಂದು ದೇಶ ಒಂದೇ ಫರ್ಮಾನು ಇತ್ಯಾದಿ ಮಾತುಗಳನ್ನು ಕೇಳುವಾಗ ಅಪಾಯದ ಗಂಟೆ ಅತಿಯಾಗಿ ಸನಿಹದಲ್ಲೇ ಬಾರಿಸುವುದು ಗಂಭೀರ ಸಂಗತಿ.

ಈ ಕಾಲದ ಪ್ರಕ್ರಿಯೆಯನ್ನು ಹೀಗೆ ಅರಿಯಬಹುದು. ಪ್ರಭುತ್ವದ ನೇತೃತ್ವ ವಹಿಸಿದ್ದ ಹಿರಿಯ ಬಂಡವಾಳಗಾರರು ಏಕಸ್ವಾಮ್ಯ ಬಂಡವಾಳಗಾರಾಗುತ್ತಿದ್ದಾರೆ. ಏಕಸ್ವಾಮ್ಯ ಬಂಡವಾಳಗಾರರು ಆರ್ಥಿಕತೆ ಮತ್ತು ಮಾರುಕಟ್ಟೆಯ ಏಕಸ್ವಾಮ್ಯತೆಯನ್ನೂ ಏಕ ಕಾಲದಲ್ಲೇ ಬಯಸುತ್ತಾರೆ. ಅಂತಹ ಬದಲಾವಣೆಗೆ ಅನುವಾಗಲು ಅವರು ಪ್ರಾದೇಶಿಕ ಆರ್ಥಿಕತೆಯನ್ನು ಅಪೋಶನ ಮಾಡಿ ಇಲ್ಲವೇ ನಾಶಗೊಳಿಸಿ ತಮ್ಮದೇ ಏಕಸ್ವಾಮ್ಯವನ್ನು ಸ್ಥಾಪಿಸ ಬಯಸುತ್ತಾರೆ. ಇಂತಹ ವರ್ಗಗಳ ನೇತೃತ್ವದ ಪ್ರಭುತ್ವ ತನ್ನೆಲ್ಲಾ ಬುದ್ದಿ, ಬಲ, ಕೌಶಲ್ಯಗಳನ್ನು ಬಳಸಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಮುರಿದಿಕ್ಕಲು ತನ್ನ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವನ್ನು ಬಳಸುತ್ತದೆ. ಈಗಿನ ಕೇಂದ್ರ ಸರಕಾರ ಸಂವಿಧಾನಾತ್ಮ ವಿಧಿ ವಿಧಾನಗಳನ್ನು ಅನುಸರಿಸದೆ, ಉಲ್ಲಂಘಿಸಿ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿ ಒಕ್ಕೂಟದ ಪ್ರಜಾಸತ್ತಾತ್ಮಕ ಸ್ವರೂಪ, ಕಾರ್ಯ ವಿಧಾನಗಳನ್ನು ಬುಡಮೇಲು ಮಾಡುತ್ತಾ ಏಕಸ್ವಾಮ್ಯದ ಸರ್ವಾಧಿಕಾರವನ್ನು ಹೇರುತ್ತಿದೆ. ಹೀಗಾಗಿಯೇ ಒಕ್ಕೂಟದ ರಾಜ್ಯ ವ್ಯವಸ್ಥೆಯಲ್ಲಿನ ಭಾಷೆ, ಸಂಸ್ಕೃತಿ ಮುಖ್ಯವಾಗಿ ಆರ್ಥಿಕತೆಯನ್ನು ನೆಲ ಸಮಗೊಳಿಸುತ್ತದೆ. ಒಂದು ದೇಶ, ಒಂದು ಭಾಷೆ, ಒಂದು ಸಮವಸ್ತ್ರ ಎನ್ನುವುದರ ಹಿಂದೆ ರಾಜ್ಯಗಳ ಅಸ್ಮಿತತೆ, ಅಸ್ತಿತ್ವವನ್ನೇ ನಾಶಗೊಳಿಸುವ ಸರ್ವಾಧಿಕಾರದ ಹುನ್ನಾರವಿದೆ. ಈ ನೆಲೆಯಲ್ಲೇ ಅದು ಬಹುಮುಖಿ ಯುದ್ಧ ಸಾರಿದೆ.

ದೇಶಕ್ಕೆ ವಸಾಹತುಶಾಹಿಗಳಿಂದ ಸ್ವಾತಂತ್ರ್ಯ ಬಂದಾಗ ಹಿರಿಯ ಬಂಡವಾಳಿಗರು ಭಾರತದಂತಹ ವಿಶಾಲ ದೇಶಕ್ಕೆ ಅಗತ್ಯವಿದ್ದ ಉತ್ಪಾದನೆ ಮಾಡುವಷ್ಟು ಕೈಗಾರಿಕಾ, ಕೃಷಿ ಬಂಡವಾಳ ಇರಲಿಲ್ಲ ಮತ್ತು ಪ್ರಾದೇಶಿಕ ಹಾಗೂ ಭಾಷಾವಾರು ಪ್ರದೇಶಗಳ ವೈಶಿಷ್ಟ್ಯಗಳ ಪ್ರಬಲ ಪ್ರತಿಪಾದನೆಗಳ ಕಾರಣದಿಂದ ಒಕ್ಕೂಟ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಯಿತು. ಕಾಲಾನುಕ್ರಮದಲ್ಲಿ ಪ್ರಭುತ್ವದ ಪ್ರಾಯೋಜಿತ ಬಂಡವಾಳಶಾಹಿ ಬೆಳೆದಂತೆ ದೇಶದ ಆರ್ಥಿಕತೆಯನ್ನು ತನ್ನ ಕೈಗೆ ತೆಗೆದುಕೊಳ್ಳುವ ಧಾವಂತ ಆರ್ಥಿಕತೆಯ ಬೆನ್ನೆಲುಬಾದ ಸಾರ್ವಜನಿಕ ವಲಯದ ಕಳಚುವಿಕೆ ಇತ್ಯಾದಿ ಉದಾರೀಕರಣ, ಖಾಸಗೀಕರಣದ ನೀತಿಗಳು ಸ್ವಾಯತ್ತ, ಸಾರ್ವಭೌಮತ್ವದ ಬೆಳವಣಿಗೆಯ ಕಲ್ಪನೆಯನ್ನೇ ಬುಡಮೇಲುಗೊಳಿಸಿವೆ.

ಇದಕ್ಕೆ ಪರ್ಯಾಯ ಕಟ್ಟುವ ಚಿಂತನೆ ಮತ್ತು ಆಂದೋಲನ ಇಂದಿನ ಅಗತ್ಯ. ಏಕಸ್ವಾಮ್ಯ ಬಂಡವಾಳದ ಮಾರುಕಟ್ಟೆ ಆರ್ಥಿಕತೆಯನ್ನು ಹಿಮ್ಮೆಟ್ಟಿಸದೇ, ಭಾಷಾವಾರು ಪ್ರಾಂತ್ಯಗಳ ಅಸ್ತಿತ್ವ, ಅಸ್ಮಿತತೆಯನ್ನಾಗಲೀ, ಪ್ರಾದೇಶಿಕ ವೈಶಿಷ್ಟತೆಯನ್ನಾಗಲೀ ಸಂರಕ್ಷಿಸಿಕೊಳ್ಳುವುದು ಆಗದು.

ಈ ಸಂಚಿಕೆಯು ರಾಜ್ಯಗಳ ಸ್ವಾಯತ್ತತೆಗೆ ವಿವಿಧ ಮುಖಗಳಲ್ಲಿ ನಡೆಯುತ್ತಿರುವ ದಾಳಿಗಳ ಅವಲೋಕನ ಮಾಡಿದ ವಿಶ್ಲೇಷಣಾತ್ಮಕ ಲೇಖನಗಳನ್ನು ಒಳಗೊಂಡಿದೆ. ತಾವು ಇದೆಲ್ಲವನ್ನು ಸ್ವಾಗತಿಸುತ್ತೀರಿ ಎಂದು ಭಾವಿಸುತ್ತೇವೆ.

ಈ ವಾರ

ಜೋಡೋ ಯಾತ್ರಾರ್ಥಿಗಳಿಗೆ ಜನ ಕೊಟ್ಟ ಸಂದೇಶ

ಡಾ. ಕೆ. ಪ್ರಕಾಶ್

ಕರ್ನಾಟಕದಲ್ಲಿ ಭಾರತ್ 'ಜೋಡೋ ಯಾತ್ರೆ' 2022 ಸೆಪ್ಟಂಬರ್ 30 ರಂದು ಚಾಮರಾಜನಗರ ಜಿಲ್ಲೆ ಪ್ರವೇಶಿಸಿ ಸುಮಾರು 22 ದಿನಗಳಲ್ಲಿ 510 ಕಿ.ಮೀ. ಕ್ರಮಿಸಿ ರಾಯಚೂರಿನ ಯರಮರಸ್ ನಿಂದ ಗಡಿ ಗ್ರಾಮ ಹಾಲಹರವಿ ಮೂಲಕ ತೆಲಂಗಾಣ ಪ್ರವೇಶಿಸಿದೆ. ರಾಜ್ಯದ ಎಂಟು ಜಿಲ್ಲೆಗಳ ಮೂಲಕ ಹಾದು ಬಂದ ಯಾತ್ರೆಗೆ ಜನರಿಂದ ಅತ್ಯುತ್ತಮ ಪ್ರತಿಕ್ರಿಯೆ ದೊರೆತ ವರದಿಗಳಿವೆ. ಬಳ್ಳಾರಿಯಲ್ಲಿ ನಡೆದ ಬೃಹತ್ ಬಹಿರಂಗ ಸಭೆಗೆ ಜನ ತೋರಿದ ಸ್ಪಂದನವೂ ಅಭೂತಪೂರ್ವ. ಇಂತಹ ಪ್ರತಿಕ್ರಿಯೆ ದೊರೆಯಲು ಕಾರಣವಾದರೂ ಏನು?

ಇದು ನಾಯಕರ ವರ್ಚಸ್ಸಿನ ಫಲ ಎಂದು ಭಾವಿಸಿದರೆ ತಪ್ಪಾದೀತು. ಅದರರ್ಥ ರಾಹುಲಗಾಂಧಿ, ಸಿದ್ಧರಾಮಯ್ಯನಂತಹವರ ವ್ಯಕ್ತಿತ್ವದ ಪ್ರಭಾವ ಇಲ್ಲವೇ ಇಲ್ಲವೆಂದೇನಲ್ಲ. ಆದರ ಪ್ರಮಾಣ ಅಲ್ಪ. ಪ್ರಚಲಿತ ರಾಜಕೀಯ ಸಂದರ್ಭದಲ್ಲಿ ಇದು ಸಕಾಲಿಕ ಮದ್ಯಪ್ರವೇಶ.

ಜನ ಸ್ಪಂದನ

ಯಾತ್ರೆಯ ಸಂಘಟಕರು ಘೋಷಿಸಿದಂತೆ ಇದು ಕೋಮುವಾದಿ, ಮೂಲಭೂತವಾದಿ ಮುಂತಾದ ವಿಭಜಕ ಶಕ್ತಿಗಳು ಜನರನ್ನು ಒಡೆಯುತ್ತಿರುವ ಹೊತ್ತಿನಲ್ಲಿ ಭಾರತವನ್ನು ಜೋಡಿಸುವ ಯಾತ್ರೆ ಎನ್ನುವುದನ್ನು ಮೀರಿ ಕಾಂಗ್ರೆಸ್ ಪಕ್ಷ ಚುನಾವಣಾ ಲಾಭದ ಲೆಕ್ಕಾಚಾರದಲ್ಲಿ ರೂಪುಗೊಂಡಿರುವ ಯೋಜನೆ ಎಂಬುದು ರಾಜ್ಯದಲ್ಲಿಯೂ ಕಂಡಿತು. ದ್ವೇಷಾಗ್ನಿಯಲ್ಲಿ ಬೇಯುತ್ತಿರುವ ಜಿಲ್ಲೆಗಳನ್ನು ಈ ಯಾತ್ರೆ ಬಹುತೇಕ ದೂರ ಇಟ್ಟಿತು. ಆದರೂ ಜನರನ್ನು ಒಗ್ಗೂಡಿಸುವ, ಸೆಕ್ಯುಲರ್ ಶಕ್ತಿಗಳನ್ನು ಚುರುಕುಗೊಳಿಸುವ ದೆಸೆಯಲ್ಲಿ ಒಂದಿಷ್ಟು ಪರಿಣಾಮ ಬೀರಿದೆ.

ಬಿಜೆಪಿಯಲ್ಲಿ ಹೆಚ್ಚಿದ ಹತಾಶೆ

ಈ ಯಾತ್ರೆಗೆ ಜನ ತೋರಿದ ಸ್ಪಂದನ ಅಧಿಕಾರಸ್ತ ಬಿಜೆಪಿ ಸರಕಾರ ಮತ್ತು ಪಕ್ಷದ ವಿರುದ್ದ ರೋಸಿ ಹೋಗಿರುವ, ಅತೃಪ್ತಿಯ ಪ್ರತಿಫಲನವಾಗಿದೆ. ಬಿಜೆಪಿಯ ಹಿಂಸಾತ್ಮಕ, ದ್ವೇಷಪೂರಿತ, ಭಾರೀ ಭ್ರಷ್ಟ, ದುರಾಡಳಿತದ ರಾಜಕಾರಣಕ್ಕೆ ತೋರಿದ ಪ್ರತಿಭಟನೆಯಾಗಿದೆ. ತನ್ನ ವಿರುದ್ಧ ಜನತೆಯಲ್ಲಿ ಅತೀವವಾಗಿ ಅತೃಪ್ತಿ ಬೆಳೆಯುತ್ತಿರುವುದಕ್ಕೆ ಭಂಡತನದಿಂದ ಪ್ರತಿಕ್ರಿಯಿಸುತ್ತಿದ್ದರೂ ಬಿಜೆಪಿ ಸರಿಯಾಗಿಯೇ ಅಂದಾಜಿಸಿದೆ. ಅದು 'ಮೋ–ಷಾ' ಗಳ ಹವಾದಲ್ಲೇ ತೇಲಬಹುದು ಎನ್ನುವ ನೆಚ್ಚಿಕೆಯನ್ನೂ ಕಳೆದುಕೊಂಡಿದೆ. ಹೀಗಾಗಿಯೇ ಕಾಂಗ್ರೆಸ್ ನಾಯಕರ ಮೇಲೆ ಯದ್ವಾತದ್ವಾ ವಾಗ್ದಾಳಿ ನಡೆಸಿದ್ದಲ್ಲದೇ, ತಡಬಡಾಯಿಸಿ ಮುಖ್ಯಮಂತ್ರಿ, ಹಿರಿಯ ನಾಯಕರಾದಿಯಾಗಿ ರಾಜ್ಯದ ತುಂಬಾ ಸಂಕಲ್ಪ ಯಾತ್ರೆಯನ್ನೂ ನಡೆಸುತ್ತಿದೆ. ಸರಕಾರದ ಹೊಸ ಯೋಜನೆಗಳ ನೆಪದಲ್ಲಿ ಹಣ, ಅಧಿಕಾರದ ಆಮಿಷಗಳನ್ನು ಒಡ್ಡುತ್ತಿದೆ. ಸಾಲದೆಂಬಂತೆ ಇನ್ನೊಂದು ಮಗ್ಗುಲಲ್ಲಿ ಸಂಘಪರಿವಾರ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮತ್ತೇ ಮತೀಯ ದ್ವೇಷ ಹೆಚ್ಚಿಸುವ ದುಷ್ಟ ಆಟಕ್ಕೂ ಇಳಿದಿದೆ. ಇಂತಹ ವಿಭಜಕ, ಜನ ಪೀಡಕ ಆಡಳಿತಕ್ಕೆ ಎದುರಾಗಿ ಜನರನ್ನು ಒಗ್ಗೂಡಿಸುವ ಕಾಂಗ್ರೆಸ್ ನ ಯಾತ್ರೆಯ ಸಂದೇಶಕ್ಕೆ ಸ್ಪಂದನವೂ ದೊರೆಯಿತು. ಹೀಗಾಗಿ ಕಾಂಗ್ರೆಸ್ ನ ರಾಜಕೀಯ, ಆರ್ಥಿಕ ನೀತಿಗಳಿಗೆ ಭಿನ್ನ ಅಭಿಪ್ರಾಯ ಹೊಂದಿದ ಬುದ್ದಿಜೀವಿಗಳನ್ನೂ ಒಳಗೊಂಡು ಪ್ರಜ್ಞಾವಂತರು ರಾಹುಲರ ಯಾತ್ರೆಯನ್ನು ಬೆಂಬಲಿಸಿದರು.

ಸಂದೇಶವೇನು?

ಈ ಯಾತ್ರೆ ಜನಮಾನಸದಲ್ಲಿ ಒಂದು ಸಂದೇಶವನ್ನು ಬಿತ್ತಿತು. ಅಷ್ಟು ಮಾತ್ರವಲ್ಲ, ಯಾತ್ರೆಯಲ್ಲಿ ಪಾಲ್ಗೊಂಡ ವಿಶೇಷವಾಗಿ ರಾಹುಲ್ ಗಾಂಧಿಯನ್ನು ಒಳಗೊಂಡು ಎಲ್ಲ ನಾಯಕರಿಗೂ ಜನರೂ ಕೂಡ ಒಂದು ವಿಶೇಷ ಸಂದೇಶವನ್ನು ನೀಡಿದ್ದಾರೆ. ಬಿಜೆಪಿಯ ವೈಫಲ್ಯಗಳ ಎದುರು ಅಪಾರ ನಿರೀಕ್ಷೆಯನ್ನೂ ವ್ಯಕ್ತ ಪಡಿಸಿದ್ದಾರೆ. ಹೀಗಾಗಿ ಕಾಂಗ್ರೆಸ್ ನ ಮೇಲಿನ ಹೊಣೆಗಾರಿಕೆ ಮತ್ತಷ್ಟು ಹೆಚ್ಚಿದೆ. ಇದನ್ನು ಈ ಅರ್ಥದಲ್ಲಿಯೇ ಕಾಂಗ್ರೆಸ್ ತೆಗೆದುಕೊಳ್ಳುವುದೇ? ಮತ್ತು ಜನತೆಯ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುವುದೇ ಅಥವಾ ಇನ್ನೇನು ತಮ್ಮದೇ ಅಧಿಕಾರ ಎಂಬ ಭ್ರಮೆಯಲ್ಲಿ ತೇಲುತ್ತಾ ಅಧಿಕಾರದ ಗದ್ದುಗೆ ಹಿಡಿಯುವ ಕಿತ್ತಾಟದಲ್ಲಿ ಮುಳುಗುವುದೇ? ಹೀಗೆ ಹಳೆಯ ಅನುಭವಗಳ ಹೊಳಹಿನಲ್ಲಿ ಸಹಜ ಅನುಮಾನಗಳು, ನಿರೀಕ್ಷೆಗಳು.

ಅಂದರೆ ಕಾಂಗ್ರೆಸ್ ಹಲವು ಆಯಾಮಗಳಲ್ಲಿ ಬದಲಾಗಬೇಕು. ಇಂತಹ 'ಜಾತ್ರೆ'ಗಳಿಂದಲೇ ಬಿಜೆಪಿಯಂತಹ ಕೋಮುವಾದಿ ಫ್ಯಾಶಿಸ್ಟ್ ಶಕ್ತಿಗಳನ್ನು ಸಮಾಜ ವ್ಯವಸ್ಥೆಯ ಮೈದಾನದಲ್ಲಿರಲಿ, ಚುನಾವಣಾ ರಾಜಕಾರಣದಲ್ಲಿಯೂ ಹಿಮ್ಮೆಟ್ಟಿಸುವುದು ಅಷ್ಟು ಸುಲಭವೇನಲ್ಲ ಎನ್ನುವ ವಾಸ್ತವವನ್ನೂ ಚೆನ್ನಾಗಿ ಅರಿತಿರ ಬೇಕು. ಪ್ರಸಕ್ತ ರಾಜಕೀಯ ವಾತಾವರಣದಲ್ಲಿ ಚುನಾವಣೆಯಲ್ಲಿ ಪರಿಣಾಮಕಾರಿಯಾಗಿ ಹೋರಾಡಬೇಕೆಂದರೂ ಬಹು ಕೌಶಲ್ಯ, ನಿಖರ ಸಿದ್ಧತೆ ಯಾವುದೇ ಪಕ್ಷಕ್ಕೂ ಬೇಕಾಗುತ್ತದೆ. ಅಲೆಯ ಮೇಲೆ ತೇಲುವ ಸ್ಥಿತಿ ಎಂದೋ ಹೊರಟು ಹೋಗಿದೆ. ಬಿಜೆಪಿಯನ್ನು ಸೋಲಿಸಬೇಕೆನ್ನುವಾಗ ಕರ್ನಾಟಕದ ಮಟ್ಟಿನಲ್ಲಿ ಬೇರೆ ವಿರೋಧ ಪಕ್ಷಗಳಿಗಿಂತ ಕಾಂಗ್ರೆಸ್ ಮೇಲೆ ಹೊಣೆ ಹೆಚ್ಚಿದೆ. ಕರ್ನಾಟಕ ಕಾಂಗ್ರೆಸ್ ನ ಅದ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಈ ಯಾತ್ರೆಯಿಂದ ಸ್ಫೂರ್ತಿಗೊಂಡು ಮತ್ತೊಂದು ಮಹಾ ಯಾತ್ರೆಯ ಚಿಂತನೆಯನ್ನು ಹರಿಯ ಬಿಟ್ಟಿದ್ದಾರೆ. ಪರ್ಯಾಯ ನೀತಿ, ತಳಹಂತದ ಸಂಘಟನಾ ಸಿದ್ಧತೆ ಇಲ್ಲದೇ ಹೋದರೆ ಇಂತಹವು ವ್ಯರ್ಥ ಕಸರತ್ತುಗಳು ಅಷ್ಟೇ.

ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ ಏಕೆ?

ಗೋಪಾಲಕೃಷ್ಣ ಹರಳಹಳ್ಳಿ



ದೇಶದಲ್ಲಿ ದಲಿತರ ಪ್ರಜ್ಞೆ ಜಾಗೃತಗೊಳ್ಳುತ್ತಿದಂತೆ ವೈಚಾರಕತೆ, ಸಮಾನತೆ, ಸೈದಾಂತಿಕ ಚಿಂತನೆಗಳು ಮುನ್ನೆಲ್ಲೆಗೆ ಬರುತ್ತಿದ್ದು, ಅಸ್ಪೃಶ್ಯತೆ, ಜಾತಿ ತಾರತಮ್ಯದ ವಿರುದ್ಧ ಬಂಡೇಳುತ್ತಿರುವ ಚಳುವಳಿ ಪ್ರಜ್ಞೆ, ಸಂಘಟನಾ ಸಾಮರ್ಥ್ಯಗಳು ವಿಸ್ತಾರಗೊಳ್ಳುತ್ತಿವೆ.

ಎಂಟು ವರ್ಷಗಳ ಬಿಜೆಪಿ–ಮೋದಿಯವರ ಅಧಿಕಾರ ಅವಧಿಯನ್ನು ಗಮನಿಸುವಂತಾದರೆ ಆರಂಭದಲ್ಲಿಯೇ ಅಸ್ಪೃಶ್ಯತಾ ಆಚರಣೆಗಳು ತೀವ್ರವಾಗಿ ಗೋಚರಿಸಿ ಕೊಂಡಿವೆ. ಬೌದಿಕ ಶಿಕ್ಷಣದಿಂದ ವಂಚನೆಗೆ ಒಳಗಾದ ರೋಹಿತ್ ವೆಮುಲ ಆತ್ಮಹತ್ಯೆ ಮಾಡಿಕೊಂಡ ದಲಿತರಿಗೆ ಉನ್ನತ ಶಿಕ್ಷಣವನ್ನು ವಂಚಿಸಲಾಗುತ್ತಿದೆ ಎಂಬುದು ಅರಿವಾಯಿತು. ಉತ್ತರ ಪ್ರದೇಶದ ಮುಖ್ಯಮಂತ್ರಿಯಾದ ಆದಿತ್ಯ ನಾಥ್‌ರು 'ಗೋಹತ್ಯೆ ತಡೆ'ಗೆ ಪಡೆಯನ್ನು ಕಟ್ಟಿ ಪೊಲೀಸ್ ನೈತಿಕಗಿರಿಯ ಪ್ರದರ್ಶನವಾಯಿತು.

ಹರಿಯಾಣದಲ್ಲಿ ಎರಡು ದಲಿತ ಶಿಶುಗಳನ್ನು ಸೀಮೆಎಣ್ಣೆ ಹಾಕಿ ಸುಟ್ಟರು, ಉತ್ತರ ಪ್ರದೇಶದ ಸಹರತ್ ಪುರದಲ್ಲಿ ಸಬ್ರಿಪುರ 180 ದಲಿತ ಕುಟುಂಬಗಳ ಮೇಲೆ ದಾಳಿ ನಡೆಯಿತು. ರಣ ಪ್ರತಾಪ್ ಸಿಂಹರ್ ಮೆರವಣಿಗೆ ನಡೆಸಿ ಸಂತ ರವಿ ದಾಸರ ಪ್ರತಿಮೆ ಅಂಬೇಡ್ಕರ್ ಮೇಲೆ ದಾಳಿ ನಡೆಸಿದರು. ಇದಕ್ಕೆಲ್ಲ ಆರ್.ಎಸ್. ಎಸ್. ಬೆಂಬಲವಾಗಿ ನಿಂತಿತು.



ಗುಜರಾತಿನ ಊನಾದಲ್ಲಿ ಹಸುವಿನ ಮಾಂಸ ಮಾರಾಟ ಮಾಡುತ್ತಿದರು, ತಿನ್ನುತ್ತಿದ್ದಾರೆ ಎಂದು ದಲಿತರ ಮೇಲೆ ದಾಳಿ ದೌರ್ಜನ್ಯ ಗುಜರಾತಿನ ಲಂಬೊಧಿರ ಗ್ರಾಮದಲ್ಲಿ ದಲಿತ ಯುವಕರು ಮೀಸೆ ಬಿಟ್ಟರೆಂದು ದಲಿತ ಯುವಕನನ್ನು ಇರಿದು ಕೊಂದರು. ಹರಿಯಾಣದ ಕುರುಕ್ಷೇತ್ರದ ಝುನಾ 15 ವರ್ಷದ ದಲಿತ ಬಾಲಕಿ ಅತ್ಯಾಚಾರ ನಡೆಯಿತು. ದಲಿತ ಯುವಕರು ಗಾರ್ಬ ನೃತ್ಯ ನೋಡಿದ್ದಕ್ಕಾಗಿ ದೌರ್ಜನ್ಯ. ಮೇಲ್ಜಾತಿಯುವರ ಬಕೆಟ್ ಮುಟ್ಟಿದ್ದಕ್ಕಾಗಿ ದಲಿತ ಮಹಿಳೆ ಗರ್ಬಿಣಿ ಸಾವಿತ್ರಿದೇವಿ ಮೇಲೆ ಹಲ್ಲೆ. 2018 ಆಗಸ್ಟ್ 10 ರೊಹಕ್ಸ್ ಎಂಬ ದಲಿತ ಯುವಕನೊಂದಿಗೆ ವಿವಾಹ ಮಾಡಿಕೊಂಡ ವಿನುತಳನ್ನು ನ್ಯಾಯಾಲಯದ ಆವರಣದಲ್ಲೆ ಗುಂಡುಹಾರಿಸಿ ಹತ್ಯೆ ಮಾಡಿದ ಘಟನೆ ಹೈದರಾಬಾದಿನಲ್ಲಿ ನಡೆಯಿತು. ತೆಲಂಗಾಣದಲ್ಲಿ ಮರ್ಯಾದೆಗೇಡು ಹತ್ಯೆ ಒಂದು ಕೊಲೆಗೆ 1 ಕೋಟಿ ಸುಪಾರಿ ನೀಡಿ ಯುವತಿಯ ತಂದೆ ಹೈದರಾಬಾದ್ ಮಿದ್ಯಾಲಗುಡನಗರ ಪರಿಶಿಷ್ಟ ಜಾತಿಗೆ ಸೇರಿದ ಯುವಕ ಪ್ರಣಯ ಮತ್ತು ಅಮೃತ್‌ವರ್ಷಿಣಿರನ್ನು ಹತ್ಯೆ ಮಾಡಲಾಯಿತು.

ಮನುವಾದಿಗಳು ದೆಹಲಿಯ ಜಂತರ್–ಮಂತರ್ ಬಳಿ ಸಂವಿಧಾನದ ಪ್ರತಿಯನ್ನು ಏಪ್ರಿಲ್–11 ರಂದು ಸುಟ್ಟರು. ಇದೇ ಸಂದರ್ಭದಲ್ಲಿ ಧರ್ಮ ಸಂಸದರು ಮೀಸಲಾತಿ ವಿರೋಧಿಸಲು ತೀರ್ಮಾನಿಸಿದರು. ಮುರ್ದಾಬಾದ್ ಎಂದು ಕೂಗಿದರು. ಲೋಕಸಭಾ ಸದಸ್ಯರಾದ ಗಣಪತಿಹೆಗಡೆ ನಾವು ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ಬೊಬ್ಬೆ ಹೊಡೆದರು. ಇತರೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಆರ್.ಎಸ್. ಎಸ್. ಸದಸ್ಯರನ್ನು ಸೇರಿಸಿದರು. ಪುಣೆ ಬಳಿ ಕೊರೆಗಾಂವ್ ವಿಜಯೋತ್ಸವದಲ್ಲಿ ಡಾ॥ ಆನಂದ್ ತೇಲ್‌ತುಂಬ್ಲೆ, ಸೇರಿದಂತೆ ಅನೇಕ ಚಿಂತಕರನ್ನು, ವಿಚಾರವಾದಿಗಳನ್ನು ಜೈಲಿಗೆ ಹಾಕಿದ್ದಾರೆ. ಕೊರೆಗಾವ್ ಯುದ್ಧದಲ್ಲಿ ದಲಿತರು ನಿರ್ವಹಸಿದ ಧೀರೊಧತ ಸ್ಮರಣೆ ಕಾರ್ಯಕ್ರಮದ ಮೇಲೆ ನಡೆಸಿದ ದಾಳಿ ಇದಾಗಿದೆ. ನಾಗಪುರದಲ್ಲಿ ಆರ್. ಎಸ್.ಎಸ್. ಮುಖಂಡ ಮೋಹನ್ ಭಾಗವತ್ ಮೀಸಲಾತಿ ಬಗ್ಗೆ ಚರ್ಚೆ ನಡೆಯಬೇಕೆಂದು ಗುಲು ಎಬ್ಬಿಸಿದ್ದರು.

ಕೋಮುವಾದಿ ಗೋಹತ್ಯೆ ಮಸೂದೆ, ದಲಿತರ ಮೀಸಲಾತಿ ಸೌಲಭ್ಯಗಳ ಬಗ್ಗೆ ತಪ್ಪು ಅಭಿಪ್ರಾಯ ಸಂವಿಧಾನದ ಭದ್ರತೆಯನ್ನು ಸಡಿಲಗೊಳಿಸಲು ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆ ಜಾರಿಗೆ ಕಾಯಿದೆ ಬದಲಿಸಿ ಸೇವಾ ವಲಯಕ್ಕೆ ತಂದರು. ಪಾರ್ಲಿಮೆಂಟ್‌ನಲ್ಲಿ ಪರಿಶಿಷ್ಟ ಜಾತಿ/ಪಂಗಡದ ದೌರ್ಜನ್ಯ ತಡೆ ಕಾಯಿದೆ. ಬಲ ಪಡಿಸುವ ಬದಲು ನ್ಯಾಯಲಯಗಳು ಮೂಲಕ ಸಡಿಲಗೊಳಿಸುವ ಪರಿಸ್ಥಿತಿ ಉಂಟಾಯಿತು. ಲೋಕಸಭೆಯಲ್ಲಿ ಮಂಡಿಸಲೇ ಇಲ್ಲಾ.

ಎರಡು ವರ್ಷಗಳ ಮೋದಿ ಬಿಜೆಪಿ ಸರ್ಕಾರ ಅನುಸರಿಸಿದ ದಲಿತ ವಿರೋಧ ನೀತಿಗಳು ದಲಿತರ ಮೇಲೆ ದೌರ್ಜನ್ಯ ತೀವ್ರವಾಗಲು ಕಾರಣೀಭೂತವಾಗಿದೆ ಎಂಬುದು ಕಟು ಸತ್ಯವಾಗಿದೆ.

ರಾಜ್ಯದಲ್ಲಿ ಇತ್ತೀಚಿನ ಎರಡು ವಾರಗಳಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿರುವ ಆಘಾತಕಾರಿ ಸಂಗತಿಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಒಂದು ವಾರದಲ್ಲಿ ನಡೆದಿರುವ 3 ಅಸ್ಪೃಶ್ಯತೆ ಆಚರಣೆ ಘಟನೆಗಳು ರಾಜ್ಯದ ಎಲ್ಲಾ ಗ್ರಾಮಗಳಿಲ್ಲಿ ಜಾತಿ ತಾರತಮ್ಯ ಬಲವಾಗಿದೆ ಎಂಬುದನ್ನು ದೃಢಕರಿಸುತ್ತದೆ.

ಭಾರತ ದೇಶ 75ನೇ ಅಮೃತ ಮಹೋತ್ಸವ ಅದ್ದೂರಿ ಸಂದರ್ಭವನ್ನು ಉಪಯೋಗಿಸಿಕೊಂಡ ದಿನಪತ್ರಿಕೆ, ಮಾಧ್ಯಮಗಳ ಮತ್ತು ಸರ್ಕಾರದ ಪ್ರಚಾರಕ ಮಾಧ್ಯಮಗಳ ಮೂಲಕ ಎಲ್ಲಿಲ್ಲದ ಡೊಂಗಿ ಪ್ರಚಾರ ಮಾಡಿ ದಲಿತರನ್ನು ಒಲೈಸಲು ಪ್ರಯತ್ನಿಸುತ್ತಿದೆ. ಕೋಲಾರ ಜಿಲ್ಲೆಯ ಮಾಲೂರಿನ ಉಳ್ಳೆರಹಳ್ಳಿಯಲ್ಲಿ ದಲಿತ ಬಾಲಕ ಚೇತನ ಗುಜ್ಜರ ಕೋಲು ಮುಟ್ಟಿದಕ್ಕೆ ಮೈಲಿಗೆ ಆಯಿತೆಂದು ಸವರ್ಣೀಯರು ಎಬ್ಬಿಸಿ ಗಲಾಟೆ, ಸಾಮಾಜಿಕ ಬಹಿಷ್ಕಾರ ಹಾಕಿದ್ದಾರೆ. ಹುಡುಗನ ದಲಿತ ಕುಟುಂಬದ ಮೇಲೆ ದೌರ್ಜನ್ಯ ನಡೆಸಿ 60 ಸಾವಿರ ದಂಡ ವಿಧಿಸಲು ನಿರ್ಧರಿಸಿರುವುದು ದಂಡ ನೀಡದಿದ್ದರೆ ಊರು ಬಿಟ್ಟು ತೊಲಗಬೇಕೆಂದು ಆಜ್ಞೆಪಿಸಿರುವುದು ದೇಶದ ಜಾತಿ ವ್ಯವಸ್ಥೆ ಎಷ್ಟು ಜಟಿಲವಾಗಿದೆ ಎಂಬುದನ್ನು ಸಾಭೀತು ಮಾಡಿದೆ. ಕೂಲಿ ಮಾಡುವ ಈ ದಲಿತ ಪರ ಮಾತನಾಡಲು ಯಾವ ದೇವರು ಬರಲಿಲ್ಲ ಎಂಬುದನ್ನು ಪ್ರಜ್ಞಾವಂತ ಅರಿತುಕೊಳ್ಳಬೇಕು.



ಅಕ್ಟೋಬರ್ ತಿಂಗಳು 2 ರಂದು ಕೋಲಾರ ಜಿಲ್ಲೆಯ ಬಂಗಾರಪೇಟೆ ಗುಟ್ಟೂರು ಮತ್ತು ದೊಡಪುರ ಗ್ರಾಮದ ನಡುವೆ ಇರುವ ಪೆದ್ದಪಲ್ಲಿ ಗಂಗಮ್ಮ ದೇವಸ್ಥಾನ ಪೂಜೆ ಸಲ್ಲಿಸಲು ಹೋದ ಗುಟ್ಟೂರಿನ ದಲಿತ ಮುನಿರಾಜ್ ಕುಟುಂಬದ ಮೇಲೆ ದೌರ್ಜನ್ಯ ನಡೆಸಿ ಮುನ್ನಿರಾಜ ತಲೆಗೆ ಮಾರಕ ಅಸ್ತ್ರಗಳಿಂದ ದೌರ್ಜನ್ಯ ನಡೆಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕ್‌ನಲ್ಲಿರುವ ಕೆಂಪದೇವನಹಳ್ಳಿಯಲ್ಲಿ ಗುರುವಾರ ರಾತ್ರಿ 9 ಗಂಟೆ ಸಮಯದಲ್ಲಿ ದಲಿತ ಚಾಲಕನನ್ನು ಕಂಬಕ್ಕೆ ಕಟ್ಟಿ ದೌರ್ಜನ್ಯ ಮಾಡಲಾಗಿದೆ.

ಕೋಲಾರ ಜಿಲ್ಲೆಯ ದಾನವಹಳ್ಳಿ ದಸರ ಉತ್ಸವ ಊರಿನ ಗ್ರಾಮ ದೇವತೆ ಕಾಟೇರಮ್ಮ ಮತ್ತು ಗಂಗಮ್ಮ ದೇವಿಯರ ದಸರ ಮಹೋತ್ಸವ ಈ ಸಂದರ್ಭದಲ್ಲಿ ದೇವರ ಮೆರವಣಿಗೆ ದಲಿತರ ಕೇರಿಗೆ ಬರುತ್ತಿರಲಿಲ್ಲ. ಬಂದರು ಹೆಚು ಸಮಯವಿರುತ್ತಿರಲಿಲ್ಲ ಇದನ್ನು ಊರಿನ ದಲಿತರು ದೇವರು ಕೇರಿಗೆ ಬರಬೇಕೆಂದು ಒತ್ತಾಯಿಸಿದಾಗ ಮೇಲ್ಜಾತಿ ಜನರು ಇಟ್ಟಿಗೆ ಕಲ್ಲಿನಿಂದ ಭಾರಿಸಿ ದೊಣ್ಣೆಗಳಿಂದ ದಲಿತರ ಕೇರಿಗೆ ನುಗ್ಗಿ ದಾಂದಲೆ ನಡೆಸಿದ್ದಾರೆ. ಪೊಲೀಸರು ಊರಿಗೆ ಬಂದಾಗ ಪೂಜಾರಿ ಮೇಲೆ ದೇವರು ಬಂದಿದೆ ದೇವರನ್ನು ನನ್ನ ಮೆರವಣಿಗೆ ನಿಲ್ಲಿಸಿದರಲ್ಲೊ ಎಂದು ಕೂಗಾಡಿತೆ ಹೊರತು ದಲಿತರ ಕೇರಿ ಹೋಗಿ ಎಂದು ದೇವರು ಹೇಳಲೇ ಇಲ್ಲ.

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಮುಳಕಟ್ಟಮ್ಮ ದೇವಸ್ಥಾನದ ಪೂಜಾರಿ ದಲಿತ ಅನಿಲ್ ರಾಜ್ ಕುಟುಂಬಕ್ಕೆ ಪೂಜೆ ಮಾಡಿಕೊಡುವುದಿಲ್ಲವೆಂದು ಪೂಜೆ ಸಾಮಾನು ಹೊರಗಿಟ್ಟಿದ್ದಾರೆ. ದೇವಸ್ಥಾನದ ಸಮಿತಿಯವರನ್ನು ಕೇಳು ಅವರು ಹೇಳಿದ್ದಾರೆ ಎಂದಿದ್ದಾರೆ. ಊರಿನ ಮೇಲ್‌ಜಾತಿಯವರೇ ಇರುವ ಕಮಿಟಿಯ ಕುಮಕ್ಕು ನೀಡಿರುವುದು ಸ್ಪಷ್ಟವಾಗಿದೆ.

ಸರ್ಕಾರದ ದಾಖಲೆಗಳಲ್ಲಿ ದೌರ್ಜನ್ಯದ ಕುರಿತು ಏನು ಹೇಳುತ್ತದೆ

ಕೇಂದ್ರ ಸರ್ಕಾರ ಅಧೀನದಲ್ಲಿರುವ ನ್ಯಾಷನಲ್ ಕ್ರೈಮ್ ರೆಕಾರ್ಡ್ ಬ್ಯೂರೋ (NCRB) ಪ್ರಕಾರ 2021 ವಿವರದಂತೆ ಪರಿಶಿಷ್ಟ ಜಾತಿ ಶೇ. 1.2 ಮತ್ತು ಪರಿಶಿಷ್ಟ ಪಂಗಡ ಶೇ. 6.4% ರಷ್ಟು ದೌರ್ಜನ್ಯಗಳು ನಡೆದಿವೆ. ಬಿಜೆಪಿ ಯೋಗಿಂದ್ರನಾಥ್ ಮುಖ್ಯಮಂತ್ರಿಯಾಗಿರುವ ಉತ್ತರ ಪ್ರದೇಶದಲ್ಲಿ ಮತ್ತು ಮಧ್ಯಪ್ರದೇಶದಲ್ಲಿ ದಲಿತರ ಮೇಲೆ ಹೆಚ್ಚಾಗಿ ದೌರ್ಜನ್ಯ ನಡೆದಿವೆ ಎಂದು ತಿಳಿಸುತ್ತಿದೆ. ಉತ್ತರ ಪ್ರದೇಶ ಶೇ. 25.82% ಅತಿ ಹೆಚ್ಚು ಅಸ್ಪೃಶ್ಯತೆ, ಜಾತಿ ತಾರತಮ್ಯ ಕೇಸುಗಳು ದಾಖಲಾಗಿವೆ, ರಾಜಸ್ಥಾನ 14.7%, ಮಧ್ಯಪ್ರದೇಶ 14.1%. ಇದಲ್ಲದೆ ಎಸ್‌ಸಿ ವಿರುದ್ಧದ ದೌರ್ಜನ್ಯಗಳು 2021 ರಲ್ಲಿ 6.4% ರಷ್ಟು ಎಂದು ಬಹಿರಂಗ ಪಡಿಸುತ್ತವೆ. ಮಧ್ಯಪ್ರದೇಶ 29.8% ಅತಿಹೆಚ್ಚು ಪ್ರಕರಣಗಳು, ರಾಜಸ್ಥಾನ 24%, ಒಡಿಶಾ 7.6% ಅತ್ಯಾಚಾರ(ರೇಪ್)ಕ್ಕೆ ಒಳಗಾದವರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮಹಿಳೆಯರು. ಪರಿಶಿಷ್ಟ ಜಾತಿ ಮಹಿಳೆಯರು (ಸಣ್ಣ ವಯಸ್ಸಿನವರು ಸೇರಿ) ಶೇ. 7.64. ಪರಿಶಿಷ್ಟ ಪಂಗಡದಲ್ಲಿ ಶೇ.15% ಆದಿವಾಸಿ ಮಹಿಳೆಯರು. ವರದಿಯು ದಲಿತ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳ ವಿವರವಾದ ಅಂಕಿಅಂಶಗಳನ್ನು ಸಹ ಮಂಡಿಸಿದೆ. ಅತ್ಯಾಚಾರದ ಪ್ರಯತ್ನ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಅಪ್ರಾಪ್ತ ವಯಸ್ಕರ ಅಪಹರಣದ ಪ್ರಕರಣಗಳು & ಮಹಿಳೆಯರಲ್ಲಿ 16.8% ಮತ್ತು ಮಹಿಳೆಯರಲ್ಲಿ 26.8% ರಷ್ಟಿದೆ.

ಎಸ್.ಸಿ. ಎಸ್.ಟಿ. ಬಲಪಡಿಸುವ ರಾಷ್ಟ್ರೀಯ ಒಕ್ಕೂಟ (POA) ಕಾಯಿದೆ (NCSPA)

ಇದು 500 ಕ್ಕೂ ಹೆಚ್ಚು ದಲಿತರು ಮತ್ತು ಆದಿವಾಸಿಗಳು, ನಾಗರೀಕ ಸಮಾಜದ ಸಂಘಟನೆಗಳು, ಸಮುದಾಯಗಳು, ಮುಖಂಡರು ಮತ್ತು ಕಾರ್ಯಕರ್ತರು ಒಳಗೊಂಡ ವೇದಿಕೆಯಾಗಿದೆ. ಈ ವೇದಿಕೆ NCRB 2021 ವರದಿಯನ್ನು ವಿಶ್ಲೇಷಿಸಿದೆ. ಭಾರತದಲ್ಲಿ ಸಂವಿಧಾನದ ರಕ್ಷಣೆ, ಸಂವಿಧಾನದ ಮಾರ್ಗಸೂಚಿ ನಿಬಂಧನೆಗಳು ಇದ್ದಗ್ಯೂ ದೇಶದ ದಲಿತರ ಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಿದೆ. ಜಾತಿ ಪದ್ದತಿಗೆ ಬಲಿ ಪಶುವಾಗಿರುವುದು ಮಾತ್ರವಲ್ಲದೆ–ಸಾಮಾಜಿಕ ತಾರತಮ್ಯ ಮತ್ತು ಸಾಮಾಜಿಕ ಬಹಿಷ್ಕಾರವನ್ನು ಎದಿರುಸುತ್ತಿದೆ. ದೇಶದಲ್ಲಿ ದಲಿತ ಅಪ್ರಾಪ್ತ ಬಾಲಕಿಯೊಬ್ಬಳು ಮಲವಿಸರ್ಜನೆಗೆ ಹೋದಾಗ ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಹತ್ಯೆಗೈದು ಆಕೆ ಮರಳಿ ಬಾರದೆ ಇರುವ ಪ್ರಕರಣ ನಮ್ಮ ಕಣ್ಣ ಮುಂದಿದೆ.

ಬಾಯರಿಕೆ ನೀಗಿಸಿಕೊಳ್ಳಲು ಶಾಲಾ ಮುಖ್ಯೋಪಾದ್ಯಯರ ಮಡಕೆಯನ್ನು ಮುಟ್ಟಿದಕ್ಕೆ ದಲಿತ ಬಾಲಕ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹಿಂದಿನ ವರ್ಷದ ಪ್ರಕರಣಗಳು ಸೇರಿದಂತೆ 2021 ರ ಅಂತ್ಯದ ವೇಳೆಗೆ ಎಸ್.ಸಿ.ಗಳ ಮೇಲಿನ ಒಟ್ಟು 70,818 ದೌರ್ಜನ್ಯ ಪ್ರಕರಣಗಳು ತನಿಖೆ ಬಾಕಿ ಉಳಿದಿದೆ ಎಂದು ವರದಿ ತೋರಿಸುತ್ತಾರೆ. ಅದೇ ರೀತಿ ಎಸ್.ಟಿ.ಗಳ ಮೇಲಿನ 12,159 ದೌರ್ಜನ್ಯ ಪ್ರಕರಣಗಳು ತನಿಖೆಗೆ ಬಾಕಿ ಇದ್ದು ಒಟ್ಟು 2,63,512, ಎಸ್.ಸಿ. ಗಳ ಮೇಲಿನ ದೌರ್ಜನ್ಯ ಪ್ರಕರಣಗಳು. ನ್ಯಾಯಲಯದಲ್ಲಿ ವಿಚಾರಣೆಗೆ ಬಂದಿವೆ. ಭಾರತೀಯ ದಂಡ ಸಂಹಿತೆಯ (IPC) ಜೊತೆಯಲ್ಲಿ ಎಸ್‌ಸಿ ಮತ್ತು ಎಸ್‌ಟಿ ಗಳ (POA) ಕಾಯಿದೆಯಡಿಯಲ್ಲಿ ಶಿಕ್ಷೆಯ ಶೇಕಡಾವಾರು ಎಸ್.ಸಿ. ಗಳಿಗೆ 36.0% ಮತ್ತು ಎಸ್‌ಟಿ ಗಳಿಗೆ 28.1% ನಲ್ಲಿ ಉಳಿಯಿತು. ವರ್ಷಾಂತದಲ್ಲಿ ಎಸ್.ಸಿ.

ಪುಟ 14 ಕ್ಕೆ

ಕನ್ನಡ ಎಂದರೆ ಜೀವ ಕಣ, ಭಾವ ಕಣ

ಚೆಲುವ ಕನ್ನಡ ನಾಡಿನ ಉದಯಕ್ಕಾಗಿ



ಸಿ. ಸಿದ್ದಯ್ಯ

ಸ್ವಾತಂತ್ರ್ಯ ಗಳಿಸಿದ ಬಳಿಕ ಪ್ರಮುಖವಾಗಿ ಎದುರಿಸಿದ ಒಂದು ಬಹು ಮುಖ್ಯ ಪ್ರಶ್ನೆ ಎಂದರೆ:

ಒಂದು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ರೂಪಿಸಬೇಕಿದ್ದರೆ ಭಾಷೆ ಯಾವುದಿರ ಬೇಕು? ಅಂತಹ ವ್ಯವಸ್ಥೆಯನ್ನು ರೂಪಿಸಲು ಅದು ಜನರಿಗೆ ಪರಕೀಯವಾದ ಭಾಷೆಯ ಮೂಲಕ ಸಾಧ್ಯವಿರಲಿಲ್ಲ. ಭಾಷಾವಾರು ಪ್ರಾಂತ ರಚನೆ ಸಮಾಜದ ಪ್ರಜಾಪ್ರಭುತ್ವೀಕರಣಕ್ಕೆ ಒಂದು ಪ್ರಮುಖ ಹೆಜ್ಜೆಯಾಗಿತ್ತು. ಬ್ರಿಟೀಷರ ಆಡಳಿತದಲ್ಲಿ ಆಡಳಿತಾತ್ಮಕ ಅನುಕೂಲಕ್ಕಾಗಿ ಪ್ರಾಂತಗಳ ರಚನೆಗಳಾಗಿದ್ದವು. ಈ ರೀತಿಯ ಬಹುಭಾಷಾ ಜನರನ್ನು ಹೊಂದಿರುವ ಪ್ರಾಂತಗಳನ್ನು ಪುನರ್ ಸಂಘಟಿಸಿ ಭಾಷಾವಾರು ಪ್ರಾಂತಗಳನ್ನು ರಚಿಸಬೇಕೆಂದು ಕಮ್ಯೂನಿಸ್ಟರು ಹೋರಾಡಿದರು. ಶಿಕ್ಷಣ, ಆಡಳಿತ ಇತ್ಯಾದಿಗಳು ಜನರ ಭಾಷೆಯಲ್ಲಿರುವ ಭಾಷಾವಾರು ಪ್ರಾಂತ ರಚನೆಯೇನೂ ಸಮಾಜವಾದಿ ಬೇಡಿಕೆಯಾಗಿರಲಿಲ್ಲ. ಮೂಲಭೂತವಾಗಿ ಅದು ಒಂದು ಪ್ರಜಾಪ್ರಭುತ್ವ ಬೇಡಿಕೆಯಾಗಿತ್ತು. ಸ್ವಾತಂತ್ರ್ಯವನ್ನು ಕ್ರೋಡೀಕರಿಸಿ, ಭಾರತದ ಸ್ವರೂಪವನ್ನು ಪುನರ್ ರಚಿಸಲು, ಪ್ರಜಾಪ್ರಭುತ್ವವನ್ನು ಬಲಪಡಿಸಲು ಅದು ಅಗತ್ಯವಾಗಿತ್ತು.

ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ಪರವಾಗಿತ್ತು. ಆದರೆ, ಸ್ವಾತಂತ್ರ್ಯಾ ನಂತರ ಅದು ತನ್ನ ನಿಲುವು ಬದಲಿಸಿತು. ನೆಹರೂರವರು 'ಭಾಷಾವಾರು ಪ್ರಾಂತಗಳ ರಚನೆ ಭಾರತದ ವಿಘಟನೆಯ ಕ್ರಮ' ಎಂದು ಹೇಳುತ್ತಾ ಅದನ್ನು 'ಬಾಲ್ಕನೈಷನ್' ಎಂದು ಕರೆದರು. (ಯೂರೋಪ್ ಖಂಡದಲ್ಲಿನ ಬಾಲ್ಕನೈಷನ್ ಪ್ರದೇಶದಲ್ಲಿ ಭಾಷೆಗಳ ಆಧಾರದಲ್ಲಿ ಸಣ್ಣ ಸಣ್ಣ ದೇಶಗಳಿವೆ). ಕಮ್ಯೂನಿಸ್ಟರು ನೆಹರೂರವರ ವಾದವನ್ನು ಒಪ್ಪಲಿಲ್ಲ. 'ಭಾಷಾವಾರು ಪ್ರಾಂತಗಳ ರಚನೆಯು ಸ್ವಾತಂತ್ರ್ಯ ಚಳುವಳಿಯ ಪ್ರತಿಜ್ಞೆಯ ಜಾರಿ. ಪ್ರಜಾಪ್ರಭುತ್ವ, ಗಣತಂತ್ರದ ರಚನೆಯ ಪ್ರಕ್ರಿಯೆ ಇದು. ಇದನ್ನು ಜಾರಿ ಮಾಡಲೇಬೇಕು' ಎಂದು ಕಮ್ಯೂನಿಸ್ಟರು ವಾದಿಸಿದರು. ಸ್ವಾತಂತ್ರ್ಯಾ ನಂತರ ಶಿಕ್ಷಣ, ಆಡಳಿತ, ಸಂವಹನ ಇತ್ಯಾದಿಗಳಲ್ಲಿ ಜನರು ಅವರವರ ಭಾಷೆಯನ್ನು ಬಳಸುವಂತಿರುವುದರ ಅಗತ್ಯತೆಯನ್ನು ಎತ್ತಿ ತೋರಿಸಿದರು.

ಸ್ವತಂತ್ರ ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿಯೇ ವಿಶಾಲಾಂಧ್ರದ ಪ್ರಶ್ನೆಯು ಎದ್ದು ಬಂದಿತು. ಈ ಚಳುವಳಿಯಲ್ಲಿ ಕಮ್ಯೂನಿಸ್ಟರು ನೇತೃತ್ವದ ಪಾತ್ರ ವಹಿಸಿದ್ದರು. ವಿಶಾಲಾಂಧ್ರದ ಚಳುವಳಿಯು ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನು ಮುಂಚೋಣಿಗೆ ತಂದಿತು. ಕೇಂದ್ರ ಸರ್ಕಾರ ಆರಂಭದಲ್ಲಿ ವಿಶಾಲಾಂಧ್ರದ ರಚನೆಗೆ ವಿರೋಧವಾಗಿತ್ತು. ಜನ ಸಮೂಹದ ಸಾಮೂಹಿಕ ಹೋರಾಟಗಳು ಮೂಡಿಬಂದವು. ಆಂಧ್ರ ರಚನೆಗಾಗಿ ಕಾಂಗ್ರೆಸ್ ಮುಖಂಡರಾಗಿದ್ದ ಪೊಟ್ಟಿ ಶ್ರೀರಾಮುಲು ಅವರು ಈ ಉದ್ದೇಶಕ್ಕಾಗಿ ಉಪವಾಸ ಸತ್ಯಾಗ್ರಹ ನಡೆಸಿ ಈ ಹೋರಾಟದಿಂದಲೇ ಮರಣ ಹೊಂದಿದರು. ಇದು ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ತಂದಿತು. ಕಾಂಗ್ರೆಸ್ ಪಕ್ಷದ ಮುಖಂಡರೂ, ಕಾರ್ಯಕರ್ತರೂ ವಿಶಲಾಂಧ್ರ ಚಳುವಳಿಗೆ ಸೇರಿದರು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಗಳ ಪುನರ್ ರಚನಾ ಆಯೋಗವನ್ನು ರಚಿಸಿತು. ಈ ಸಮಿತಿಯು ಸ್ಥೂಲವಾಗಿ ಭಾಷಾವಾರು ಪ್ರಾಂತ ರಚನೆಗೆ ಶಿಫಾರಸ್ಸು ಮಾಡಿತು. ಇಡಿಯಾಗಿ ಆಂಧ್ರದ ಎಲ್ಲಾ ಪ್ರದೇಶಗಳನ್ನು ಅದರಲ್ಲಿ ಸೇರಿಸುವ ಶಿಫಾರಸ್ಸು ಇರಲಿಲ್ಲ. ವಿಶಾಲಾಂಧ್ರದಲ್ಲಿ ಆದಂತೆ ಕೇರಳದಲ್ಲಿಯೂ ಕಾಂಗ್ರೆಸ್ ಅದೇ ನಿಲುವು ತಳೆಯಿತು. ಆಂಧ್ರದಲ್ಲಿ ಪಿ. ಸುಂದರಯ್ಯ ಅವರು ತೆಲುಗು ಭಾಷಿಕ ಪ್ರದೇಶಗಳೆಲ್ಲಾ ಒಂದುಗೂಡಿ ವಿಶಾಲಾಂಧ್ರ ಏಕಾಗಬೇಕು ಎಂದು ವಿವರಿಸಿ ಅತ್ಯುತ್ತಮವಾದ ಪುಸ್ತಕವೊಂದನ್ನು ಬರೆದರು. ಐಕ್ಯ ಕೇರಳದ ಅಗತ್ಯದ ಬಗೆಗೆ ಇ.ಎಂ.ಎಸ್ ನಂಬೂದರಿ ಪಾದ್ ಅವರು ಒಂದು ಕಿರುಹೊತ್ತಿಗೆ ಬರೆದರು. ವಿಶಾಲಾಂಧ್ರದ ಚಳುವಳಿ ಗೆಲುವು ಸಾಧಿಸಿದಂತೆ ಕರ್ನಾಟಕದ ಏಕೀಕರಣ ಸೇರಿದಂತೆ ದೇಶಾದ್ಯಂತ ಭಾಷಾವಾರು ಪ್ರಾಂತಗಳ ರಚನೆಗಾಗಿ ಸಾಮೂಹಿಕ ಚಳುವಳಿಗಳು ಎದ್ದು ಬಂದವು. ಈ ಎಲ್ಲಾ ಚಳುವಳಿಗಳಲ್ಲಿಯೂ ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಅವಿಭಜಿತ ಕಮ್ಯೂನಿಸ್ಟ್ ಪಕ್ಷ ಪಾತ್ರ ವಹಿಸಿದೆ.

ಭಾಷಾ ಜನಾಂಗಗಳನ್ನು ಪ್ರತಿನಿಧಿಸುವ ಹತ್ತು ಪ್ರಮುಖ ಭಾಷಾವಾರು ರಾಜ್ಯಗಳಿವೆ. ಇದಲ್ಲದೆ ಈಶಾನ್ಯ ಪ್ರದೇಶದ ಸಣ್ಣ ಸಣ್ಣ ರಾಜ್ಯಗಳಿವೆ. ಈ ರೀತಿಯ ಭಾಷಾವಾರು ರಾಜ್ಯ ರಚನೆಯಿಂದಾಗಿ ಅವು ಸಣ್ಣದಿರಲಿ ಅಥವಾ ದೊಡ್ಡದಿರಲಿ ಅವುಗಳ ಬೆಳವಣಿಗೆಗೆ ಸಮಾನ ಅವಕಾಶಗಳನ್ನು ಒದಗಿಸುತ್ತದೆ. ಹೆಚ್ಚು ಜನರು ಮಾತನಾಡುವ ಭಾಷೆಯೇ ಇರಲಿ, ಕಡಿಮೆ ಜನರು ಮಾತನಾಡುವ ಭಾಷೆಯೇ ಇರಲಿ ಅವನ್ನು ಸಮಾನವಾಗಿ ಪರಿಗಣಿಸುವಂತಾಗಿದೆ. ಭಾರತದ ಎಲ್ಲಾ ಭಾಷೆಗಳೂ ಸಮಾನ ಎನ್ನುವ ನೀತಿಯ ಕಡೆಗೆ ಸಾಗಿದಂತಾಗುತ್ತದೆ. ಭಾಷಾವಾರು ಪ್ರಾಂತ್ಯಗಳಲ್ಲಿ ಸಹಜವಾಗಿ ಭಾಷಾ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ಇಂತಹ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಬೇಕು.

ಕರ್ನಾಟಕದ ಏಕೀಕರಣ ಚಳುವಳಿಯಲ್ಲಿ ಕಮ್ಯೂನಿಸ್ಟರು:

1905 ರಲ್ಲಿ ಬಂಗಾಳದ ವಿಭಜನೆಯ ವಿರುದ್ಧ ನಡೆದ ಹೋರಾಟ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಗೆ ನಾಂದಿಯಾಯಿತು. ಬಂಗಾಳದ ಚಳುವಳಿಯ ಪರಿಣಾಮ ಕರ್ನಾಟಕದ ಜನತೆಯ ಮೇಲೂ ಆಯಿತು. ಆಲೂರು ವೆಂಕಟರಾಯರು ಏಕೀಕರಣ ಚಳುವಳಿಯ ಪ್ರಮುಖ ರುವಾರಿ.

1905 ರಿಂದ 1915 ರವರಗೆ ಕನ್ನಡಿಗರೆಲ್ಲರ ಐಕ್ಯತೆಯನ್ನು ಸಾಧಿಸುವುದರ ಸಲುವಾಗಿ ಇಲ್ಲಿನ ಕಮ್ಯೂನಿಸ್ಟರು ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಿದರು. ಐಕ್ಯ ಕರ್ನಾಟಕದ ಸಾಧನೆಯ ಕನಸನ್ನು ನನಸು ಮಾಡಲು ಕಮ್ಯೂನಿಸ್ಟರು 1917 ರಲ್ಲಿ ಮಾಂಟೇಗೋ ಕ್ಲೆಂಫೋರ್ಡ್ ಸುಧಾರಣಾ ಸಮಿತಿಗೆ ಕರ್ನಾಟಕ ಏಕೀಕರಣವಾಗಬೇಕು ಎಂದು ಮನವಿ ಸಲ್ಲಿಸಿದರು.. 1915 ರಲ್ಲಿ ಕನ್ನಡ ಪರಿಷತ್ತು ಸ್ಥಾಪನೆಯಾದಾಗಿನಿಂದ ಈ ಚಳವಳಿ ಮತ್ತಷ್ಟು ಹೆಚ್ಚಾಗಿ ಬೆಳೆಯಿತು. ಭಾರತದ ರಾಷ್ಟ್ರೀಯ ಹೋರಾಟದ ಅಂಗವಾಗಿಯೇ ಭಾಷಾವಾರು ಪ್ರಾಂತ ರಚನೆಯ ಹೋರಾಟವೂ ಬೆಳೆಯಿತು. 1920–21 ರಲ್ಲಿ ಅಸಹಕಾರ ಚಳುವಳಿ ನಡೆದಾಗ ಇದು ಇನ್ನಷ್ಟು ಬಲಗೊಂಡಿತು. ಪರಿಣಾಮವಾಗಿ ಭಾಷಾವಾರು ಆಧಾರದ ಮೇಲೆ ಕಾಂಗ್ರೆಸ್ ಪಕ್ಷ ಪ್ರಾಂತ ಸಮಿತಿಗಳನ್ನು ರಚಿಸಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಂಸ್ಥೆಯೂ ಆಗ ಸ್ಥಾಪನೆಯಾಯಿತು. 1928 ರಲ್ಲಿ ನೆಹರೂ ಸಮಿತಿಯು ಕರ್ನಾಟಕ ಪ್ರಾಂತವಾಗಬೇಕೆಂದು ಸ್ಪಷ್ಟವಾಗಿ ತಿಳಿಸಿತು. 1937 ರಲ್ಲಿ ಬೊಂಬಾಯಿ ಮತ್ತು ಮದ್ರಾಸ್ ಅಸೆಂಬ್ಲಿಗಳಲ್ಲಿ ಈ ಪ್ರಾಂತಗಳ ರಚನೆಯಾಗಬೇಕೆಂಬ ನಿರ್ಣಯಗಳಾದವು.

1948 ರಲ್ಲಿ ಧರ್ ಸಮಿತಿಯ ನೇಮಕವಾಯಿತು. 'ಮೈಸೂರು ತನ್ನೊಡನೆ ಇತರ ಪ್ರದೇಶಗಳನ್ನು ಸೇರಿಸಿಕೊಳ್ಳಲು ಸಿದ್ಧವಾಗಿದ್ದರೆ ಎಲ್ಲ ಪ್ರದೇಶಗಳನ್ನು ಒಟ್ಟು ಸೇರಿಸಿ ಪ್ರತ್ಯೇಕ ಪ್ರಾಂತ ರಚನೆ ಮಾಡಲು ಸಾಧ್ಯವಿತ್ತು. ಮೈಸೂರು ಸಂಸ್ಥಾನವು ಕರ್ನಾಟಕದಲ್ಲಿ ವಿಲೀನಗೊಳ್ಳಲು ತಯಾರಿಲ್ಲವೆಂದು ತೋರುವುರಿಂದ ಕೇಂದ್ರದ ಭಾಗಗಳನ್ನು ಭಾರತೀಯ ಸಂಸ್ಥಾನದಲ್ಲಿ ಸೇರಿಸಲು ಕೇಂದ್ರ ಸರಕಾರ ಸಿದ್ಧವಾಗಿದಿಯೇ ಎಂಬುದನ್ನು ನಾವು ಹೇಳಲು ಸಾಧ್ಯವಿಲ್ಲ' ಎಂದು 1980 ರ ಡಿಸೆಂಬರ್ 10 ರಂದು ಈ ಸಮಿತಿ ವರದಿ ಮಾಡಿತು. ಇದನ್ನು ಕನ್ನಡ ಜನತೆ ತೀವ್ರವಾಗಿ ವಿರೋಧಿಸಿ ಪ್ರತಿಭಟಿಸಿದರು.

ನಂತರ ಕಾಂಗ್ರೆಸ್ ಜವಹರಲಾಲ್ ನೆಹರೂ, ವಲ್ಲಭಾಯ್ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ (ಜೆವಿಪಿ) ಸಮಿತಿಯೂ ಕರ್ನಾಟಕದ ಬೇಡಿಕೆಯನ್ನು ನಿರಾಕರಿಸಿತು. ಭಾಷಾವಾರು ಪ್ರಾಂತವು ರಚನೆಯಾಗಬೇಕೆಂದು ಒತ್ತಾಯಪಡಿಸುವುದಾದರೆ ಸಂಬಂಧಪಟ್ಟ ಪಕ್ಷಗಳು ಒಮ್ಮತಾಭಿಪ್ರಾಯಕ್ಕೆ ಬಂದರೆ ಮಾನ್ಯ ಮಾಡಬಹುದು ಎಂದು ಅದು ಅಭಿಪ್ರಾಯಪಟ್ಟಿತು. ಕೇಂದ್ರ ಸರಕಾರದ ಇಂತಹ ಧೋರಣೆಯಿಂದಲೂ, ಕರ್ನಾಟಕ ಕಾಂಗ್ರೆಸ್ನವರ ವರ್ತನೆಯಿಂದಲೂ ಕರ್ನಾಟಕದ ಹಲವಾರು ಕಾರ್ಯಕರ್ತರು ಬೇಸತ್ತು ಕಾಂಗ್ರೆಸ್ಸಿಗೇ ರಾಜೀನಾಮೆ ಕೊಟ್ಟು ಹೊರಬಂದು ಏಕೀಕರಣ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿದರು.

1951 ರಲ್ಲಿ ಉಳ್ಳಾಲದಲ್ಲಿ ಸೇರಿದ್ದ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಚಳುವಳಿಯನ್ನು ನಡೆಸುವ ನಿರ್ಣಯವನ್ನು ಕೈಗೊಂಡಿತು. ಎಸ್.ಆರ್. ಭಟ್ ಬರೆದ 'ಒಂದೇ ಕರ್ನಾಟಕ ಇಂದೇ ರಚನೆಯಾಗಲಿ' ಎಂಬ ಕಿರುಹೊತ್ತಿಗೆಯನ್ನು ಕಮ್ಯೂನಿಸ್ಟ್ ಪಕ್ಷವು ಪ್ರಕಟಿಸಿತು. ಕರ್ನಾಟಕಕ್ಕೆ ಸೇರಬೇಕಾದ ಕೆಲವು ಪ್ರದೇಶಗಳಿಗೆ ಸಂಬಂಧಿಸಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸಭಾ ಸದಸ್ಯ ಬಿ.ವಿ. ಕಕ್ಕಿಲ್ಲಾಯ ಅವರು ಕಾಮ್ರೇಡ್ ಪಿ. ಸುಂದರಯ್ಯನವರ ಮೂಲಕ ಬಳ್ಳಾರಿ ಜಿಲ್ಲೆಯ ಕನ್ನಡ ಭಾಗಗಳಾದ ಕೊಳ್ಳೇಗಾಲ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಪೂರ್ಣವಾಗಿ ಕರ್ನಾಟಕಕ್ಕೆ ಸೇರುವಂತೆ ಆಂಧ್ರದ ಸಂಸದರನ್ನು ಮನವೊಲಿಸಲು ಪ್ರಭಾವ ಬೀರಿದ್ದರು. ರಾಜ್ಯದ ಎಲ್ಲಾ ಭಾಗಗಳಲ್ಲೂ ಕಮ್ಯೂನಿಸ್ಟರು ಏಕೀಕರಣದ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಹುಬ್ಬಳ್ಳಿ ಪ್ರತಿಭಟನೆ : ಬಂಧಿತರಲ್ಲಿ ಕಮ್ಯೂನಿಸ್ಟ್ ನಾಯಕರು:

ಜನವರಿ 1953 ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ವಿರುದ್ಧ ತೀರ್ಮಾನ ಮಾಡಿತು. ಇದರ ವಿರುದ್ಧವಾಗಿ 1953 ರ ಮಾರ್ಚ್ ತಿಂಗಳಲ್ಲಿ ಅದರಗುಂಚಿ ಶಂಕರಗೌಡರು ಆಮರಣಾಂತ ಉಪವಾಸ ಆರಂಭಿಸಿದರು. 1953 ರ ಎಪ್ರಿಲ್ 19 ರಂದು ಹುಬ್ಬಳ್ಳಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ ಸೇರಿದ್ದಾಗ, ಕಾಂಗ್ರೆಸ್ ನಾಯಕರು ರಾಜೀನಾಮೆ ಕೊಡಬೇಕೆಂದು 25 ಸಾವಿರದಷ್ಟು ಜನರು ಅಲ್ಲಿ ಪ್ರತಿಭಟನೆ ಮಾಡಿದರು. ಜನರನ್ನು ಎದುರಿಸಲಾಗದ ಕಾಂಗ್ರೆಸ್ ನಾಯಕರು ಪೊಲೀಸರನ್ನು ಬಳಸಿ ಗೋಲೀಬಾರು ನಡೆಸಿದರು. ಜನತೆಯ ಒತ್ತಡಕ್ಕೆ ಮಣಿದು 1954 ರೊಳಗೆ ರಾಜ್ಯ ರಚನೆ ಆಗದಿದ್ದರೆ ಕಾಂಗ್ರೆಸ್ ಶಾಸಕರು ರಾಜೀನಾಮೆ ಕೊಡುವುದೆಂದು ಕೆ.ಪಿ.ಸಿ.ಸಿ. ತೀರ್ಮಾನಿಸಿತು. 'ಹುಬ್ಬಳ್ಳಿ ಗಲಭೆ' ಎಂದು ಪ್ರಸಿದ್ಧವಾದ ಪ್ರಕರಣದಲ್ಲಿ ಸ್ಥಾನಬದ್ಧತೆಯಡಿಯಲ್ಲಿ ಬಂಧಿತರಾದವರ ಪೈಕಿ ಕಾಮ್ರೇಡ್ ಎನ್.ಕೆ. ಉಪಾಧ್ಯಾಯ, ಎ.ಜೆ. ಮುಧೋಳ, ಬಿ.ಎಸ್. ಧಾರವಾಡಕರ್, ಸಿದ್ದಪ್ಪ ಕಮ್ಮಾರ್ ಮತ್ತು ಮುಲ್ಲಾ ಮುಂತಾದ 13 ಜನ ಕಮ್ಯೂನಿಸ್ಟ್ ನಾಯಕರಿದ್ದರು.

ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ (ಅಕರಾನಿ) ಪರಿಷತ್ ಸ್ಥಾಪನೆ:

ಹುಬ್ಬಳ್ಳಿಯ ಶ್ರೀ ಮಹದೇವಪ್ಪ ಮುರಗೋಡರ ಸಿದ್ಧಾಶ್ರಮದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹೋರಾಟಕ್ಕೆ ಒಂದು ಸಂಘಟಿತ ರೂಪ ಕೊಡಲು ತೀರ್ಮಾನಿಸಿದರು. ದಾವಣಗೆರೆಯಲ್ಲಿ 1953 ಮೇ 28 ರಂದು ನಡೆದ ಸರ್ವಪಕ್ಷ ಸಮ್ಮೇಳನದಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ. ಕಮ್ಯೂನಿಸ್ಟ್ ಪಾರ್ಟಿ, ಪಿ.ಎಸ್.ಪಿ. ಮತ್ತು ಅನೇಕ ಸ್ವತಂತ್ರರು ಇದರಲ್ಲಿ ಭಾಗವಹಿಸಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ (ಅಕರಾನಿ) ಪರಿಷತ್ತನ್ನು ಸ್ಥಾಪಿಸಿದರು. ಈ ಸಮ್ಮೇಳನದಲ್ಲಿ ಎನ್.ಎಲ್. ಉಪಾಧ್ಯಾಯರ ನೇತೃತ್ವದಲ್ಲಿ ಕಮ್ಯೂನಿಸ್ಟ್ ಪಕ್ಷದ ಒಂದು ದೊಡ್ಡ ತಂಡ ಬಿ.ವಿ. ಕಕ್ಕಿಲ್ಲಾಯ, ಎಂ.ಎಸ್. ರಾಮರಾವ್, ಸಿ.ಬಿ. ಮೊಣ್ಣಯ್ಯ, ಎನ್.ಕೆ. ಉಪಾಧ್ಯಾಯ, ಎಂ. ಎಸ್. ಕೃಷ್ಣನ್, ಎಂ.ಸಿ. ನರಸಿಂಹನ್, ಐ. ಮರಿದಾಸ್ ಮುಂತಾದವರು ಭಾಗವಹಿಸಿದ್ದರು. ಅಕರಾನಿ ಪರಿಷತ್ತಿಗೆ ಕಮ್ಯೂನಿಸ್ಟ್ ಪಕ್ಷದ ಬಿ.ವಿ. ಕಕ್ಕಿಲ್ಲಾಯ ಅವರು ಕಾರ್ಯದರ್ಶಿಯಾದರು. 1953 ಸೆಪ್ಟೆಂಬರ್ ನಲ್ಲಿ 'ಕರ್ನಾಟಕ ಪುಟ 10 ಕ್ಕೆ

ಕಮ್ಯೂನಿಸ್ಟರ ಪಾತ್ರ

ಭಾಷಾವಾರು ಪ್ರಾಂತ ರಚನೆಗಾಗಿ ನಡೆದ ಚಳುವಳಿಯಲ್ಲಿ ಕಮ್ಯೂನಿಸ್ಟರ ಪಾತ್ರವೂ ಇದೆ. ರಾಜಕೀಯ ಪಕ್ಷಗಳಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ಸರಿಯಾದ ದೃಷ್ಟಿಕೋನ ಹೊಂದಿದ್ದು, ಅದಕ್ಕಾಗಿ ಚಳುವಳಿ ನಡೆಸಿದ್ದು ಅಂದಿನ ಭಾರತ ಕಮ್ಯೂನಿಸ್ಟ್ ಪಕ್ಷ(ಸಿಪಿಐ) ಮಾತ್ರ.

ಮಹಾರಾಷ್ಟ್ರದಲ್ಲಿ ಕೆಲವು ರಾಜ್ಯ ಮಟ್ಟದ ಪ್ರಾದೇಶಿಕ ರಾಜಕೀಯ ಪಕ್ಷಗಳು, ಶಕ್ತಿಗಳು ಇದರಲ್ಲಿ ಸೇರಿದ್ದರೂ ಸಹ ಅಖಿಲ ಭಾರತ ಮಟ್ಟದಲ್ಲಿ ಈ ಬಗ್ಗೆ ಸ್ಪಷ್ಟ ತಿಳುವಳಿಕೆ, ದೃಷ್ಟಿಕೋನ ಹೊಂದಿದ್ದದ್ದು ಅವಿಭಜಿತ ಸಿಪಿಐ ಪಕ್ಷ ಮಾತ್ರ.

ಭಾಷಾವಾರು ರಾಜ್ಯ ರಚನೆಗೆ ಮೊದಲಿನಿಂದಲೂ ಸ್ಪಷ್ಟವಾದ ತಾತ್ವಿಕ ನಿಲುವನ್ನು ಹೊಂದಿದ್ದ ಕಮ್ಯೂನಿಸ್ಟ್ ಪಕ್ಷವು ಭಾರತದ ಎಲ್ಲ ಭಾಗಗಳಲ್ಲೂ ಇದಕ್ಕಾಗಿ ತನ್ನನ್ನು ತೊಡಗಿಸಿಕೊಂಡಿದೆ. ಮೊದಲ ಭಾಷಾವಾರು ರಾಜ್ಯ ಆಂಧ್ರಪ್ರದೇಶದ ರೂಪುಗೊಂಡ ಪ್ರಕ್ರಿಯೆಯಲ್ಲಿದ್ದ ಆಂಧ್ರ ಮಹಾಸಭಾದ ನಾಯಕತ್ವದಲ್ಲಿ ಕಮ್ಯೂನಿಸ್ಟರೇ ಇದ್ದರೆಂಬುದನ್ನು ಗಮನಿಸಬಹುದು. ಮಹಾರಾಷ್ಟ್ರ, ಗುಜರಾತ್, ಕೇರಳ ಹೀಗೆ ಎಲ್ಲ ಕಡೆಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಅಲ್ಲಿನ ಏಕೀಕರಣ ಹೋರಾಟ ಸಮಿತಿಗಳಲ್ಲಿ ಮುಂಚೂಣಿ ಪಾತ್ರ ವಹಿಸಿದೆ. ಹಾಗೆಯೇ ಕರ್ನಾಟಕದಲ್ಲೂ ಈ ಪಾತ್ರ ವಹಿಸಿದೆ.

ಅತಿಥಿ ಅಂಕಣ



ಪ್ರತಿಜೀವಕಗಳಿಗೆ ಹೆಚ್ಚುತ್ತಿರುವ ಪ್ರತಿರೋಧ
(ಆ್ಯಂಟಿಬಯೋಟಿಕ್ಸ್ ರೆಸಿಸ್ಟೆನ್ಸ್)

ಡಾ॥ ಕೆ. ಸುಶೀಲಾ

ಭಾರತದಲ್ಲಿ 'ಪ್ರತಿಜೀವಕ'ಗಳಿಗೆ ಪ್ರತಿರೋಧ ತೋರಿಸುವ ರೋಗಾಣುಗಳ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. 'ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್' ಪ್ರಕಾರ ದೇಶದಲ್ಲಿ ರೋಗಾಣುಗಳನ್ನು ನಾಶಪಡಿಸುವ ಪ್ರತಿಜೀವಕಗಳ ಸಾಮರ್ಥ್ಯ ಪ್ರತಿಶತ 15 ರಷ್ಟು ಕಡಿತಗೊಂಡಿದೆ. ಬಡ ದೇಶಗಳಲ್ಲಿ ಇಂದು ಪ್ರತೀ ಒಂದು ಲಕ್ಷ ಸಾವಿನಲ್ಲಿ ಇಪ್ಪತ್ತನಾಲ್ಕು ಸಾವುಗಳು ಈ ಸಮಸ್ಯೆಯಿಂದ ಆಗುತ್ತಿದ್ದರೆ, ಮುಂದುವರಿದ ದೇಶಗಳಲ್ಲಿ ಪ್ರತೀ ಒಂದು ಲಕ್ಷ ಸಾವಿನಲ್ಲಿ 13 ಸಾವುಗಳಿಗೆ ಈ ಸಮಸ್ಯೆ ಕಾರಣವಾಗಿದೆ. ಲ್ಯಾನ್ಸೆಟ್ ವೈದ್ಯಕೀಯ ಸಂಚಿಕೆಯ ಪ್ರಕಾರ 2019 ರಲ್ಲಿ ಇಡೀ ಪ್ರಪಂಚದಲ್ಲಿ ಒಟ್ಟು 12.7 ಲಕ್ಷ ಸಾವು ಈ ಸಮಸ್ಯೆ ಕಾರಣವಾಗಿದೆ. ಈ ಸಮಸ್ಯೆಯ ವ್ಯಾಪ್ತಿ, ಮೂಲಕಾರಣಗಳು ಮತ್ತು ಪರಿಹಾರಗಳ ಕುರಿತ ಲೇಖನ.

ಕೆಲವು ಕಾಲದ ಹಿಂದೆ 'ಪ್ರತಿಜೀವಕ' (ಆ್ಯಂಟಿಬಯೋಟಿಕ್ಸ್) ಗಳಿಗೆ ಸುಲಭದಲ್ಲಿ ಶರಣಾಗಿ ಸೋಲೊಪ್ಪಿಕೊಳ್ಳುತ್ತಿದ್ದ ರೋಗಕಾರಕ ಬ್ಯಾಕ್ಟಿರಿಯಾ ಹಾಗೂ ಫಂಗಸ್‌ಗಳು ಸಾವಕಾಶವಾಗಿ ಅವುಗಳಿಗೆ ಪ್ರಬಲ 'ಪ್ರತಿರೋಧ' ಒಡ್ಡಲು ಪ್ರಾರಂಭಿಸಿವೆ. ಹೀಗಾಗಿ ಇಂದು ಹಲವು ಜೀವ ರಕ್ಷಕ ಪ್ರತಿಜೀವಕಗಳ ಪ್ರಾಬಲ್ಯ ಕುಗ್ಗುತ್ತಿದೆ. ನಿರುಪಯೋಗಿಗಳಾಗುತ್ತಿವೆ.

ಭಾರತವೂ ಸೇರಿ ದಕ್ಷಿಣ ಪೂರ್ವ ಏಷಿಯಾಹಾಗೂ ಸಬ್ ಸಹಾರನ್ ಆಫ್ರಿಕಾದ ಬಡ ದೇಶಗಳ ವೈದ್ಯಕೀಯ ಸೇವೆಯಲ್ಲಿ ಈ ಸಮಸ್ಯೆ ಹೆಚ್ಚಿನ ಮಟ್ಟದಲ್ಲಿ ಕಾಡುತ್ತಿದ್ದರೂ ಇತರ ಮುಂದುವರಿದ ದೇಶಗಳ ವೈದ್ಯಕೀಯ ರಂಗವನ್ನೂ ಈ ಸಮಸ್ಯೆ ಬಿಟ್ಟಿಲ್ಲ. ಬಡ ದೇಶಗಳಲ್ಲಿ ಇಂದು ಪ್ರತೀ ಒಂದು ಲಕ್ಷ ಸಾವಿನಲ್ಲಿ ಇಪ್ಪತ್ತನಾಲ್ಕು ಸಾವುಗಳು ಈ ಸಮಸ್ಯೆಯಿಂದ ಆಗುತ್ತಿದ್ದರೆ, ಮುಂದುವರಿದ ದೇಶಗಳಲ್ಲಿ ಪ್ರತೀ ಒಂದು ಲಕ್ಷ ಸಾವಿನಲ್ಲಿ 13 ಸಾವುಗಳಿಗೆ ಈ ಸಮಸ್ಯೆ ಕಾರಣವಾಗಿದೆ. ಲ್ಯಾನ್ಸೆಟ್ ವೈದ್ಯಕೀಯ ಸಂಚಿಕೆಯ ಪ್ರಕಾರ 2019 ರಲ್ಲಿ ಇಡೀ ಪ್ರಪಂಚದಲ್ಲಿ ಒಟ್ಟು 12.7 ಲಕ್ಷ ಸಾವು ಈ ಸಮಸ್ಯೆ ಕಾರಣವಾಗಿದೆ.

ಪ್ರತಿಜೀವಕಗಳೆಂದರೇನು?

'ಪ್ರತಿಜೀವಕ' ಎಂದರೆ ರೋಗಕಾರಕ ಬ್ಯಾಕ್ಟೀರಿಯಾ ಫಂಗಸ್‌ಗಳು ಮಾನವ ಅಥವಾ ಪ್ರಾಣಿಗಳ ದೇಹ ಪ್ರವೇಶಿಸಿ ಅಲ್ಲಿ ರೋಗ ಉತ್ಪತ್ತಿಸಿದಾಗ, ಆ ರೋಗಕಾರಕಗಳನ್ನು ನೇರವಾಗಿ ನಾಶಗೊಳಿಸಿ ಅಥವಾ ಅವುಗಳ ಬೆಳವಣಿಗೆ ಹಾಗೂ ವಂಶಾಭಿವೃದ್ಧಿಯನ್ನು ತಡೆಗಟ್ಟಿ ರೋಗ ಗುಣವಾಗಲು ಸಹಕರಿಸುವ ಪದಾರ್ಥ.

ಇವುಗಳ ಕಾರ್ಯವಿಧಾನ:

(1) ಈ ರೋಗಾಣುಗಳ ಹೊರಕವಚದ ಸಂಯೋಜನೆಯಲ್ಲಿ ಕುಂದುಂಟು ಮಾಡುವ ಕಣದೊಳಗಿನ ದ್ರವ ಸೋರುವಂತೆ ಮಾಡಿ ರೋಗಾಣುವನ್ನು ಕೊಲ್ಲುವುದು.

(2) ರೋಗಾಣುಗಳ ಸಸಾರಜನಕ (ಪ್ರೊಟೀಸ್)ದ ಸಂಯೋಜನೆಯಲ್ಲಿ ವ್ಯತ್ಯಯ ಉಂಟು ಮಾಡಿ, ಇದರಿಂದಾಗಿ ಅವುಗಳ ವಂಶಾಭಿವೃದ್ಧಿಯಾಗದಂತೆ ಮಾಡುವುದು.

(3) ಇವುಗಳ ಜೀವನದ ಅತ್ಯಗತ್ಯ ಕ್ರಿಯೆಗಳಿಗೆ ಬೇಕಾದ ಪೋಷಕಾಂಶ (ಉದಾ: ಪೋಲಿಕ್ ಎಸಿಡ್)ಗಳು ದೊರೆಯದಂತೆ ಮಾಡಿ ಅವುಗಳ ವಂಶಾಭಿವೃದ್ಧಿ ತಡೆಗಟ್ಟುವುದು.

ಪ್ರತಿಜೀವಕಗಳ ಮೂಲ – ವಾತಾವರಣದ ಮಣ್ಣಿನಲ್ಲಿನ ಬ್ಯಾಕ್ಟೀರಿಯಾ ಫಂಗಸ್‌ಗಳಿಂದ ಪ್ರಕೃತಿ ಸಹಜವಾಗಿ ಉತ್ಪತ್ತಿಗೊಳ್ಳುವ ರಾಸಾಯನಿಕ.

ಪ್ರತಿಜೀವಕಗಳ ಉತ್ಪಾದನೆ ಮೂರು ವಿಧಾನಗಳಲ್ಲಿ ಮಾಡಲಾಗುತ್ತದೆ – 1) ನೈಸರ್ಗಿಕವಾಗಿ ಉತ್ಪಾದನೆ 2) ಭಾಗಶಃ ಕೃತಕವಾಗಿ ರಾಸಾಯನಿಕ ಸಂಯೋಜನೆಯಿಂದ 3) ಸಂಪೂರ್ಣ ಕೃತಕ ರಾಸಾಯನಿಕ ಸಂಯೋಜನೆಯಿಂದ. ಮೊತ್ತ ಮೊದಲ ಪ್ರತಿಜೀವಕ 'ಪೆನ್ಸಿಲಿನ್'ನ್ನು 1941 ರಲ್ಲಿ 'ಅಲೆಕ್ಸಾಂಡರ್ ಫ್ಲೆಮಿಂಗ್ ಎನ್ನುವ ವಿಜ್ಞಾನಿ ಒಂದು ಜಾತಿಯ ಫಂಗಸ್‌ನಿಂದ ಉತ್ಪಾದಿಸಿದ್ದರು. 1944 ರಲ್ಲಿ ದೊಡ್ಡ ಪ್ರಮಾಣದಲ್ಲಿ ಇದರ ಉತ್ಪಾದನೆ ಪ್ರಾರಂಭವಾಗಿ ಇದು ಮುಂದಿನ ದಿನಗಳಲ್ಲಿ



ಕೋಟ್ಯಾಂತರ ರೋಗಿಗಳ ಪ್ರಾಣ ಉಳಿಸಲು ಸಹಾಯಕವಾಯಿತು.

ಪ್ರತಿಜೀವಕಗಳಲ್ಲಿ ಎರಡುವಿಧಗಳಿವೆ. 1) ವಿಶಾಲ ವ್ಯಾಪ್ತಿಯವು – ಈ ಗುಂಪಿಗೆ ಸೇರಿದ ಪ್ರತಿಜೀವಕ ಹಲವು ವಿಧದ ರೋಗಾಣುಗಳನ್ನು ನಾಶಗೊಳಿಸಬಲ್ಲವು. 2) ಕಿರು ವ್ಯಾಪ್ತಿಯವು – ಇಲ್ಲಿ ಪ್ರತೀಜೀವಕ ಯಾವುದಾದರು ಒಂದೆರಡು ವಿಧದ ರೋಗಾಣುಗಳನ್ನು ನಾಶಪಡಿಸಬಲ್ಲವು.


ಸುಪರ್ ಬಗ್

ತಮ್ಮ ನಾಶಕ್ಕಾಗಿ ಹಿಂದೆ ಬಳಸುತ್ತಿದ್ದ ಪ್ರತಿಜೀವಕಗಳಿಗೆ ಮುಂದಿನದಿನಗಳಲ್ಲಿ ಪ್ರತಿರೋಧ ಬೆಳೆಸಿಕೊಂಡು ಆ ಔಷಧಗಳ ಪರಿಣಾಮದಿಂದ ತಮ್ಮನ್ನು ರಕ್ಷಿಸಿಕೊಳ್ಳುವ ರೋಗಾಣುಗಳನ್ನು 'ಸುಪರ್ ಬಗ್' ಎನ್ನುತ್ತಾರೆ. ಇವುಗಳಲ್ಲಿ ಪ್ರಮುಖವಾದ ಕೆಲವು:

ಮನುಷ್ಯ ಮತ್ತು ಪ್ರಾಣಿಗಳ ಕರುಳಿನಲ್ಲಿ ವಾಸಿಸುವ 'ಇಕೋಲಿ', ನ್ಯೂಮೋನಿಯಾವನ್ನುಂಟು ಮಾಡುವ 'ಕ್ಲೆಬ್ಸಿಯೆಲ್ಲಾ ನ್ಯೂಮೋನಿಯೆ, ಮಾರಕ 'ಸ್ಟೈಪೈಲೋ ಕೋಕಸ್ ಅರಿಯಸ್', ಆಸ್ಪತ್ರೆಗಳ 'ಕ್ರಿಟಿಕಲ್ ಕೇರ್ ಯುನಿಟ್'ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಶ್ವಾಸಕೋಶವನ್ನು ಘಾಸಿಕೆಗೊಳಿಸುವ ಎಸಿನೆಟೋ ಬ್ಯಾಕ್ಟರ್ ಚಾಮಾನ್ನಿ'.

ಭಾರತದಲ್ಲಿ 'ಪ್ರತಿಜೀವಕ'ಗಳಿಗೆ ಪ್ರತಿರೋಧ ತೋರಿಸುವ ರೋಗಾಣುಗಳ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. 'ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್' ಪ್ರಕಾರ ದೇಶದಲ್ಲಿ ರೋಗಾಣುಗಳನ್ನು ನಾಶಪಡಿಸುವ ಪ್ರತಿಜೀವಕಗಳ ಸಾಮರ್ಥ್ಯ ಪ್ರತಿಶತ 15 ರಷ್ಟು ಕಡಿತಗೊಂಡಿದೆ. ಐ.ಸಿ.ಎಂ.ಆರ್. ಈ ಪ್ರತಿಜೀವಕಗಳಿಗೆ ಹೆಚ್ಚುತ್ತಿರುವ ಪ್ರತಿರೋಧದ ಅಧ್ಯಯನಕ್ಕಾಗಿ ಪ್ರತೀ ವರ್ಷ ಒಟ್ಟು 30 ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಂದ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುತ್ತದೆ. ಈ ಅಧ್ಯಯನದಲ್ಲಿ ಒಂದು ವಿಷಯ ತಿಳಿದು ಬಂತು. ಸಂಪೂರ್ಣ ದೇಹದ ನಂಜಿಗೆ ಒಳಗಾದ ರೋಗಿಗಳ ಚಿಕಿತ್ಸೆಗೆ ಉಪಯೋಗಿಸುತ್ತಿದ್ದ, ಹಲವು ರೋಗಾಣುಗಳಿಗೆ ಮಾರಕವಾಗಿದ್ದ 'ಕಾರ್ಬಾಪೆನೆಮ್ಸ್' ಎನ್ನುವ ಪ್ರತಿಜೀವಕದ ಸಾಮರ್ಥ್ಯ ಬರೇ ಒಂದು ವರ್ಷದೊಳಗೆ 10 ಶೇಕಡಾ ಕಡಿಮೆಯಾಗಿತ್ತು.

ಈ ಅಧ್ಯಯನದಲ್ಲಿ ತಿಳಿದ ಇನ್ನೊಂದು ವಿಷಯವೆಂದರೆ ಒಂದು ಜಾತಿ ರೋಗಾಣುವಿನ ಸೋಂಕಿನಿಂದ ಉಂಟಾಗುತ್ತಿದ್ದ ನ್ಯೂಮೋನಿಯಾ, 2016 ರಲ್ಲಿ ಒಂದು ನಿರ್ದಿಷ್ಠ 'ಪ್ರತಿಜೀವಕದ' ಉಪಯೋಗದಿಂದ 65 ಪ್ರತಿಶತ ಗುಣಮುಖವಾಗುತ್ತಿದ್ದರೆ 2021 ರಲ್ಲಿ ಈ ಪ್ರಮಾಣ 43 ಶೇಕಡಾ ಕುಸಿದಿತ್ತು. ಅಂದರೆ ಸೂಕ್ಷ್ಮಾಣುಗಳು ತಮ್ಮ ನಾಶಕ್ಕೆ ಬಳಸುವ ನಿರ್ದಿಷ್ಟ 'ಪ್ರತಿಜೀವಕ'ಗಳ ದುಷ್ಪರಿಣಾಮದಿಂದ ತಪ್ಪಿಸಿಕೊಳ್ಳಲು ತಮ್ಮ ಕಣದಲ್ಲಿ ಅಗತ್ಯವಾದ ಮಾರ್ಪಾಡು ಮಾಡಿಕೊಳ್ಳುತ್ತಿದ್ದವು. ಹೀಗಾಗಿ ಹಿಂದೆ ನಿರ್ದಿಷ್ಟ 'ಪ್ರತಿಜೀವಕ'ಗಳ ಉಪಯೋಗದಿಂದ ಗುಣಪಡಿಸಲು ಸಾಧ್ಯವಾಗುತ್ತಿದ್ದ ಆ ಸೋಂಕುರೋಗಗಳು ದಿನಕಳೆದಂತೆ ಗುಣಪಡಿಸಲಾಗದ ರೋಗಗಳಾಗಿ ಮಾರ್ಪಾಟುಗೊಳ್ಳುತ್ತಿದ್ದವು. ಕೆಲವು ರೋಗಾಣುಗಳು ತಮ್ಮನ್ನು ನಾಶಪಡಿಸಲು ಉಪಯೋಗಿಸುವ ಹಲವು ಔಷಧಗಳಿಗೆ ಪ್ರತಿರೋಧ ಬೆಳೆಸಿಕೊಂಡಿದ್ದವು. ಹೀಗಾಗಿ ಹಿಂದೆ ಚಿಕಿತ್ಸೆಯಿಂದ ಸುಲಭದಲ್ಲಿ ಗುಣವಾಗುತ್ತಿದ್ದ ಕಾಯಿಲೆಗಳೇನಕವು ಇಂದು ಜನರಿಗೆ ಮಾರಕವಾಗುತ್ತಿವೆ.



ಈ ಪ್ರತಿರೋಧದ ಬೆಳವಣಿಗೆಗೆ ಕಾರಣಗಳೇನು?

1. ಸಹಜವಾದ ಕಾರಣ:

ದೇಹಕ್ಕೆ ರೋಗಾಣು ಪ್ರವೇಶಿಸಿ, ಅಲ್ಲಿ ಅಭಿವೃದ್ಧಿಗೊಂಡಾಗದೇಹರೋಗಗ್ರಸ್ಥವಾಗುವುದು. ಈ ರೋಗಾಣುಗಳನ್ನು ನಾಶಪಡಿಸಬಲ್ಲ ನಿರ್ಧಿಷ್ಟ 'ಪ್ರತಿಜೀವಕ'ಗಳ ಚಿಕಿತ್ಸೆಯಿಂದ ಅತೀ ಹೆಚ್ಚಿನ ಪ್ರಮಾಣದಲ್ಲಿ ರೋಗಾಣುಗಳು ನಾಶಗೊಳ್ಳುತ್ತವೆ. ಆದರೆ ಕೆಲ ಜಾತಿಯ ರೋಗಾಣುಗಳಲ್ಲಿ ಅನುವಂಶೀಯವಾಗಿ ಈ ನಿರ್ದಿಷ್ಟ 'ಪ್ರತಿಜೀವಕ'ಕ್ಕೆ ತಮ್ಮ ಕಣದಲ್ಲಿ ಪ್ರತಿರೋಧ ಹೊಂದಿರುವ ಅತ್ಯಲ್ಪ ಪ್ರಮಾಣದ ರೋಗಾಣುಗಳು ಇರಬಹುದು. ಇವುಗಳು ನಾಶಗೊಳ್ಳಲಾರವು. ಹಾಗೂ ದೇಹದಲ್ಲಿ ರೋಗಾಣುಗಳ ಸಾಂದ್ರತೆ ಕುಸಿಯುವುದರಿಂದ ಈ ಪ್ರತಿರೋಧವುಳ್ಳ ರೋಗಾಣುಗಳಿಗೆ ತಮಗೆ ದೊರೆಯುವ ಯಥೇಷ್ಟವಾದ ಜೀವಸತ್ವವನ್ನು ಉಪಯೋಗಿಸಿ ಅಭಿವೃದ್ಧಿಗೊಳ್ಳುವುದು ಸುಲಭವಾಗುವುದು.

2) ಪ್ರತಿಜೀವಕಗಳ ವಿವೇಚನಾ ರಹಿತ ಉಪಯೋಗ

ವಿಶಾಲ ವ್ಯಾಪ್ತಿಯ ಪ್ರತಿ ಜೀವಕಗಳನ್ನು ಗಂಭೀರ ಸ್ವರೂಪದ ಹಾಗೂ ಗುಣಪಡಿಸಲು ಕಷ್ಟವಾದ ರೋಗಾಣುಗಳ ಸೋಂಕಿನ ಚಿಕಿತ್ಸೆಗೆ ಮಾತ್ರ ಉಪಯೋಗಿಸುವುದು ಸೂಕ್ತ. ಆದರೆ ನಮ್ಮ ದೇಶದ ಆಸ್ಪತ್ರೆಗಳಲ್ಲಿ ಪ್ರತಿಜೀವಕಗಳ ಚಿಕಿತ್ಸೆಗೆ ಇದನ್ನು ಉಪಯೋಗಿಸುವ ಪ್ರಮಾಣ ಶೇಕಡಾ 75.


ರೋಗಿಗಳಿಂದ ಗಿಜಿಗುಟ್ಟುವ, ಸ್ವಚ್ಚತೆಯ ಅಭಾವವಿರುವ ಹಲವು ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಯ ಹೊರ ರೋಗಿ ವಿಭಾಗ, ವಾರ್ಡ್, ಶಸ್ತ್ರ ಚಿಕಿತ್ಸಾ ಕೊಠಡಿಗಳಲ್ಲೆಲ್ಲಾ ಒಬ್ಬ ರೋಗಿಯಿಂದ ಇನ್ನೊಬ್ಬರಿಗೆ ಸೋಂಕು ರೋಗ ತಗಲುವ ಸಂಭಾವ ಹೆಚ್ಚು. ಇದರಿಂದಾಗಿ ಕೆಲವು ಜಾತಿಯ ರೋಗಾಣುಗಳು ರೋಗಿಗಳ ದೇಹದ ಮೇಲೆ ದಾಳಿ ಮಾಡುವ ಸಂಭವ ಹೆಚ್ಚು. ಹಾಗಾಗಿ ಹಲವು ಜಾತಿಯ ರೋಗಾಣುಗಳನ್ನು ನಾಶ ಮಾಡಬಲ್ಲ ಒಂದಕ್ಕಿಂತ ಅಧಿಕ ಹಾಗೂ ಬಹಳಷ್ಟು ಬಾರಿ 'ವಿಶಾಲ ವ್ಯಾಪ್ತಿಯ' ಪ್ರತಿಜೀವಕಗಳನ್ನು ಅದರ ಅವಶ್ಯಕತೆ ಇಲ್ಲದಿದ್ದರೂ ವೈದ್ಯರು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಇಲ್ಲಿ ಅವಶ್ಯಕತೆ ಇದೆಯೇ ಎಂದು ಕೂಲಂಕಷವಾಗಿ ರೋಗಿಯನ್ನು ಪರೀಕ್ಷಿಸಲು ಸಮಯದ ಅಬಾವ ಹಾಗೂ ಇತರ ಪರೀಕ್ಷೆಗಳ ಮೂಲಕ ಪತ್ತೆಹಚ್ಚಲು ಇನ್ನಿತರ ಸೌಲಭ್ಯಗಳ ಕೊರತೆಯೂ ಪ್ರಮುಖ ಕಾರಣವಾಗಿದೆ.ಪ್ರತಿಜೀವಕಗಳು ರೋಗಾಣುಗಳನ್ನು ಘಾಸಿಗೊಳಿಸುವ ಸಮಯದಲ್ಲಿ ದೇಹದಲ್ಲಿ ವಾಸಿಸುವ ಸಹಾಯಕ ಸೂಕ್ಷ್ಮಾಣುಗಳನ್ನು ನಾಶಪಡಿಸುವುದು. ಇದು ಇತರ ರೋಗಾಣುಗಳ ಬೆಳವಣಿಗೆಗೆ ಸಹಾಯಕವಾಗುವುದು. ಹೀಗೆ ಪ್ರತಿಜೀವಕಗಳ ಅನಾವಶ್ಯಕ, ಅಸಮರ್ಪಕ ಉಪಯೋಗ ಹಲವು ರೋಗಾಣುಗಳು ಅವುಗಳಿಗೆ ಪ್ರತಿರೋಧ ಬೆಳೆಸಲು ಕಾರಣವಾಗಬಹುದು.

'ವೈರಸ್'ಗಳ ಸೋಂಕಿನ ಚಿಕಿತ್ಸೆಯಲ್ಲಿ ಪ್ರತಿಜೀವಕಗಳು ನಿರುಪಯೋಗಿಗಳು. ಆದರೆ ಈ ಸೋಂಕಿನ ಜೊತೆಯಲ್ಲಿ ಬ್ಯಾಕ್ಟಿರಿಯಾದ ಸೋಂಕು ತಗಲಿರಬಹುದೆ ಎನ್ನುವ ಸಂಶಯ ಅಥವಾ ಕೆಲವೊಮ್ಮೆ ರೋಗಿಗಳ ಕೋರಿಕೆಯ ಮೇರೆಗೆ ಪ್ರತಿಜೀವಕಗಳ ಉಪಯೋಗ ಹೆಚ್ಚುತ್ತಿದೆ.

ವೈರಲ್ ಸೋಂಕಿದ ಕೋವಿಡ್–19 ರ ಬಹಳಷ್ಟು ರೋಗಿಗಳಿಗೆ ಪ್ರತಿಜೀವಕಗಳನ್ನು ನೀಡಲಾಗಿತ್ತು. ಐ.ಸಿ.ಎಂ.ಆರ್., ಇಂತಹ ಪ್ರತಿಜೀವಕ ➚

ಕುಲಾಧಿಪತಿ ಸ್ಥಾನವನ್ನು ರಾಜ್ಯಪಾಲ ಖಾನ್ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಇದು ಪ್ರತ್ಯೇಕ ಪ್ರಕರಣವಲ್ಲ. ಪ್ರತಿಪಕ್ಷ ಆಡಳಿತವಿರುವ ರಾಜ್ಯಗಳಲ್ಲಿ, ರಾಜ್ಯಪಾಲರು ರಾಜ್ಯದ ವಿವಿಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಮತ್ತು ಕುಲಪತಿಗಳು ಹಾಗೂ ಪ್ರಮುಖ ಹುದ್ದೆಗಳ ನೇಮಕಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಪಂಜಾಬ್ ಅದಕ್ಕೆ ಇತ್ತೀಚಿನ ಉದಾಹರಣೆಯಾಗಿದೆ. ಪ್ರಖ್ಯಾತ ಹೃದ್ರೋಗ ತಜ್ಞರೊಬ್ಬರನ್ನು ಬಾಬಾ ಫರೀದ್ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಿಸುವ ಪ್ರಸ್ತಾಪವನ್ನು ಪಂಜಾಬ್ ರಾಜ್ಯಪಾಲ ಭನ್ವಾರಿಲಾಲ್ ಪುರೋಹಿತ್ ತಿರಸ್ಕರಿಸಿದ್ದಾರೆ. ಅಲ್ಲದೆ ಪಂಜಾಬ್ ಕೃಷಿ ವಿವಿಯ ಕುಲಪತಿಯನ್ನು ತೆಗೆದುಹಾಕುವಂತೆ ಮುಖ್ಯಮಂತ್ರಿಗೆ ಸೂಚಿಸಿದ್ದಾರೆ.

ಪ್ರಕಾಶ್ ಕಾರತ್



ಕೇರಳದಲ್ಲಿ ನಿಯಂತ್ರಣ ಮೀರಿದ ರಾಜ್ಯಪಾಲ

ಕೇರಳದಲ್ಲಿ ರಾಜ್ಯಪಾಲರು ಅಂಕೆ ಮಿರಿ ವರ್ತಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಒಂದು ದಿನ ಅವರು ಕೇರಳದ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ (ವಿಸಿ) ರಾಜೀನಾಮೆಗೆ ಕರೆ ನೀಡುತ್ತಾರೆ. ಇನ್ನೊಂದು ದಿನ ಸಚಿವರೊಬ್ಬರ ಬಗ್ಗೆ ತಮಗೆ ತೃಪ್ತಿಯಿಲ್ಲ ಎನ್ನುವ ಅವರು, ಆ ಮಂತ್ರಿಯನ್ನು ಕ್ಯಾಬಿನೆಟ್‌ನಿಂದ ವಜಾ ಮಾಡುವಂತೆ ಮುಖ್ಯಮಂತ್ರಿಯವರಿಗೆ ಸೂಚಿಸುತ್ತಾರೆ.

ಎಪಿಜೆ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯದ ವಿಸಿಯ ನೇಮಕಾತಿಯನ್ನು ರದ್ದುಪಡಿಸಿದ ಸುಪ್ರೀಂ ಕೋರ್ಟ್ ತೀರ್ಪನ್ನು ಬಳಸಿಕೊಂಡ ರಾಜ್ಯಪಾಲ ಅರಿಫ್ ಮಹಮದ್ ಖಾನ್, ಕುಲಾಧಿಪತಿಯ ಸ್ಥಾನಮಾನದ ಹಕ್ಕಿನಿಂದ ರಾಜ್ಯದ ಎಲ್ಲಾ ಒಂಬತ್ತು ವಿವಿಗಳ ವಿಸಿಗಳು ಅಕ್ಟೋಬರ್ 25ರ ಬೆಳಿಗ್ಗೆ 11.30ರೊಳಗೆ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದ್ದರು. ಈ ಬೇಡಿಕೆಯ ಪತ್ರವನ್ನು ಅಕ್ಟೋಬರ್ 24ರಂದು ಕಳಿಸಲಾಗಿತ್ತು.

ರಾಜೀನಾಮೆ ಕೊಡಲು ನಿರಾಕರಿಸಿದ ಎಂಟು ವಿಸಿಗಳು ರಾಜ್ಯಪಾಲರ ನಡೆಯ ವಿರುದ್ಧ ಹೈಕೋರ್ಟ್ ಮೊರೆ ಹೋದರು. ಒಂಬತ್ತನೇ ವಿಸಿ, ಸುಪ್ರೀಂ ಕೋರ್ಟ್ ತೀರ್ಪಿನಿಂದ ವಜಾ ಆದ ವಿಸಿ ಆಗಿದ್ದಾರೆ. ವಿಸಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಯಬೇಕೆಂದಿದ್ದಾಗ ತಮ್ಮ ನಿಲುವಿನಿಂದ ಹಿಂದೆ ಸರಿದ ರಾಜ್ಯಪಾಲರು, ನೇಮಕ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿರುವುದರಿಂದ ನಿಮ್ಮನ್ನು ಹುದ್ದೆಯಿಂದ ತೆಗೆದು ಹಾಕಬಾರದೇಕೆ ಎಂಬುದಕ್ಕೆ ನವೆಂಬರ್ 3 ರೊಳಗೆ ಉತ್ತರಿಸುವಂತೆ ಸೂಚಿಸುವ ಶೋಕಾಸ್ ನೋಟಿಸ್‌ಗಳನ್ನು ಎಂಟೂ ವಿಸಿಗಳಿಗೆ ಕಳಿಸಿದ್ದಾರೆ. ಅದರ ನಂತರ, ಇನ್ನೂ ಇಬ್ಬರು ವಿಸಿಗಳಿಗೆ ರಾಜ್ಯಪಾಲರು ಇದೇ ರೀತಿಯ ಶೋಕಾಸ್ ನೋಟಿಸ್ ನೀಡಿದ್ದಾರೆ.

ಇತ್ತೀಚಿನ ಅತಿರೇಕದ ಕ್ರಮಗಳ ಸರಣಿಯ ನಂತರ ರಾಜ್ಯಪಾಲ ಖಾನ್‌ರ ಹೊಸ ಅವಾಂತರ ಇದಾಗಿದೆ. ಇದಕ್ಕೂ ಮುನ್ನ ಅವರು ಕಣ್ಣೂರು ವಿಶ್ವವಿದ್ಯಾಲಯದ ವಿಸಿಯನ್ನು ಮರುನೇಮಕ ಮಾಡಿದ್ದನ್ನು ಪ್ರಶ್ನಿಸಿದ್ದರು. ನೇಮಕಕ್ಕೆ ತಾವೇ ಸಹಿ ಮಾಡಿದ ಬೆನ್ನಲ್ಲೇ ಅದನ್ನು ಪ್ರಶ್ನಿಸಿದ್ದರು. ಪ್ರಶ್ನಿಸಲಾದ ಈ ನೇಮಕವನ್ನು ಕೇರಳ ಹೈ ಕೋರ್ಟ್ ಎತ್ತಿ ಹಿಡಿದಿದೆ.

ತೀರಾ ಈಚೆಗೆ ರಾಜ್ಯಪಾಲರು ಕೇರಳ ವಿವಿ ವಿಸಿ ಮತ್ತು ಸೆನೆಟ್ ವಿರುದ್ಧ ಸಮರ ಸಾರಿದ್ದಾರೆ. ಖಾಲಿಯಿರುವ ವಿಸಿ ಹುದ್ದೆಗೆ ನೇಮಕಾತಿಗಾಗಿ ಆಯ್ಕೆ ಮಾಡಲು ಇರುವ ಶೋಧನಾ ಸಮಿತಿಯ ಸ್ವರೂಪ ನಿರ್ಧರಿಸುವ ಕಾನೂನಿನ ಕೆಲವು ನಿಯಮಗಳನ್ನು ಮೀರಿ ಹೋಗಲು ಖಾನ್ ಬಯಸುತ್ತಿದ್ದಾರೆ. ಇಂಥ ಕಾನೂನುಬಾಹಿರ ವಿಧಾನಗಳನ್ನು ಸೆನೆಟ್ ಪ್ರತಿರೋಧಿಸಿದಾಗ ಸೆನೆಟ್‌ನ 15 ಸದಸ್ಯರನ್ನು ಏಕಪಕ್ಷೀಯವಾಗಿ ಸೆನೆಟ್ ಸದಸ್ಯತ್ವದಿಂದ ತೆಗೆದು ಹಾಕಲಾಯಿತು.

ವಿಸಿಗಳ ವಿರುದ್ಧದ ಪ್ರಸಕ್ತ ನಡವಳಿಕೆಯ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ರಾಜ್ಯಪಾಲರು ಕುಲಾಧಿಪತಿಯ (ಚಾನ್ಸಲರ್) ನೆಲೆಯಲ್ಲಿ ವಿಸಿಗಳನ್ನು ನೇಮಿಸಿದ್ದಾರೆ. ಈ ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದ ಕಾನೂನುಗಳ ಪ್ರಕಾರ ಚಾನ್ಸಲರ್ ತಮಗೆ ಇಷ್ಟಬಂದಂತೆ ಕುಲಪತಿಗಳನ್ನು ತೆಗೆದು ಹಾಕುವಂತಿಲ್ಲ. ಹಣಕಾಸು ದುರ್ಬಳಕೆ ಅಥವಾ ದುರ್ನಡತೆಗಾಗಿ ವಿಸಿ ವಿರುದ್ಧ ಕ್ರಮಕ್ಕೆ ಮುಂದಾಗಲು ಕಾನೂನಿನಲ್ಲಿ ಅವಕಾಶವಿದೆ. ಆದರೆ, ಅಂಥ ಆರೋಪಗಳ ಬಗ್ಗೆ ಹೈ ಕೋರ್ಟ್ ನ್ಯಾಯಮೂರ್ತಿ ವಿಚಾರಣೆ ನಡೆಸಬೇಕು. ಆದ್ದರಿಂದ, ವಿಸಿಗಳನ್ನು ವಜಾ ಮಾಡುವ ರಾಜ್ಯಪಾಲರ ಬೆದರಿಕೆ ಅಕ್ರಮವಾಗಿದೆ ಹಾಗೂ ಕಾನೂನುಗಳ ಉಲ್ಲಂಘನೆಯಾಗಿದೆ. ಎಪಿಜೆ ಅಬ್ದುಲ್ ಕಲಾಂ ತಾಂತ್ರಿಕ ವಿವಿ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು, ಆ ವಿವಿಯಲ್ಲಿನ ನಿರ್ದಿಷ್ಟ ನೇಮಕವೊಂದಕ್ಕೆ ಸಂಬಂಧಿಸಿದ್ದಾಗಿದೆ. ಆ ಪ್ರಕರಣದಲ್ಲಿ ನಿಯಮಾವಳಿಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಲಾಗಿತ್ತು. ಈ ತೀರ್ಪನ್ನೇ ಇತರ ವಿವಿಗಳ ಕುಲಪತಿಗಳ ನೇಮಕಕ್ಕೆ ಅನ್ವಯಿಸಲು ರಾಜ್ಯಪಾಲರು ಹೊರಟಿರುವುದಕ್ಕೆ ಕಾನೂನಿನ ಯಾವುದೇ ಆಧಾರವಿಲ್ಲ. ಶೋಧನಾ ಸಮಿತಿಗಳಲ್ಲಿ ಯುಜಿಸಿ ಮತ್ತು ವಿವಿ ನೇಮಿಸುವ ಸದಸ್ಯರಲ್ಲದೆ ರಾಜ್ಯ ಸರಕಾರ ನೇಮಿಸುವ ವ್ಯಕ್ತಿಯ ಪ್ರಾತಿನಿಧ್ಯಕ್ಕೂ ಕಾನೂನಿನಲ್ಲಿ ಅವಕಾಶವಿದೆ. ಮಹಾರಾಷ್ಟ್ರ, ತಮಿಳುನಾಡು ಮತ್ತು ಕರ್ನಾಟಕ ಮುಂತಾದ ಕೆಲವು ರಾಜ್ಯಗಳಲ್ಲಿಯೂ ಈ ವಿಧಾನವನ್ನು ಅನುಸರಿಸಲಾಗುತ್ತದೆ. ಆಯ್ಕೆ ಸಮಿತಿಯಲ್ಲಿ ರಾಜ್ಯ ಸರಕಾರದ ಪ್ರತಿನಿಧಿ ಇರಬಾರದೆಂಬ ರಾಜ್ಯಪಾಲರ ನಿಲುವು ಅಸಮರ್ಥನೀಯವಾಗಿದೆ.

ರಾಜ್ಯಪಾಲ ಖಾನ್‌ರ ನಡೆಗಳ ನಿಜವಾದ ಉದ್ದೇಶವೇನು? ವಿಶ್ವವಿದ್ಯಾಲಯಗಳ ಸ್ವಾಯತ್ತೆ ರಕ್ಷಣೆಗೆ ಹಾಗೂ ಆಳುವ ಪಕ್ಷ ಸೂಚಿಸುವ ವ್ಯಕ್ತಿಯನ್ನು ವಿಸಿಗಳನ್ನಾಗಿ ನೇಮಿಸುವುದನ್ನು ತಡೆಯಲು ತಾವು ಕ್ರಮ ಕೈಗೊಳ್ಳುತ್ತಿರುವುದಾಗಿ ಖಾನ್ ವಾದಿಸುತ್ತಿದ್ದಾರೆ. ಆರ್‌ಎಸ್‌ಎಸ್–ಬಿಜೆಪಿಯ ಅಜೆಂಡಾವನ್ನು ಮುಂದೊತ್ತಲು ರಾಜ್ಯ ವಿವಿಗಳಲ್ಲಿ ಮಧ್ಯಪ್ರವೇಶ ಮಾಡಲು ಇದೊಂದು ಕೇವಲ ನೆಪವಷ್ಟೇ.

ಕುಲಾಧಿಪತಿ ಸ್ಥಾನವನ್ನು ರಾಜ್ಯಪಾಲ ಖಾನ್ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಇದು ಪ್ರತ್ಯೇಕ ಪ್ರಕರಣವಲ್ಲ. ಪ್ರತಿಪಕ್ಷ ಆಡಳಿತವಿರುವ ರಾಜ್ಯಗಳಲ್ಲಿ, ರಾಜ್ಯಪಾಲರು ರಾಜ್ಯದ ವಿವಿಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಮತ್ತು ಕುಲಪತಿಗಳು ಹಾಗೂ ಪ್ರಮುಖ ಹುದ್ದೆಗಳ ನೇಮಕಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಪಂಜಾಬ್ ಅದಕ್ಕೆ ಇತ್ತೀಚಿನ ಉದಾಹರಣೆಯಾಗಿದೆ. ಪ್ರಖ್ಯಾತ ಹೃದ್ರೋಗ ತಜ್ಞರೊಬ್ಬರನ್ನು ಬಾಬಾ ಫರೀದ್ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಿಸುವ ಪ್ರಸ್ತಾಪವನ್ನು ಪಂಜಾಬ್ ರಾಜ್ಯಪಾಲ ಭನ್ವಾರಿಲಾಲ್ ಪುರೋಹಿತ್ ತಿರಸ್ಕರಿಸಿದ್ದಾರೆ. ಅಲ್ಲದೆ ಪಂಜಾಬ್ ಕೃಷಿ ವಿವಿಯ ಕುಲಪತಿಯನ್ನು ತೆಗೆದುಹಾಕುವಂತೆ ಮುಖ್ಯಮಂತ್ರಿಗೆ ಸೂಚಿಸಿದ್ದಾರೆ. ಅವರ ನೇಮಕ 'ಅಕ್ರಮ' ಎನ್ನುವುದು ಪುರೋಹಿತ್ ಅಭಿಪ್ರಾಯವಾಗಿದೆ.

ರಾಜ್ಯ ವಿವಿಗಳ ವ್ಯವಹಾರಗಳಲ್ಲಿ ರಾಜ್ಯಪಾಲರು ಏಕಪಕ್ಷೀಯವಾಗಿ ಮೂಗು ತೂರಿಸುವುದನ್ನು ತಡೆಯುವ ಉದ್ದೇಶದಿಂದ ವಿವಿಗಳಿಗೆ ಸಂಬಂಧಿಸಿ ಹಾಲಿಯಿರುವ ಕಾನೂನುಗಳಿಗೆ ತಿದ್ದುಪಡಿ ಮಾಡುವ ಅಥವಾ ಹೊಸ ಕಾನೂನುಗಳನ್ನು ತಮಿಳು ನಾಡು, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯ ವಿಧಾನಸಭೆಗಳು ಅಂಗೀಕರಿಸಿವೆ. ಕೇರಳ ವಿಧಾನ ಸಭೆ ಈ ವರ್ಷ ಸೆಪ್ಟೆಂಬರ್ 1ರಂದು ವಿಶ್ವವಿದಾಲಯ ಕಾನೂನುಗಳು (ತಿದ್ದುಪಡಿ) ಮಸೂದೆಯನ್ನು ಅಂಗೀಕರಿಸಿದೆ. ತಿದ್ದುಪಡಿ ಮೂಲಕ ಆಯ್ಕೆ ಸಮಿತಿ ಸದಸ್ಯರ ಸಂಖ್ಯೆಯನ್ನು ಹಾಲಿ ಮೂರರಿಂದ ಐದಕ್ಕೆ ಏರಿಸಲಾಗಿದೆ. ಆದರೆ ರಾಜ್ಯಪಾಲ ಖಾನ್ ಮಸೂದೆಗೆ ಇನ್ನೂ ಅನುಮೋದನೆ ನೀಡಿಲ್ಲ; ಯಾವುದೇ ವಿಚಾರಣೆ ಅಥವಾ ಆಕ್ಷೇಪಗಳೊಂದಿಗೆ ವಾಪಸ್ ಮಾಡಿಯೂ ಇಲ್ಲ.

ಅಡ್ಡಿಪಡಿಸುವಂಥ ಪಾತ್ರ ನಿರ್ವಹಿಸುತ್ತಿರುವುದಕ್ಕಾಗಿ ತೀವ್ರ ಟೀಕೆ ಎದುರಿಸುತ್ತಿರುವ ಖಾನ್, ತಮ್ಮನ್ನು ಟೀಕಿಸುವ ಧೈರ್ಯ ತೋರುವ ಯಾವುದೇ ಸಚಿವರ ಬಗೆಗಿನ 'ಸಂತೋಷವನ್ನು' ವಾಪಸ್ ಪಡೆಯುವುದಾಗಿ ಬೆದರಿಕೆಯನ್ನೂ ಹಾಕಿದ್ದಾರೆ. ಅದರಂತೆ, ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್‌ರಲ್ಲಿನ 'ಸಂತೋಷವನ್ನು ಹಿಂಪಡೆದಿದ್ದಾರೆ' ಹಾಗೂ ಅವರನ್ನು ಸಂಪುಟದಿಂದ ಕೈಬಿಡುವಂತೆ ಮುಖ್ಯಮಂತ್ರಿಗೆ ಸೂಚಿಸಿದ್ದಾರೆ. ಈ ರೀತಿಯಾಗಿ, ಸಂವಿಧಾನದಲ್ಲಿ ತನಗೆ ಇಲ್ಲದೇ ಇರುವಂಥ ಅಧಿಕಾರ ಚಲಾಯಿಸಲು ಖಾನ್ ಆರಂಭಿಸಿದ್ದಾರೆ.

ರಾಜ್ಯಪಾಲರನ್ನು ವಿಶ್ವವಿದ್ಯಾಲಯಗಳ ಕುಲಾಧಿಪತಿಯಾಗಿ ನೇಮಿಸುವ ಪದ್ಧತಿಯನ್ನು ನಿಲಿಸುವುದೇ ವಿಸಿಗಳ ನೇಮಕದಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡುವುದನ್ನು ತಡೆಯಲು ಇರುವ ಪರಿಹಾರವಾಗಿದೆ. ಕೇಂದ್ರ–ರಾಜ್ಯ ಸಂಬಂಧಗಳ ವಿಚಾರದಲ್ಲಿ ಯುಪಿಎ ಸರಕಾರ ನೇಮಿಸಿದ್ದ ಎಂ.ಎಂ. ಪುಂಛಿ ಆಯೋಗ ಈ ಶಿಫಾರಸು ಮಾಡಿತ್ತು.

ಕೇರಳದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರಾಜ್ಯಪಾಲರ ಹಸ್ತಕ್ಷೇಪದ ವಿರುದ್ಧದ ಹೋರಾಟ ತುಂಬಾ ಮಹತ್ವದ್ದಾಗಿದೆ. ದೇಶದ ಉನ್ನತ ಶಿಕ್ಷಣದಲ್ಲಿ ಆರ್‌ಎಸ್‌ಎಸ್ ಅಜೆಂಡಾ ಹೇರಲು ನಡೆಯುತ್ತಿರುವ ಕೇಂದ್ರೀಯ ಪ್ರಯತ್ನಗಳ ಭಾಗವಾಗಿ ರಾಜ್ಯಪಾಲರು ಇದನ್ನೆಲ್ಲ ಮಾಡುತ್ತಿದ್ದಾರೆ. ರಾಜ್ಯಪಾಲರ ಏಕಪಕ್ಷೀಯ ಕ್ರಮಗಳ ವಿರುದ್ಧ ಕಾನೂನು ಹಾಗೂ ರಾಜಕೀಯ ಹೋರಾಟ ನಡೆಸಲಾಗುತ್ತದೆ.

ಈ ವಿಷಯದಲ್ಲಿ ನವೆಂಬರ್ 15ರಂದು ರಾಜಭವನ ಚಲೋ ನಡೆಸಲು ಎಲ್‌ಡಿಎಫ್ ಕರೆ ನೀಡಿದೆ. ಕೇರಳದ ಉನ್ನತ ಶಿಕ್ಷಣ ವ್ಯವಸ್ಥೆಯ ಜಾತ್ಯತೀತ–ಪ್ರಜಾಸತ್ತಾತ್ಮಕ ಸ್ವರೂಪವನ್ನು ಹಾಳುಮಾಡುವ ಹುನ್ನಾರಗಳನ್ನು ಬಯಲಿಗೆಳೆಯಲು ಅಭಿಯಾನವೊಂದು ರಾಜ್ಯದಲ್ಲಿ ನಡೆಯುತ್ತಿದೆ.

ಅನು: ವಿಶ್ವ

ಪಡೆದ 17,534 ರೋಗಿಗಳ ರೆಕಾರ್ಡ್‌ಗಳನ್ನು ಅಧ್ಯಯನ ಮಾಡಿದಾಗ ಇವರಲ್ಲಿ 50 ಪ್ರತಿಶತ ರೋಗಿಗಳಲ್ಲಿ 'ಪ್ರತಿಜೀವಕ'ಗಳಿಗೆ ಪ್ರತಿರೋಧ ಬೆಳೆಸಿದ ಬ್ಯಾಕ್ಟೀರಿಯಾಗಳ ಸೋಂಕು ಕಾಣಿಸಿತ್ತು.


3) ರೋಗಿಗಳಿಂದ ಪ್ರತಿಜೀವಕಗಳ ವಿವೇಚನಾ ರಹಿತ ಉಪಯೋಗ

ವೈದ್ಯರು ಹೇಳಿದಷ್ಟು ಪ್ರಮಾಣದಲ್ಲಿ, ಕಾಲಾವಧಿತನಕ, ಸೂಕ್ತ ಸಮಯದಲ್ಲಿ ಈ ಔಷಧಗಳನ್ನು ತೆಗೆದುಕೊಳ್ಳದೆ ಇರುವುದು. ಇದು ಆರ್ಥಿಕ ಅಡಚಣೆಯಿಂದಿಗಿರಬಹುದು, ಕೆಲಸದಲ್ಲಿ ಈ ಔಷಧಗಳು ಉಂಟು ಮಾಡುವ ತೊಂದರೆ (ಉದಾ:– ಅಲರ್ಜಿ, ವಾಕರಿಕೆ, ವಾಂತಿ, ಭೇಧಿ ಮುಂತಾದವುಗಳು) ಯಿಂದಾಗಿರಬಹುದು ಅಥವಾ ನಿರ್ಲಕ್ಷದಿಂದಾಗಿರಬಹುದು. ಆಗ ರೋಗಿಯ ದೇಹದಲ್ಲಿ ಔಷಧದ ಪ್ರಮಾಣ ರೋಗಾಣುವಿನ ನಾಶಕ್ಕೆ ಬೇಕಾದ ಸೂಕ್ತ ಮಟ್ಟದಲ್ಲಿ ಇರಲಾರದು. ಇದು ರೋಗಾಣುವಿಗೆ ಈ ಔಷಧಗಳಿಗೆ ಪ್ರತಿರೋಧ ಬೆಳೆಸಿಕೊಳ್ಳಲು ಸದವಕಾಶ ನೀಡುವುದು.

ಪ್ರತಿರೋಧ ಬೆಳೆಸುವುದನ್ನು ತಡೆಗಟ್ಟುವ ಬಗ್ಗೆ ಹೇಗೆ?

1) ನಮ್ಮ ದೇಶದಲ್ಲಿ ಸೋಂಕು ರೋಗಗಳ ಪ್ರಮಾಣ ಅಧಿಕವಾಗಿದೆ. ಈ ರೋಗಗಳನ್ನು ಹತೋಟಿಯಲ್ಲಿಡುವ ಜವಾಬ್ದಾರಿ ಸರ್ಕಾರ, ವೈದ್ಯಕೀಯ ಕ್ಷೇತ್ರ ಹಾಗೂ ಪ್ರಜೆಗಳ ಮೇಲಿದೆ.
   ಸರ್ಕಾರ ಈ ರೋಗಗಳ ಹತೋಟಿಗೆ ಬೇಕಾದ ಸೂಕ್ತ ಯೋಜನೆಗಳನ್ನು ರಚಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಬೇಕಾದ ಸೂಕ್ತ ವ್ಯವಸ್ಥೆ ಮಾಡುವುದು ಅವಶ್ಯಕ.
   ವೈದ್ಯಕೀಯ ಸೇವೆ ಬರೀ ರೋಗ ಚಿಕಿತ್ಸೆಗೆ ನೀಡಿದಷ್ಟೇ ಪ್ರಾಮುಖ್ಯತೆ ರೋಗ ತಡೆಗಟ್ಟುವ ಸೇವೆಗೂ ನೀಡಿದಾಗ ಸಮಾಜದ ಜನರ ಆರೋಗ್ಯದ ಮಟ್ಟ ಏರುವುದು. ಇತರ ರೋಗಗಳಂತೆ ಸೋಂಕು ರೋಗವೂ ಹತೋಟಿಗೆ ಬರುವುದು. ಜನ ಸಾಮಾನ್ಯರು ಈ ಸೋಂಕು ರೋಗ ಬಾರದಂತೆ ವೈಯಕ್ತಿಕ ಹಾಗೂ ಸಾರ್ವಜನಿಕ ಶುಚಿತ್ವ ಕಾಪಾಡುವುದು, ರೋಗ ತಡೆಗಟ್ಟುವ ಸೂಕ್ತ ಕ್ರಮಗಳನ್ನು (ಲಸಿಕೆಯ ಉಪಯೋಗ, ಸೋಂಕು ಪರರಿಗೆ ಹರಡದಂತೆ ಸೂಕ್ತ ಎಚ್ಚರಿಕೆ ಮುಂತಾದವುಗಳು) ಅನುಸರಿಸುವುದು ಅಗತ್ಯ.
2) ಪ್ರತಿಜೀವಕಗಳ ಸೂಕ್ತ ಉಪಯೋಗ – ಇದು ವೈದ್ಯಕೀಯ ವೃತ್ತಿನಿರತರ ಹಾಗೂ ರೋಗಿಗಳ ಜವಾಬ್ದಾರಿ.
3) ಉತ್ತಮ ಪರಿಣಾಮ ನೀಡುವ, ಉಪಯೋಗಿಸುವ ರೋಗಿಗಳಲ್ಲಿ ಇತರ ತೊಂದರೆ ಉಂಟು ಮಾಡದ, ಆರ್ಥಿಕವಾಗಿ ಅಗ್ಗದ, ಸುಲಭವಾಗಿ ಉಪಯೋಗಿಸಲು ಸಾಧ್ಯವಾಗುವಂತಹ ಹೊಸ 'ಪ್ರತಿಜೀವಕಗಳ' ಅವಿಷ್ಕಾರಕ್ಕೆ ಹೆಚ್ಚಿನ ಆದ್ಯತೆ ನೀಡುವುದು. ●

ಕರ್ನಾಟಕ ರಾಜ್ಯೋತ್ಸವ–ವಿಶೇಷ ಲೇಖನ



ರಾಜ್ಯದ ರಾಜಕೀಯ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾಯತ್ತತೆಗೆ ಅಪಾಯ

ಪ್ರೊ.ಟಿ.ಆರ್. ಚಂದ್ರಶೇಖರ್

ನಮ್ಮ ದೇಶದ ಸಾಮಾಜಿಕ ನ್ಯಾಯದ, ಆರ್ಥಿಕ ಅಭಿವೃದ್ಧಿಯ ಮತ್ತು ರಾಜಕೀಯ ಸ್ವಾತಂತ್ರ್ಯದ ಪ್ರಣಾಳಿಕೆಯಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಪ್ರಣೀತ ಸಂವಿಧಾನದಲ್ಲಿನ ಒಕ್ಕೂಟ ವ್ಯವಸ್ಥೆಗೆ ಇಂದು ಅಪಾಯ ಬಂದಿದೆ. ಇಂದಿನ ಒಕ್ಕೂಟ ಸರ್ಕಾರವು 2014ರಿಂದಲೂ ವ್ಯವಸ್ಥಿತವಾಗಿ ರಾಜ್ಯಗಳ ಅಧಿಕಾರಗಳನ್ನು–ಹಕ್ಕುಗಳನ್ನು ಕಸಿದುಕೊಳ್ಳುವ ಕೆಲಸವನ್ನು ಬಹಿರಂಗವಾಗಿಯೇ ಮಾಡುತ್ತಿದೆ. ಇಂದು ವ್ಯಾಪಕವಾಗಿ ಬಳಕೆಯಲ್ಲಿರುವ 'ಕೇಂದ್ರ' ಸರ್ಕಾರ ಎಂಬುದಕ್ಕೆ ತಕ್ಕುದಾಗಿ ಅದು ನಡೆದುಕೊಳ್ಳುತ್ತಿದೆ. ನಮ್ಮ ಸಂವಿಧಾನದಲ್ಲಿ ಎಲ್ಲಿಯೂ 'ಕೇಂದ್ರ ಸರ್ಕಾರ' ಎಂಬ ನುಡಿಗಟ್ಟನ್ನು ಬಳಸಿಲ್ಲ. ಅಲ್ಲಿರುವುದು ಒಕ್ಕೂಟ ಸರ್ಕಾರ. ಒಕ್ಕೂಟ ಬಜೆಟ್ಟು, ಒಕ್ಕೂಟ ಪಟ್ಟಿ ಇತ್ಯಾದಿ. ನಮ್ಮ ಸಂವಿಧಾನದ ಮೊದಲ ಅನುಚ್ಛೇದದಲ್ಲಿ 'ಇಂಡಿಯಾ, ದಟ್ ಈಸ್ ಭಾರತ್ ಶೆಲ್ ಬಿ ಎ ಯೂನಿಯನ್ ಆಫ್ ಸ್ಟೇಟ್ಸ್' ಎಂದು ಸ್ಪಷ್ಟಪಡಿಸಲಾಗಿದೆ. ನಿಜ, ನಮ್ಮ ಸಂವಿಧಾನದಲ್ಲಿ 'ಫೆಡರೇಶನ್' ಎಂಬ ಪದವನ್ನು ಒಮ್ಮೆಯೂ ಬಳಸಿಲ್ಲ. ಆದರೆ ಅದನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಅದರಲ್ಲಿ 'ಒಕ್ಕೂಟ' ತತ್ವವು ಎಲ್ಲ ಭಾಗಗಳಲ್ಲಿ, ಅನುಸೂಚಿಗಳಲ್ಲಿ ಮತ್ತು ಅನುಚ್ಛೇದಗಳಲ್ಲಿ ಹರಿದಿರುವುದನ್ನು ಗುರುತಿಸಬಹುದು. ಅಲ್ಲಿ ವ್ಯಕ್ತವಾಗಿ ಒಕ್ಕೂಟತನದ ಬಗ್ಗೆ ಉಲ್ಲೇಖವಿಲ್ಲದಿದ್ದರೂ ಅವ್ಯಕ್ತವಾಗಿ ಅದರ ಸತ್ವವು ಸಂವಿಧಾನದಲ್ಲಿ ಹರಿದಾಡಿದೆ. ಕೇಂದ್ರ ಸರ್ಕಾರ ಎಂಬ ನುಡಿಯು ಸಂವಿಧಾನದ ಮೂಲ ಸತ್ವವನ್ನು ಪ್ರತಿನಿಧಿಸುವುದಿಲ್ಲ. ಇದಕ್ಕೆ ಬದಲಾಗಿ 'ಒಕ್ಕೂಟ ಸರ್ಕಾರ' ಎಂಬ ನುಡಿಯು ದೇಶದ 28 ರಾಜ್ಯಗಳನ್ನೂ ಮತ್ತು 8 ಒಕ್ಕೂಟಾಡಳಿತ ಪ್ರದೇಶಗಳನ್ನು, ಅವುಗಳ ಭಾಷೆಗಳನ್ನು, ಹತ್ತಾರು ಧರ್ಮಗಳು–ನೂರಾರು ಜಾತಿಗಳ ಜನಸಮುದಾಯಗಳನ್ನು ಒಳಗೊಳ್ಳುತ್ತದೆ. 'ಕೇಂದ್ರ ಸರ್ಕಾರ' ಎನ್ನುವ ನುಡಿಯು ಭಾರತ ಸರ್ಕಾರವನ್ನು ಮಾತ್ರ ಪ್ರತಿನಿಧಿಸುತ್ತದೆ ಮತ್ತು ಇದು ಏಕಾಕಾರಿಯಾದ ನುಡಿಗಟ್ಟಾಗಿದೆ.

ಯಾವುದನ್ನು ಕೇಶವಾನಂದ ಭಾರತಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು 'ಬೇಸಿಕ್ ಸ್ಟ್ರಕ್ಚರ್ ಆಫ್ ದಿ ಕಾನ್ಸಿಟ್ಯೂಷನ್' ಎಂಬ ಸಿದ್ಧಾಂತವನ್ನು ರೂಪಿಸಿದೆಯೋ ಅದರ ಭಾಗ ಒಕ್ಕೂಟ ವ್ಯವಸ್ಥೆ. ಈ ಸಂವಿಧಾನಾತ್ಮಕ ಒಕ್ಕೂಟ ತತ್ವವನ್ನು ಬದಲಾಯಿಸುವುದಾಗಲಿ, ಹರಣ ಮಾಡುವುದಾಗಲಿ, ಪಲ್ಲಟಗೊಳಿಸುವುದಾಗಲಿ ಸಾಧ್ಯವಿಲ್ಲ. ಆದರೆ ಇಂದು ನಮ್ಮ ಸಂವಿಧಾನದ ಬೇಸಿಕ್ ಸ್ಟ್ರಕ್ಚರ್ ಆಗಿರುವ ಒಕ್ಕೂಟ ವ್ಯವಸ್ಥೆಗೆ ತೀವ್ರ ಅಪಾಯ ಬಂದಿದೆ. ಈ ಸಂವಿಧಾನದ ಮೂಲ ರಚನೆಯನ್ನು ಯಾವ ಕಾರಣಕ್ಕೂ ಬದಲಾಯಿಸುವಂತಿಲ್ಲ, ನಿಜ. ಆದರೆ ರಾಜಕಾರಣಿಗಳು ಇಂದು 'ಸಂವಿಧಾನವನ್ನು ಬದಲಾಯಿಸಲೆಂದೇ' ನಾವು ಅಧಿಕಾರಕ್ಕೆ ಬಂದಿದ್ದೇವೆ ಎಂದು ಬೆದರಿಸುತ್ತಿದ್ದಾರೆ.

ರಾಜ್ಯ ಸರ್ಕಾರಗಳ ಸಂವಿಧಾನಾತ್ಮಕ ಅಧಿಕಾರಗಳ ಮತ್ತು ಹಕ್ಕುಗಳ ಹರಣ ಹೇಗೆ ನಡೆದಿದೆ ಎಂಬುದನ್ನು ಸ್ಥೂಲವಾಗಿ ಇಲ್ಲಿ ಪರಿಶೀಲಿಸಲಾಗಿದೆ.

1. ನಮ್ಮ ಸಂವಿಧಾನವು ತೆರಿಗೆಗಳನ್ನು ವಿಧಿಸುವ ಅಧಿಕಾರವನ್ನು ಒಕ್ಕೂಟ ಹಾಗೂ ರಾಜ್ಯ ಸರ್ಕಾರಗಳಿಗೆ ನೀಡಿದೆ. ಅನುಸೂಚಿ 7 ರಲ್ಲಿನ ಒಕ್ಕೂಟ ಪಟ್ಟಿಯಲ್ಲಿನ 82 ರಿಂದ 92ಬಿ ವರೆಗಿನ ಬಾಬ್ತುಗಳ ಮೇಲೆ ಒಕ್ಕೂಟ ಸರ್ಕಾರ ತೆರಿಗೆ ವಿಧಿಸಬಹುದು ಮತ್ತು ರಾಜ್ಯ ಪಟ್ಟಿಯಲ್ಲಿನ 45 ರಿಂದ 63 ರವರೆಗಿನ ಬಾಬ್ತುಗಳ ಮೇಲೆ ರಾಜ್ಯಗಳು ತೆರಿಗೆ ವಿಧಿಸಬಹುದು. ಸಂವಿಧಾನದ 73 ಮತ್ತು 74ನೆಯ ತಿದ್ದುಪಡಿಯ ನಂತರ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೂ ತೆರಿಗೆ ವಿಧಿಸುವ ಸೀಮಿತ ಅಧಿಕಾರ ನೀಡಲಾಗಿದೆ. ಆದರೆ ಇಂದು 'ಒಂದು ದೇಶ; ಒಂದು ತೆರಿಗೆ' ಎಂಬ ಏಕಾಕಾರಿ – ಏಕಾತ್ಮಕ ಪ್ರಣಾಳಿಕೆಯ ಮೂಲಕ ರಾಜ್ಯಗಳ ತೆರಿಗೆ ವಿಧಿಸುವ ಅಧಿಕಾರವನ್ನು ಒಕ್ಕೂಟ ಸರ್ಕಾರವು ಕುಬ್ಜಗೊಳಿಸಿದೆ. ಸಂವಿಧಾನದ 101ನೆಯ ತಿದ್ದುಪಡಿಯ ಮೂಲಕ 2017ರಲ್ಲಿ ಸರಕು–ಸೇವಾ ತೆರಿಗೆ ಎಂಬ ಅಪ್ರತ್ಯಕ್ಷ ಏಕಾಕಾರಿ ತೆರಿಗೆಯನ್ನು ಜಾರಿಗೊಳಿಸಲಾಗಿದೆ. ಈ ತೆರಿಗೆಯ ರೆವಿನ್ಯೂ ಒಕ್ಕೂಟ ಸರ್ಕಾರಕ್ಕೆ ಸೇರುತ್ತದೆ. ಅದರಲ್ಲಿ ರಾಜ್ಯಗಳು ತಮ್ಮ ಪಾಲನ್ನು ಕಡೆಯಬೇಕಾಗಿದೆ. ಈ ತೆರಿಗೆಯ ನಿಯಮಗಳನ್ನು ರೂಪಿಸುವ ಅಧಿಕಾರವು ಜಿಎಸ್‌ಟಿ ಮಂಡಳಿಗಿದೆ. ಈ ಮಂಡಳಿಯಲ್ಲಿ ಮತದಾನವು ಒಕ್ಕೂಟ ಸರ್ಕಾರಕ್ಕೆ ಅನುಕೂಲಕರವಾಗಿದೆ. ಏಕೆಂದರೆ ಒಟ್ಟು ಮತಗಳಲ್ಲಿ ಮೂರನೆಯ ಒಂದರಷ್ಟು ಒಕ್ಕೂಟ ಸರ್ಕಾರಕ್ಕಿದ್ದರೆ ಮೂರನೆ ಎರಡರಷ್ಟು ರಾಜ್ಯಗಳಿಗಿದೆ. ಒಕ್ಕೂಟ ಮತ್ತು ಕೆಲವು ರಾಜ್ಯಗಳಲ್ಲಿ ಸರ್ಕಾರಗಳು ಒಂದೇ ಪಕ್ಷದ್ದಾಗಿದ್ದಾಗ ತೀರ್ಮಾನ ಒಕ್ಕೂಟ ಸರ್ಕಾರದ ಪರವಾಗಿಬಿಡುತ್ತದೆ. ಆದ್ದರಿಂದ ರಾಜ್ಯಗಳ ಸ್ವಾಯತ್ತತೆಗೆ ದಕ್ಕೆಯುಂಟಾಗುತ್ತದೆ. ಉದಾ: ಜಿಎಸ್‌ಟಿ ಸಂಗ್ರಹದಲ್ಲಿ ಕೊರತೆಯುಂಟಾದರೆ ಆ ಕೊರತೆಯನ್ನು ತುಂಬಲು ಒಕ್ಕೂಟ ಸರ್ಕಾರ ಐದು ವರ್ಷಗಳ ಕಾಲ(2017–2022)'ಪರಿಹಾರ' ನೀಡಬೇಕು ಎಂಬ ಕಾಯಿದೆ ಮಾಡಲಾಗಿದೆ. ಕೊವಿಡ್ ಪೆಂಡಮಿಕ್‌ನಿಂದಾಗಿ ರಾಜ್ಯಗಳ ಹಣಕಾಸು ಪರಿಸ್ಥಿತಿಯು ಬಿಕ್ಕಟ್ಟಿಗೆ ಸಿಲುಕಿದೆ. ಆದ್ದರಿಂದ ಪರಿಹಾರ ನೀಡುವ ಕ್ರಮವನ್ನು 2022ರ ನಂತರ ಮತ್ತೆ ಐದು ವರ್ಷಕ್ಕೆ ವಿಸ್ತರಿಸಬೇಕು ಎಂಬ ರಾಜ್ಯಗಳ ಬೇಡಿಕೆಯನ್ನು ಜಿಎಸ್‌ಟಿ ಮಂಡಳಿಯು ಮನ್ನಿಸುತ್ತಿಲ್ಲ. ಸರ್ವೋಚ್ಚ ನ್ಯಾಯಾಲಯವೇನೋ ಜಿಎಸ್‌ಟಿ ಮಂಡಳಿಯ ನಿರ್ಣಯವನ್ನು ಒಪ್ಪುವುದು ಕಡ್ಡಾಯವೇನಲ್ಲ ಎಂಬ ತೀರ್ಪು ನೀಡಿದೆ. ಆದರೆ ಒಕ್ಕೂಟ ಸರ್ಕಾರಕ್ಕೆ ತನ್ನ ಬ್ರೂಟ್ ಬಹುಮತವನ್ನು ಬಳಸಿಕೊಂಡು ರಾಜ್ಯಗಳ ಮೇಲೆ ತನ್ನ ನಿರ್ಣಯವನ್ನು ಹೇರುವುದು ಸಾಧ್ಯವಾಗುತ್ತದೆ. ಈ 'ಒಂದು ದೇಶ: ಒಂದು ತೆರಿಗೆ' ಪ್ರಣಾಳಿಕೆಯಿಂದಾಗಿ ಹಣಕಾಸು ಸಂಪನ್ಮೂಲಕ್ಕಾಗಿ ಒಕ್ಕೂಟ ಸರ್ಕಾರವನ್ನು ರಾಜ್ಯಗಳಿಗೆ ಕೈಯೊಡ್ಡಿ ಬೇಡುವ ಸ್ಥಿತಿ ಬಂದಿದೆ. ಸ್ವತಂತ್ರ ಹಣಕಾಸು ಸಂಪನ್ಮೂಲ ಇಲ್ಲದೆ ಇರುವುದರಿಂದ ರಾಜ್ಯಗಳು ತಮ್ಮದೇ ಅಭಿವೃದ್ಧಿ ನೀತಿಯನ್ನು, ಕಾರ್ಯಯೋಜನೆಯನ್ನು ಹಮ್ಮಿಕೊಳ್ಳುವುದಕ್ಕೆ ಬರುವುದಿಲ್ಲ. ಅವು ಒಕ್ಕೂಟದ ಯೋಜನೆಗಳಿಗೆ ತಲೆ ಬಾಗಬೇಕಾಗುತ್ತದೆ. ಭಾರತದಂತಹ ಉಪಖಂಡದೋಪಾದಿ ವಿಸ್ತೀರ್ಣದ ದೇಶದಲ್ಲಿ ಏಕರೂಪಿ ತೆರಿಗೆ ವ್ಯವಸ್ಥೆಯ ಅಗತ್ಯವಿಲ್ಲ. ಇದು ರಾಜ್ಯಗಳ ರಾಜಕೀಯ, ಹಣಕಾಸು, ಅಭಿವೃದ್ಧಿ, ಆರ್ಥಿಕ ಅಧಿಕಾರಗಳನ್ನು ಲುಪ್ತ ಮಾಡಿಬಿಡುತ್ತದೆ.

2. ಒಕ್ಕೂಟ ಸರ್ಕಾರವು ಸಂವಿಧಾನಾತ್ಮಕ ಒಕ್ಕೂಟ ತತ್ವವನ್ನು ಪಾಲಿಸುತ್ತಿಲ್ಲ ಉದ್ದೇಶಪೂರ್ವಕವಾಗಿ ಇಂದಿನ ಒಕ್ಕೂಟ ಸರ್ಕಾರವು ತನ್ನ ಸಂವಿಧಾನಾತ್ಮಕ ಕರ್ತವ್ಯಗಳನ್ನು ನಿರ್ವಹಿಸುತ್ತಿಲ್ಲ. ಉದಾ: ಈಗಾಗಲೆ ಹೇಳಿದಂತೆ ಉಪಖಂಡದೋಪಾದಿ ದೇಶದಲ್ಲಿ ಎಲ್ಲ ರಾಜ್ಯಗಳು – ರಾಜ್ಯಗಳೊಳಗಿನ ಪ್ರದೇಶಗಳು ಆರ್ಥಿಕ–ಸಾಮಾಜಿಕ ಅಭಿವೃದ್ಧಿ ದೃಷ್ಟಿಯಿಂದ ಏಕರೂಪಿಯಾಗಿಲ್ಲ. ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮಾನತೆ ವ್ಯಾಪಕವಾಗಿದೆ. ಉದಾ: ಬಿಹಾರದ ತಲಾ ವರಮಾನ 2020–21ರಲ್ಲಿ ರೂ. 46292, ಉತ್ತರ ಪ್ರದೇಶದಲ್ಲಿ ರೂ.65431 ಮತ್ತು ಒರಿಸ್ಸಾ ರಾಜ್ಯದಲ್ಲಿ ಇದು ರೂ.109730ರಷ್ಟಿದ್ದರೆ ಪಂಜಾಬಿನಲ್ಲಿ ಇದು ರೂ.151367, ತಮಿಳುನಡಿನಲ್ಲಿ ರೂ. 225106 ಮತ್ತು ಕರ್ನಾಟಕದಲ್ಲಿ ರೂ.226796ರಷ್ಟಿದೆ. ಇದು ಏನನ್ನು ಸೂಚಿಸುತ್ತದೆ? ಇದಿಷ್ಟೆ ಅಲ್ಲ. ರಾಜ್ಯಗಳೊಳಗೆ ಅಸಮಾನತೆಗಳಿವೆ. ಉದಾ: ಕನಾಟಕದ ರಾಜ್ಯ ಸರಾಸರಿ ಬಹುಮುಖಿ ಬಡತನದ ಪ್ರಮಾಣ ಶೇ. 13.16ರಷ್ಟಿದ್ದರೆ ಯಾದಗಿರಿ ಜಿಲ್ಲೆಯಲ್ಲಿ ಇದರ ಪ್ರಮಾಣ ಶೇ. 41.67ರಷ್ಟಿದೆ. ಇವೆಲ್ಲವೂ ರಾಷ್ಟ್ರೀಯ ಸಮಸ್ಯೆಗಳು. ಬಡತನಕ್ಕೆ ಸಂಬಂಧಿಸಿದಂತೆಯೂ ರಾಜ್ಯ – ರಾಜ್ಯಗಳ ನಡುವೆ ಅಸಮಾನತೆಗಳಿವೆ. ಉದಾ. ಬಿಹಾರದಲ್ಲಿ ಬಹುಮುಖಿ ಬಡತನ ಶೇ.51.91 ರಷ್ಟಿದ್ದರೆ ಕೇರಳದಲ್ಲಿ ಇದು ಶೇ.0.71 ರಷ್ಟಿದೆ. ಜಾರ್ಖಂಡದಲ್ಲಿ ಇದು ಶೇ. 42.36ರಷ್ಟಿದ್ದರೆ ತಮಿಳುನಡಿನಲ್ಲಿ ಇದು ಶೇ. 4.89 ರಷ್ಟಿದೆ. ಬಡತನವನ್ನು ತೊಡೆದು ಹಾಕುವುದು ರಾಜ್ಯಗಳ ಜವಾಬ್ದಾರಿ ನಿಜ. ಆದರೆ ಒಕ್ಕೂಟ ಸರ್ಕಾರದ ಜವಾಬ್ದಾರಿಯೂ ಇರುತ್ತದೆ. ದೇಶದಲ್ಲಿ 2014ಕ್ಕೆ ಹಿಂದೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದಕ್ಕೆ ಒಕ್ಕೂಟ ಸರ್ಕಾರವು ಹಣಕಾಸು ನೆರವನ್ನು ನೀಡುತ್ತಿತ್ತು. ಉದಾ: ಬ್ಯಾಕ್‌ವರ್ಡ್ ರೀಜನ್ ಗ್ರಾಂಟ್ ಫಂಡ್(ಬಿಆರ್‌ಜಿಎಫ್) ಎಂಬ ಯೋಜನೆಯ ಮೂಲಕ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಒಕ್ಕೂಟ ಹಣಕಾಸು ನೆರವು ನೀಡುತ್ತಿತ್ತು. ಆದರೆ ಇಂದು ಅಭಿವೃದ್ಧಿಯ ಎಲ್ಲ ಜವಾಬ್ದಾರಿಯನ್ನು, ಬಡತನದ ನಿವಾರಣೆಯ ಹೊಣೆಗಾರಿಕೆಯನ್ನು ರಾಜ್ಯಗಳಿಗೆ ಬಿಡಲಾಗಿದೆ.

ದೇಶದ ಹಿಂದುಳಿದ 100ಕ್ಕೂ ಮಿಕ್ಕು ಜಿಲ್ಲೆಗಳನ್ನು 'ಆಸ್ಪಿರೇಶನಲ್ ಡಿಸ್ಟ್ರಿಕ್ಟ್ಸ್' ಎಂದು ಒಕ್ಕೂಟ ಸರ್ಕಾರದ ಥಿಂಕ್ ಟ್ಯಾಂಕ್ ನೀತಿ ಆಯೋಗ ಗುರುತಿಸಿದೆ. ಇವುಗಳ ಹಿಂದುಳಿದಿರುವಿಕೆಯ ಸೂಚಿಗಳನ್ನು ರೂಪಿಸಿದೆ. ಅವುಗಳ ಅಭಿವೃದ್ಧಿಗೆ ಮಾರ್ಗಸೂಚಿಗಳನ್ನು ನೀಡಿದೆ. ಆದರೆ ಇದಕ್ಕೆ ಒಕ್ಕೂಟ ಸರ್ಕಾರ ಹಣಕಾಸು ಅನುದಾನ ನೀಡಿಲ್ಲ. ಇದನ್ನು ರಾಜ್ಯಗಳ ಜವಾಬ್ದಾರಿಯನ್ನಾಗಿ ಮಾಡಲಾಗಿದೆ. ಅತಿವೃಷ್ಠಿ ಅಥವಾ ಬರಗಾಲ ಎದುರಿಸುವ ರಾಜ್ಯಗಳಿಗೆ ನೆರವಾಗುವ ಕ್ರಮವನ್ನೂ ಒಕ್ಕೂಟ ಸರ್ಕಾರ ಕೈಬಿಟ್ಟಿದೆ. ಕೊವಿಡ್ ನಂತಹ ಮಹಾಮಾರಿ ಬಂದಾಗಲೂ ರಾಜ್ಯಗಳ ಆರೋಗ್ಯ ಸೇವೆಗೆ ಹೆಚ್ಚಿನ ನೆರವನ್ನು ಒಕ್ಕೂಟ ನೀಡಲಿಲ್ಲ.

3. ಸಂವಿಧಾನದಲ್ಲಿ ಒಕ್ಕೂಟ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯಗಳನ್ನು ಪ್ರತ್ಯೇಕವಾಗಿ ಹಂಚಲಾಗಿದೆ. ಇದನ್ನು ಒಕ್ಕೂಟ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಂಯುಕ್ತ ಪಟ್ಟಿ ಎಂದು ವಿಂಗಡಿಸಲಾಗಿದೆ.(ನೆಯ ಶೆಡ್ಯೂಲ್). ಕೃಷಿಯು ಮೂಲತಃ ರಾಜ್ಯ ಪಟ್ಟಿಯಲ್ಲಿರುವ ಒಂದು ವಲಯ. ನಮ್ಮ ಸಂವಿಧಾನವು ಅನುಷ್ಠಾನಗೊಂಡ 1950 ರಿಂದ 2013ರವರೆಗೆ ಕೃಷಿಯ ಅಭಿವೃದ್ಧಿಗೆ ಕಾಯಿದೆಗಳನ್ನು ರಾಜ್ಯ ಸರ್ಕಾರಗಳು ರೂಪಿಸಿಕೊಂಡು ಮತ್ತು ನಿರ್ವಹಿಸಿಕೊಂಡು ಬರುತ್ತಿದ್ದವು. 'ಉಳುವವರಿಗೆ ಭೂಮಿ' ಎಂಬ, 'ಗೇಣಿದಾರರಿಗೆ ಭೂಮಿ' ಎಂಬ, 'ಭೂಮಿತಿ' ಎಂಬ ಶಾಸನಗಳನ್ನು ತಂದು ಕರ್ನಾಟಕ ಸರ್ಕಾರ ಅತಿಸಣ್ಣ ಮತ್ತು ಸಣ್ಣ ರೈತರ ಹಿತಾಸಕ್ತಿಯನ್ನು ಒಂದು ಮಿತಿಯೊಳಗೆ ಕಾಪಾಡಿಕೊಂಡು ಬಂದಿತ್ತು. ಆದರೆ ಇಂದು ಒಕ್ಕೂಟ ಸರ್ಕಾರವೇ ಕೃಷಿ ಸಂಬಂಧಿಸಿದ ಮೂರು ಕಾಯಿದೆಗಳನ್ನು 2020ರಲ್ಲಿ ಜಾರಿಗೊಳಿಸಿತು(ಅವು ಈಗ ರದ್ದಾಗಿವೆ. ಅದು ಬೇರೆ ಸಂಗತಿ). ಅದರ ನಿರ್ದೇಶನದಲ್ಲಿ ಕರ್ನಾಟಕ ಸರ್ಕಾರವೂ ಭೂಸುಧಾರಣಾ ತಿದ್ದುಪಡಿ ಕಾಯಿದೆ, ಎಪಿಎಮ್‌ಸಿ ಕಾಯಿದೆಗಳನ್ನು ತಂದಿದೆ. ಒಕ್ಕೂಟ ಸರ್ಕಾರದ ನಿರ್ದೇಶನದಲ್ಲಿ ಇವುಗಳನ್ನು ರಾಜ್ಯ ಜಾರಿಗೊಳಿಸಿದೆ. ಹೀಗೆ ರಾಜ್ಯ ಸರ್ಕಾರಗಳ ಅಧಿಕಾರಗಳನ್ನು ಒಕ್ಕೂಟ ಕಬಳಿಸುತ್ತಿದೆ ಮಾತ್ರವಲ್ಲ ಕೃಷಿಯಲ್ಲಿ ಖಾಸಗಿ ಕಾರ್ಪೋರೇಟುಗಳ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಕೃಷಿ, ಕೃಷಿ ಉತ್ಪನ್ನ ಮಾರುಕಟ್ಟೆ, ಹೈನುಗಾರಿಕೆ – ಹೈನೋದ್ಯಮ, ಜಾನುವಾರು ಆರ್ಥಿಕತೆ –– ಎಲ್ಲವನ್ನೂ ಕಾರ್ಪೋರೇಟೀಕರಣಕ್ಕೆ ಒಳಪಡಿಸುತ್ತಿದೆ. ರಾಜ್ಯಗಳ ಸಂವಿಧಾನದತ್ತ ಅಧಿಕಾರಗಳನ್ನು ಒಂದು ಕಡೆ ಒಕ್ಕೂಟ ಸರ್ಕಾರ ಕಸಿದುಕೊಳ್ಳುತ್ತಿದೆ ಮತ್ತೊಂದು ಕಡೆ ರಾಜ್ಯಗಳ ಆರ್ಥಿಕತೆಗಳನ್ನು ಕಾರ್ಪೋರೇಟುಗಳಿಗೆ ಗುತ್ತಿಗೆ ನೀಡಲಾಗುತ್ತಿದೆ. ನಮ್ಮ ಸಂವಿಧಾನದಲ್ಲಿ ವಿದ್ಯುತ್ತನ್ನು ಸಂಯುಕ್ತ ಪಟ್ಟಿಯಲ್ಲಿಡಲಾಗಿದೆ. ಈಗ ಒಕ್ಕೂಟ ಸರ್ಕಾರವು ವಿದ್ಯುತ್ತಿಗೆ ಸಂಬಂಧಿಸಿದ ಎಲ್ಲ ಅಧಿಕಾರಗಳನ್ನು ತನ್ನ ವಶಪಡಿಸಿಕೊಳ್ಳುವ ಕ್ರಮವನ್ನು ತೆಗೆದುಕೊಳ್ಳುತ್ತಿದೆ. ಒಕ್ಕೂಟ ತತ್ವಕ್ಕೆ ವಿರುದ್ಧವಾದ ವಿದ್ಯುತ್(ತಿದ್ದುಪಡಿ)ಮಸೂದೆ 2022 ಎಂಬುದನ್ನು ಸಂಸತ್ತಿನಲ್ಲಿ ಕಳೆದ ಆಗಸ್ಟ್ 08 ರಂದು ಮಂಡಿಸಿದೆ. ಇದರಲ್ಲಿ ರಾಜ್ಯಗಳ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣೆ ಅಧಿಕಾರಗಳನ್ನು ಮೊಟಕುಗೊಳಿಸುವ ಕ್ರಮಗಳಿವೆ.

4. ಸಂವಿಧಾನದಲ್ಲಿ ಶಿಕ್ಷಣವು ರಾಜ್ಯಗಳ ಪಟ್ಟಿಯಲ್ಲಿತ್ತು. ಆದರೆ 1976ರಲ್ಲಿ ಸಂವಿಧಾನಕ್ಕೆ 42ನೆಯ ತಿದ್ದುಪಡಿ ಮಾಡಿ ಶಿಕ್ಷಣವನ್ನು ಸಂಯುಕ್ತ ಪಟ್ಟಿಗೆ ಸೇರಿಸಲಾಯಿತು. ಇದನ್ನು ದುರುಪಯೋಗ ಪಡಿಸಿಕೊಂಡು ಇಂದಿನ ಸರ್ಕಾರವು ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಅಧಿಕಾರಗಳನ್ನು ತನ್ನ ವಶಕ್ಕೆ ಪಡೆದುಕೊಳ್ಳುತ್ತಿದೆ. ಉದಾ: ರಾಜ್ಯಗಳು ನಡೆಸಿಕೊಂಡು ಬರುತ್ತಿದ್ದ ವೈದ್ಯಕೀಯ ಪ್ರವೇಶ ಪರೀಕ್ಷೆಗಳನ್ನು ತೊಡೆದು ಹಾಕಿ ಈಗ ಒಕ್ಕೂಟ ಸರ್ಕಾರವು 'ನೀಟ್'(ಎನ್‌ಈಈಟಿ) ಎಂಬ ವ್ಯವಸ್ಥೆಯ ಮೂಲಕ ಒಕ್ಕೂಟ ಸರ್ಕಾರವೇ ನಡೆಸುತ್ತಿದೆ. ವಿಶ್ವವಿದ್ಯಾಲಯಗಳ ಪ್ರವೇಶ

ಪುಟ 10 ಕ್ಕೆ



ಒಕ್ಕೂಟವಲ್ಲದ ಭಾರತ ಉಳಿಯಬಲ್ಲುದೇ...?

ಡಾ. ಪ್ರಕಾಶ್ ಕೆ.

"ಒಂದು ದೇಶ, ಒಂದು ಭಾಷೆ" ಜಾರಿಗೆ ತರುವ ನಿಟ್ಟಿನಲ್ಲಿ ಮೋದಿ ಸರ್ಕಾರ ಮತ್ತೊಂದು ಹೆಜ್ಜೆ ಇಟ್ಟಿದೆ. ಅಮಿತ್ ಶಾ ನೇತೃತ್ವದ 'ಅಧಿಕೃತ ಭಾಷಾ ಸಮಿತಿ' ತನ್ನ 11ನೇ ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದೆ. ಭಾರತದ 8ನೇ ಷೆಡ್ಯೂಲ್‌ನಲ್ಲಿ ರಾಷ್ಟ್ರಭಾಷೆಗಳೆಂದು ಅಂಗೀಕಾರವಾಗಿರುವ ಇತರ 21 ಭಾಷೆಗಳನ್ನು ಮೂಲೆಗುಂಪು ಮಾಡಿ, ಹಿಂದಿಯನ್ನು ಹೇರುವ ಶಿಫಾರಸ್ಸು ಸೇರಿದಂತೆ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಹಲವು ಶಿಫಾರಸ್ಸುಗಳನ್ನು ಈ ಸಮಿತಿ ಮಾಡಿದೆ.

ಅಮಿತ್ ಶಾ ಸಮಿತಿಯ ಮುಖ್ಯ ಶಿಫಾರಸ್ಸು; ಒಕ್ಕೂಟ ಸರ್ಕಾರವು ಹಣ ನೀಡುವ ಕೇಂದ್ರೀಯ ವಿದ್ಯಾಲಯಗಳು, ಐಐಟಿಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಭೋಧನಾ ಮಾಧ್ಯಮವು ಕಡ್ಡಾಯವಾಗಿ ಹಿಂದಿಯಾಗಿರಬೇಕು. ಈ ಶಿಕ್ಷಣ ಸಂಸ್ಥೆಗಳಲ್ಲಿ ಸಾಮಾನ್ಯವಾಗಿ ದೇಶದ ಎಲ್ಲಾ ಭಾಷೆಗಳ ವಿದ್ಯಾರ್ಥಿಗಳಿಗೆ ಪ್ರವೇಶವಿರಬೇಕು. ಆದರೆ ಹಿಂದಿ ಕಡ್ಡಾಯವಾಗುವುದರಿಂದ ಕನ್ನಡವೂ ಸೇರಿದಂತೆ ಉಳಿದೆಲ್ಲಾ ಭಾಷೆಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಸರ್ಕಾರಿ ಉದ್ಯೋಗಕ್ಕೆ ನೇಮಕಾತಿ ಪರೀಕ್ಷೆಗಳೂ ಹಿಂದಿಯಲ್ಲೇ ಎಂಬಂತಾಗಿದೆ. ಇನ್ನೂ ಇಂತಹ ಹಲವು ಶಿಫಾರಸ್ಸುಗಳನ್ನು ಈ ಸಮಿತಿ ಮಾಡಿದೆ.

ಇತ್ತೀಚೆಗೆ ಪ್ರಧಾನಿ ಮೋದಿ, ಎಲ್ಲಾ ರಾಜ್ಯಗಳ ಪೊಲೀಸರಿಗೂ ಒಂದೇ ರೀತಿಯ ಸಮವಸ್ತ್ರದ ಪ್ರಸ್ತಾಪ ಮಾಡಿದ್ದಾರೆ. 'ಒಂದು ದೇಶ, ಒಂದು ತೆರಿಗೆ', 'ಒಂದು ದೇಶ, ಒಂದು ಸಂಸ್ಕೃತಿ', 'ಒಂದು ದೇಶ, ಒಂದು ಮತಧರ್ಮ', 'ಒಂದು ದೇಶ, ಒಂದು ಭಾಷೆ' ಇತ್ಯಾದಿಗಳೆಲ್ಲವೂ ಭಾರತದ ಒಕ್ಕೂಟ ವ್ಯವಸ್ಥೆಯನ್ನು ನಾಶ ಮಾಡಿ ಎಲ್ಲವನ್ನೂ ಕೇಂದ್ರೀಕರಿಸುವ ಉದ್ದೇಶದ್ದಾಗಿದೆ. ಸಂವಿಧಾನದ ಮೂಲ ತಳಹದಿಯಾದ ಒಕ್ಕೂಟ ತತ್ವಕ್ಕೆ ಕೊಡಲಿಪೆಟ್ಟು ನೀಡುವ ಇಂತಹ ಕ್ರಮಗಳು ಮೋದಿ ಸರ್ಕಾರದ ಅಡಿಯಲ್ಲಿ ತೀವ್ರಗೊಂಡಿದೆ.

2014 ರ ಚುನಾವಣೆಯಲ್ಲಿ ಕೇಂದ್ರ–ರಾಜ್ಯಗಳ ಸಂಬಂಧಗಳನ್ನು ಗಟ್ಟಿಗೊಳಿಸುವ ಬಗ್ಗೆ ಮಾತನಾಡಿದ್ದ ಮೋದಿ ಸರ್ಕಾರ, ಅದರ ಬದಲಿಗೆ, ರಾಜ್ಯಗಳಿಗೆ ಅಲ್ಪ ಪ್ರಮಾಣದ ಪ್ರಾತಿನಿಧ್ಯವನ್ನಾದರೂ ಒದಗಿಸಿದ್ದ ಯೋಜನಾ ಆಯೋಗವನ್ನು ರದ್ದು ಮಾಡಿ, ಅತ್ಯಂತ ದುರ್ಬಲ ಮತ್ತು ಅಧಿಕಾರಹೀನ "ನೀತಿ" ಆಯೋಗವನ್ನು ರಚಿಸಿತು. ನಂತರದಲ್ಲಿ ಒಂದರ ಹಿಂದೆ ಒಂದರಂತೆ, ರಾಜ್ಯಗಳ ಶಾಸನಾತ್ಮಕ ಅಧಿಕಾರಗಳನ್ನೆಲ್ಲಾ ಮೊಟಕುಗೊಳಿಸುವ ಕೆಲಸದಲ್ಲಿ ಮೋದಿ ಸರ್ಕಾರ ತೊಡಗಿದೆ.

ಈ ಲೇಖನದಲ್ಲಿ ಮುಖ್ಯವಾಗಿ, ಭಾರತದ ಐಕ್ಯತೆ ಮತ್ತು ಸಮಗ್ರತೆಯ ತಳಹದಿಯಾಗಿರುವ ಒಕ್ಕೂಟ–ರಾಜ್ಯಗಳ ನಡುವಿನ ಸಂಬಂಧದಲ್ಲಿ ರಾಜ್ಯಗಳಿಗಿದ್ದ ಶಾಸನಾತ್ಮಕ ಅಧಿಕಾರವನ್ನು ನಿರಂತರವಾಗಿ ದುರ್ಬಲಗೊಳಿಸುತ್ತಿರುವ ಕುರಿತು ಚರ್ಚಿಸಲಾಗಿದೆ.

ಚಾರಿತ್ರಿಕ ಹಿನ್ನೆಲೆ:

ಭಾರತವೆಂಬ ಒಕ್ಕೂಟವು ಸಂವಿಧಾನಿಕವಾಗಿ ಜನ್ಮ ತಾಳುವ ಮೊದಲು, ಒಕ್ಕೂಟ ತತ್ವವು ಅದರ ಬೇರುಗಳನ್ನು ಬ್ರಿಟಿಷ್ ಆಡಳಿತದಲ್ಲೇ ಪಡೆದುಕೊಂಡಿತ್ತು. ಆದರೆ ಅದು ಅದೊಂದು ಸ್ಪಷ್ಟವಾದ ಪ್ರಜಾಪ್ರಭುತ್ವದ ನೆಲೆಗಟ್ಟಿನಲ್ಲೇನೂ ಸಂಭವಿಸಿರಲಿಲ್ಲ. ಬ್ರಿಟಿಷರು 500 ಕ್ಕೂ ಹೆಚ್ಚು ರಾಜರು ಮತ್ತು ನವಾಬರ ರಾಜ್ಯಗಳನ್ನೂ ಒಳಗೊಂಡು ದೇಶವನ್ನು ಹಲವು ಪ್ರಾಂತ್ಯಗಳಾಗಿ ವಿಂಗಡಿಸಿದ್ದರು. ಈ ವಿಭಜನೆಗಳು ಜನರ ಪ್ರಜಾಸತ್ತಾತ್ಮಕ ಆಶೋತ್ತರಗಳ ಆಧಾರದಲ್ಲಿ, ಭಾಷಾವಾರು ರಾಜ್ಯಗಳಾಗಿಯೂ ಆಗಿರಲಿಲ್ಲ. ಬ್ರಿಟಿಷ್ ಬಂಡವಾಳದ ಚಲನೆ ಮತ್ತು ಲಾಭದ ಅನುಕೂಲಕರ ಆಯಕಟ್ಟಿನ ಆಧಾರದಲ್ಲಿ, ಬಂಡವಾಳಶಾಹಿ ಪ್ರಜಾಪ್ರಭುತ್ವದ ಭಾಗವಾಗಿ ಸಂಭವಿಸಿತ್ತು. ಇದರ ಭಾಗವಾಗಿ 1909 ಮತ್ತು 1919 ರ ಸುಧಾರಣೆಗಳು ಮತ್ತು 1935 ರ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಮೂಲಕ ಜಾರಿ ಮಾಡಲಾದ ಬಂಡವಾಳಶಾಹಿ ಪ್ರಜಾಪ್ರಭುತ್ವೀಯ ಪ್ರಕ್ರಿಯೆಯ ಲಾಭವನ್ನು ಮೊದಲಿಗೆ ಪಡೆದದ್ದು ಈ ರಾಜ್ಯಗಳು ಮತ್ತು ಪ್ರಾಂತ್ಯಗಳು. ಇವೆಲ್ಲವೂ ಮುಂದೆ ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ನಿರ್ದಿಷ್ಟ ರೂಪವನ್ನು ಪಡೆದುಕೊಂಡವು. ಒಟ್ಟಾರೆ ಭಾರತದ ಒಕ್ಕೂಟವಾದವು ಭಾರತದ ಭಾಷಾವಾರು ವೈವಿಧ್ಯತೆಯೊಳಗಿನಿಂದ ರೂಪುಗೊಂಡ ಉತ್ಪನ್ನವಾಗಿದೆ.

ಭಾರತದ ರಾಷ್ಟ್ರೀಯತೆಯು ಏಕ ಭಾಷೆ, ಏಕ ಮತಧರ್ಮ, ಏಕ ಸಂಸ್ಕೃತಿ ಹಿನ್ನೆಲೆಯ ಯುರೋಪಿಯನ್ ಮಾದರಿಯದ್ದಲ್ಲ. ಬದಲಿಗೆ ಬಹುಭಾಷೆಗಳ, ಬಹು ಮತಧರ್ಮಗಳ, ಬಹು ಸಂಸ್ಕೃತಿಗಳ, ಒಟ್ಟಾರೆಯಾಗಿ ಬಹುತ್ವದ ನೆಲೆಗಟ್ಟಿನ ರಾಷ್ಟ್ರೀಯತೆ. ಬ್ರಿಟಿಷ್ ವಿರೋಧಿ ಹೋರಾಟದಲ್ಲಿ ರೂಪುಗೊಂಡ ಆಧುನಿಕವಾದ ಬಹುತ್ವದ ರಾಷ್ಟ್ರೀಯತೆ. ಹೀಗಾಗಿ ಭಾರತವು ಹಲವು ರಾಷ್ಟ್ರೀಯತೆಗಳ ಒಂದು ದೇಶ. ಭಾರತದ ಒಕ್ಕೂಟ ತತ್ವವು ಮೂಲತಃ ಇಂತಹ ಪರಿಸ್ಥಿತಿಯಿಂದ ಹೊರಹೊಮ್ಮಿದೆ. ಒಕ್ಕೂಟ ಸರ್ಕಾರ ಮತ್ತು ರಾಜ್ಯಗಳ ನಡುವಿನ ಅಧಿಕಾರಗಳು, ಕಾರ್ಯಗಳು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ ಹೊಂದಾಣಿಕೆಯು ಒಕ್ಕೂಟ ತತ್ವದ ಬಹುಮುಖ್ಯ ಅಂಶವಾಗಿದೆ.

ಸ್ವಾತಂತ್ರ್ಯ ನಂತರದಲ್ಲಿ ಅಪಾರವಾದ ಸಾಮಾಜಿಕ–ಆರ್ಥಿಕ–ರಾಜಕೀಯ ಬದಲಾವಣೆಗಳು ಸಂಭವಿಸಿದ್ದು, ಅದರ ಪರಿಣಾಮವಾಗಿ ಕೇಂದ್ರ–ರಾಜ್ಯ ಸಂಬಂಧಗಳಲ್ಲೂ ಬದಲಾವಣೆಗಳಾಗಿವೆ. 1991 ರ ನಂತರ ಬಂಡವಾಳಶಾಹಿ ಯೋಜಿತ ಆರ್ಥಿಕ ಬೆಳವಣಿಗೆ ಪಥದಿಂದ ಪೂರ್ಣವಾಗಿ ಮುಕ್ತ ಮಾರುಕಟ್ಟೆ ಆಧಾರಿತ ಪಥಕ್ಕೆ ಹೊರಳಿದ್ದರಿಂದ ಒಕ್ಕೂಟ ವ್ಯವಸ್ಥೆಗೆ ನೂತನವಾದ ಸಮಸ್ಯೆಗಳು ಮತ್ತು ಸವಾಲುಗಳು ಎದುರಾಗಿದೆ. ಇವು ಭಾರತದ ಜನತೆಯ ಜೀವನಗಳ ಮೇಲೆ ಮತ್ತು ಪ್ರಜಾಪ್ರಭುತ್ವದ ಕಾರ್ಯಾಚರಣೆಯ ಮೇಲೆ ಗಂಭೀರವಾದ ಪರಿಣಾಮ ಬೀರಿವೆ.

ಸಿಪಿಐ(ಎಂ)ನ ಕಾರ್ಯಕ್ರಮದಲ್ಲಿ ಈ ಬೆಳವಣಿಗೆಯನ್ನು ಹೀಗೆ ಹೇಳಲಾಗಿದೆ:

"ದೊಡ್ಡ ಬಂಡವಾಳಶಾಹಿಗಳು ಆರಂಭದಲ್ಲಿ ಭಾಷೆಯ ಸಾಮಾನ್ಯತೆಯ ಆಧಾರದಲ್ಲಿ ರಾಜ್ಯಗಳ ರಚನೆಯ ಬೇಡಿಕೆಯನ್ನು ವಿರೋಧಿಸಿದರೂ, ಸಾಮೂಹ ಆಂದೋಲನಗಳ ಹಾಗೂ ಚಳುವಳಿಗಳ ತೀವ್ರ ಒತ್ತಡವು ಭಾಷಾವಾರು ರಾಜ್ಯಗಳ ರಚನೆಗೆ ಒಪ್ಪುವಂತೆ ಒತ್ತಾಯ ಹೇರಿತು. ಭಾಷಾವಾರು ರಾಜ್ಯಗಳ ನೀತಿಯ ಮೇಲೆ ಬಿಜೆಪಿ ನೇತೃತ್ವದ ಸರ್ಕಾರವು ಹೊಸ ದಾಳಿ ನಡೆಸಿತು. ಅದು ಆಡಳಿತಾತ್ಮಕ ಅನುಕೂಲತೆಯ ಆಧಾರದಲ್ಲಿ ಸಣ್ಣ ರಾಜ್ಯಗಳಿರಬೇಕೆಂದು ಪ್ರತಿಪಾದಿಸುತ್ತದೆ. ಇದು ಒಕ್ಕೂಟ ರಚನೆಯನ್ನು ಮತ್ತಷ್ಟು ದುರ್ಬಲಗೊಳಿಸುತ್ತದೆ. ಕೇಂದ್ರ ಸರ್ಕಾರದಿಂದ, ಚುನಾಯಿತ ರಾಜ್ಯ ಸರ್ಕಾರಗಳನ್ನು ವಜಾ ಮಾಡಲು ಮತ್ತು ಚುನಾಯಿತ ರಾಜ್ಯ ವಿಧಾನಸಭೆಗಳನ್ನು ವಿಸರ್ಜಿಸಲು ಮತ್ತೆ ಮತ್ತೆ ಸಂವಿಧಾನದ 356 ನೇ ಕಲಮಿನಲ್ಲೇ ಅಡಕವಾಗಿರುವ ಪ್ರಜಾಪ್ರಭುತ್ವ–ವಿರೋಧಿ ಅವಕಾಶಗಳ ಬಳಕೆಯ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವಲ್ಲಿ ಮತ್ತು ರಾಜ್ಯಗಳ ಸ್ವಾಯತ್ತತೆಯ ಮೇಲೆ ದಾಳಿ ಮಾಡುವಲ್ಲಿ ಒಂದು ಪ್ರಮುಖ ಸಾಧನವಾಗಿದೆ. ಅಂಗ ರಾಜ್ಯಗಳಿಗೆ ಹೆಚ್ಚಿನ ಅಧಿಕಾರವಿಲ್ಲದೆ, ಅವು ಒಕ್ಕೂಟ ಸರ್ಕಾರದ ಮೇಲೆ ಅವಲಂಬಿಸುವಂತಾಗಿ ಅವುಗಳ ಅಭಿವೃದ್ಧಿ ಸೀಮಿತಗೊಳ್ಳುವಂತಾಗಿದೆ. ಇಂತಹ ಒಂದು ಸನ್ನಿವೇಶದಲ್ಲಿ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವಿನ ವೈರುಧ್ಯಗಳು ಸಹಜವಾಗಿಯೇ ಬೆಳೆದಿವೆ?"





ಈ ವೈರುಧ್ಯಗಳನ್ನು ಮುಖ್ಯವಾಗಿ; 1. ಪರಿಚ್ಛೇದ 356 ರ ದುರ್ಬಳಕೆ, 2. ರಾಜ್ಯಗಳ ಒಪ್ಪಿಗೆ ಪಡೆಯದೆ ಕೇಂದ್ರ ಪಡೆಗಳನ್ನು ಕಳುಹಿಸುವುದು, 3. ರಾಜ್ಯಪಾಲರ ಪಾತ್ರ, 4. ರಾಜ್ಯ ಪಟ್ಟಿಯ ಅಧಿಕಾರಗಳಲ್ಲಿ ನುಸುಳುವಿಕೆ, 5. ರಾಜ್ಯ ವಿಧಾನಸಭೆಗಳು ಪಾಸು ಮಾಡಿದ ಪ್ರಮುಖವಾದ ಮಸೂದೆಗಳಿಗೆ ಅಂಕಿತವನ್ನು ಹಾಕಲು ನಿಧಾನಿಸುವುದು, ಮುಂತಾದ ಅಂಶಗಳಲ್ಲಿ ಕಾಣಬಹುದು.

ಈ ವೈರುಧ್ಯಗಳ ನಿವಾರಣೆಗೆ ಇಂದಿರಾಗಾಂಧಿ ಸರ್ಕಾರ 1983 ರಲ್ಲಿ ಸರ್ಕಾರಿಯಾ ಆಯೋಗ ರಚಿಸಿತು. ಇದು 1988 ರಲ್ಲಿ ವರದಿ ನೀಡಿತಾದರೂ ರಾಜ್ಯಗಳ ಮುಖ್ಯ ಬೇಡಿಕೆಗಳನ್ನು ಪರಿಹರಿಸುವಲ್ಲಿ ವಿಫಲವಾಯಿತು. 1990 ರಲ್ಲಿ ರಾಷ್ಟ್ರೀಯ ರಂಗ ಸರ್ಕಾರ "ಅಂತರ–ರಾಜ್ಯ ಮಂಡಳಿ" ಸ್ಥಾಪಿಸಿತು. ಆದರೆ ಸಮಸ್ಯೆಗಳ ಪರಿಹಾರಕ್ಕೆ ಬದಲಾಗಿ ಹೆಚ್ಚಾದವು. 2007 ಏಪ್ರಿಲ್‌ನಲ್ಲಿ ಯುಪಿಎ ಸರ್ಕಾರ ಕೇಂದ್ರ–ರಾಜ್ಯಗಳ ಸಂಬಂಧಗಳ ಬಗ್ಗೆ ಜಸ್ಟೀಸ್ ಎಂ.ಎಂ.ಪುಂಚಿ ಆಯೋಗವನ್ನು ರಚಿಸಿತು. ಇದು ಒಕ್ಕೂಟ ತತ್ವಗಳನ್ನು ಮತ್ತಷ್ಟು ದುರ್ಬಲಗೊಳಿಸಿತು. ಒಕ್ಕೂಟ–ರಾಜ್ಯಗಳ ನಡುವಿನ ಸಂಬಂಧದಲ್ಲಿ ನಿರಂತರವಾಗಿ ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸುತ್ತಲೇ ಬರಲಾಗಿದೆ.

1. ಪರಿಚ್ಛೇದ 356 ಮತ್ತು 355 ರ ದುರ್ಬಳಕೆ: ಪ.356ನ್ನು ಬಳಸಿ ರಾಜ್ಯ ಸರ್ಕಾರಗಳನ್ನು ವಜಾಗೊಳಿಸಿ ಕೇಂದ್ರದ ನೇರ ಆಡಳಿತವನ್ನು, ಕರ್ನಾಟಕದಲ್ಲಿ 6 ಬಾರಿ ಸೇರಿದಂತೆ, 131 ಬಾರಿ ಹೇರಲಾಗಿರುವ ಪ್ರಕರಣಗಳು ಇದುವರೆಗೆ ನಡೆದಿವೆ.

ಇವುಗಳಲ್ಲಿ ಬಹುತೇಕ ರಾಜ್ಯಗಳನ್ನು ಮತ್ತು ಅವುಗಳ ಅಧಿಕಾರವನ್ನು ದುರ್ಬಲಗೊಳಿಸುವ ಪ್ರಯತ್ನಗಳಾಗಿವೆ. ರಾಷ್ಟ್ರೀಯ ಐಕ್ಯತೆಗೆ ಗಂಡಾಂತರ ಮತ್ತು ದೇಶದ ಜಾತ್ಯಾತೀತ ಹಂದರಕ್ಕೆ ಧಕ್ಕೆಯಂತಹ ಸಂದರ್ಭಗಳಲ್ಲಿ ಮಾತ್ರ 356ನ್ನು ಸೀಮಿತಗೊಳಿಸಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸಿತು. ಆದರೆ ಇದುವರೆಗೂ ಯಾವ ಒಕ್ಕೂಟ ಸರ್ಕಾರಗಳು ಹಾಗೆ ಮಾಡಲಿಲ್ಲ. ಈಗ ಹೆಚ್ಚೆಚ್ಚು ರಾಜ್ಯ ಸರ್ಕಾರಗಳನ್ನು ಉರುಳಿಸಲು ಹೊಸ ಟ್ರೆಂಡ್ ಶುರುವಾಗಿದೆ. ಆಳುವ ವರ್ಗಗಳು ನೂತನ ವಿಧಾನಗಳನ್ನು ಕಂಡುಕೊಂಡಿವೆ. ಶಾಸಕರ ಪಕ್ಷಾಂತರ, ರಾಜೀನಾಮೆ ಕೊಡಿಸುವುದು, ಮುಂತಾದ ಕ್ರಮಗಳಿಂದ ರಾಜ್ಯ ಸರ್ಕಾರಗಳನ್ನು ಉರುಳಿಸುವುದು ಹೆಚ್ಚಾಗಿದೆ. ಮೋದಿ ಸರ್ಕಾರಕ್ಕೆ ಇದರ ಹೆಚ್ಚಿನ ಶ್ರೇಯಸ್ಸು ಸಲ್ಲುತ್ತದೆ.

ಒಂದು ರಾಜ್ಯದೊಳಗೆ "ಆಂತರಿಕ ಗಲಭೆ" ಎಂಬುದಾಗಿ ಯಾವ ಪರಿಸ್ಥಿತಿಯನ್ನು ಒಕ್ಕೂಟ ಸರ್ಕಾರ ಪರಿಗಣಿಸುತ್ತದೆಯೋ ಅಲ್ಲಿಗೆ, ರಾಜ್ಯಗಳ ಸಮ್ಮತಿ ಇಲ್ಲದೆ ಪ.355 ನ್ನು ಬಳಸಿ ಪ್ಯಾರಾಮಿಲಿಟರಿ ಪಡೆಗಳನ್ನು ನಿಯೋಜಿಸುವುದು ಸರಿಯಲ್ಲ. ಬಾಹ್ಯ ಆಕ್ರಮಣದ ಸಂದರ್ಭವನ್ನು ಹೊರತುಪಡಿಸಿ, ಪ.356 ರ ರೀತಿಯಲ್ಲೇ ರಾಷ್ಟ್ರೀಯ ಐಕ್ಯತೆಗೆ ಗಂಡಾಂತರ ಮತ್ತು ದೇಶದ ಜಾತ್ಯಾತೀತ ಹಂದರಕ್ಕೆ ಧಕ್ಕೆಯಂತಹ ಸಂದರ್ಭಗಳಲ್ಲಿ ಮಾತ್ರ ಪ.355 ನ್ನು ಬಳಸುವುದಕ್ಕೆ ಸೀಮಿತವಾಗಿರಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

2. ರಾಜ್ಯಪಾಲರ ನೇಮಕ ಮತ್ತು ಪಾತ್ರ: ರಾಜ್ಯಪಾಲರನ್ನು ಕೇಂದ್ರ ನೇಮಿಸುವ ಪದ್ಧತಿಯೇ ಒಕ್ಕೂಟ ಪ್ರಜಾಪ್ರಭುತ್ವ ರಾಜಕಾರಣಕ್ಕೆ ವಿರೋಧವಾದುದು. ರಾಜ್ಯಪಾಲರು ಎಂಬ ಹುದ್ದೆಯೇ ಇರಬೇಕಾಗಿಲ್ಲ. ರಾಜ್ಯಪಾಲ ವ್ಯವಸ್ಥೆ ಇರಬೇಕು ಎಂದಾದಲ್ಲಿ ರಾಜ್ಯದ ಮುಖ್ಯಮಂತ್ರಿ ಕಳಿಸುವ ಸಮರ್ಥ 3 ಜನರ ಹೆಸರುಗಳ ಪೈಕಿ ಒಬ್ಬರಾಗಿರಬೇಕು. ಸರ್ಕಾರಿಯಾ ಅಯೋಗದಲ್ಲಿ ಹೇಳಿರುವ ಮಾನದಂಡ ಪೂರೈಸಬೇಕೆಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ.

ರಾಜ್ಯ ಅಸೆಂಬ್ಲಿಗಳು ಅಂಗೀಕರಿಸುವ ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕಲು ಸಮಯ ಮಿತಿ ಇರಬೇಕು. ರಾಜ್ಯಪಾಲರು ರಾಜ್ಯದ ವಿಶ್ವವಿದ್ಯಾಲಯಗಳ ಪದನಿಮಿತ್ತ ಕುಲಾಧಿಪತಿ ಎಂಬ ಪದ್ಧತಿಯನ್ನು ತೆಗೆದು ಹಾಕಬೇಕು.

3. ರಾಜ್ಯಗಳ ಪಟ್ಟಿಯ ಅಧಿಕಾರಗಳಲ್ಲಿ ನುಸುಳುವಿಕೆ: ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೆ ಮಾಡಲಾದ 3 ರೀತಿಯ ಅಧಿಕಾರಗಳ ಹಂಚಿಕೆಯು ಸಂವಿಧಾನದ ಏಳನೇ ಷೆಡ್ಯೂಲಿನಲ್ಲಿದ್ದು, ಇದನ್ನು ಆರ್ಟಿಕಲ್ 246 ರಲ್ಲಿ ಪ್ರಸ್ತಾಪಿಸಲಾಗಿದೆ.

(ಅ) ಕೇಂದ್ರ ಪಟ್ಟಿ: ಆರಂಭದಲ್ಲಿ 97 ವಿಷಯಗಳಿದ್ದವು, ಈಗ 100 ಇವೆ. ರಾಷ್ಟ್ರೀಯ ರಕ್ಷಣೆ, ಅಂತರರಾಷ್ಟ್ರೀಯ ವಿಚಾರಗಳು, ಸಂಪರ್ಕ, ಹಣ, ಇತ್ಯಾದಿ.

(ಆ) ರಾಜ್ಯ ಪಟ್ಟಿ: ಆರಂಭದಲ್ಲಿ 66 ವಿಷಯಗಳು ಈ ಪಟ್ಟಿಯಲ್ಲಿದ್ದವು. 1976 ರಲ್ಲಿ ಸಂವಿಧಾನಕ್ಕೆ 42 ನೇ ತಿದ್ದುಪಡಿಯನ್ನು ಪುಟ 11 ಕ್ಕೆ

ಚೆಲುವ ಕನ್ನಡ ನಾಡಿನ ಉದಯಕ್ಕಾಗಿ

ಪುಟ 5 ರಿಂದ

ವಾರ'ಆಚರಿಸಲು ಅಕರಾನಿ ಪರಿಷತ್ತು ಕರೆ ನೀಡಿತು. ಬಿ.ವಿ. ಕಕ್ಕಿಲ್ಲಾಯರು ಮತ್ತು ಶಿವಮೂರ್ತಿ ಸ್ವಾಮಿಗಳೂ ಕೂಡಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನಡೆದ ಸಭೆಗಳಲ್ಲಿ ಭಾಗವಹಿಸಿ ಜಾಗೃತಿ ಮೂಡಿಸಿದರು. ಹೊಸಮನಿ ಸಿದ್ಧಪ್ಪ, ಚೆನ್ನಪ್ಪ ವಾಲಿ, ಬೆಂಕಿ ಸ್ವಾಮಿ, ಶಾಂತಿನಾಥ ಇಂಗಳೆ, ಡಿ.ಜಿ.ಮುಲ್ಲಾ, ಮಹದೇವಪ್ಪ ಮುರಗೋಡು, ಮುಂತಾದವರು ಬಿಜಾಪುರದಲ್ಲಿ ಎನ್.ಕೆ. ಉಪಾಧ್ಯಾಯ ಮುಂತಾದ ಕಮ್ಯೂನಿಸ್ಟರು ಭಾಗವಹಿಸಿದರು. ಮುಂಜಾಗ್ರತಾ ಕ್ರಮವಾಗಿ ಬಾಂಬೆ ಸರ್ಕಾರ ಐದು ಸಾವಿರಕ್ಕೂ ಹೆಚ್ಚು ಹೋರಾಟಗಾರರನ್ನು ಬಂಧಿಸಿ ಹಿಂಡಲಗಾ, ಅಹಮದಾಬಾದ್, ನಾಸಿಕ್, ಯರವಾಡ ಮುಂತಾದ ಜೈಲುಗಳಲ್ಲಿಟ್ಟಿತು. ಬಂಧನಕ್ಕೆ ಒಳಗಾದವರಲ್ಲಿ ಹೆಚ್ಚಿನವರು ಕಮ್ಯೂನಿಸ್ಟರಾಗಿದ್ದರು.

1953 ಡಿಸೆಂಬರ್ 3 ರಂದು ಹಂಪಿಯಲ್ಲಿ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಅಕರಾನಿ ಪರಿಷತ್ತಿನ ಎರಡನೆ ಸಮ್ಮೇಳನವು ಜರುಗಿತು. ಇಲ್ಲಿ ಬಿ.ವಿ. ಕಕ್ಕಿಲ್ಲಾಯರು ಕಮ್ಯೂನಿಸ್ಟ್ ಪಕ್ಷದ ನಿಲುವುಗಳನ್ನು ಮಂಡಿಸಿದರು. ಅದರಲ್ಲಿ ಕಾಸರಗೋಡು ತಾಲೂಕಿನ ಕನ್ನಡ ಬಹುಸಂಖ್ಯಾತ ಗ್ರಾಮಗಳು ಬಹುತೇಕ ಚಂದ್ರಗಿರಿ ನದಿಯ ಉತ್ತರ ಭಾಗಗಳು ಕರ್ನಾಟಕದಲ್ಲಿ ವಿಲೀನವಾಗಬೇಕು, ಕೇಂದ್ರಾಡಳಿತ ಪ್ರದೇಶ ಕೊಡಗು ಪೂರ್ತಿಯಾಗಿ ಕರ್ನಾಟಕಕ್ಕೆ ಸೇರಬೇಕು, ಬಳ್ಳಾರಿ ಜಿಲ್ಲೆಯ ಕನ್ನಡ ಮತ್ತು ತೆಲುಗು ಗಡಿಗಳ ನಿರ್ಧಾರವನ್ನು ಆಯೋಗಕ್ಕೆ ಬಿಡಬೇಕೆಂದು, ಗ್ರಾಮಗಳನ್ನು ಘಟಕಗಳನ್ನಾಗಿ ಪರಿಗಣಿಸಿ ಭಾಷಾ ಬಾಂಧವ್ಯ ಮತ್ತು ಪ್ರಾದೇಶಿಕ ಹೊಂದಾಣಿಕೆಗಳ ದೃಷ್ಟಿಯಿಂದ ಗಡಿ ನಿರ್ಣಯವಾಗಬೇಕೆಂದು ಕಕ್ಕಿಲ್ಲಾಯರು ಹೇಳಿದರು. ಅದೇ ರೀತಿ ಮಹಾರಾಷ್ಟ್ರ–ಕರ್ನಾಟಕ ಮತ್ತು ಆಂಧ್ರ–ಕರ್ನಾಟಕ ಗಡಿಗಳನ್ನು ನಿರ್ಧರಿಸಬೇಕೆಂದು ತಿಳಿಸಿದರು. ಮುಂದೆ ರಚನೆಯಾಗಲಿದ್ದ ಆಯೋಗದ ಮುಂದೆ ಅಕರಾನಿ ನಿಲುವನ್ನು ಮಂಡಿಸಲು ಮನವಿಯನ್ನು ತಯಾರಿಸಲು ಶಿವಮೂರ್ತಿ ಸ್ವಾಮಿಗಳು, ಬಿ.ವಿ. ಕಕ್ಕಿಲ್ಲಾಯ ಮತ್ತು ಬಳ್ಳಾರಿ ವಕೀಲರಾದ ಸತ್ಯವಂತರಾವ್ ಇವರಿರುವ ಸಮಿತಿಯನ್ನು ರಚಿಸಲಾಯಿತು.

ಸಂಸತ್ತಿನಲ್ಲಿ ಕಮ್ಯೂನಿಸ್ಟರಿಂದ ನಿರ್ಣಯಗಳ ಮಂಡನೆ:

ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯ ರಚನೆಗೆ ಸಂಸತ್ತಿನಲ್ಲಿ ಕಮ್ಯೂನಿಸ್ಟರು ಪದೇ ಪದೇ ನಿರ್ಣಯಗಳನ್ನು ಮಂಡಿಸಿದರು. ಆಂಧ್ರ, ಕೇರಳ ಮತ್ತು ಕರ್ನಾಟಕ ಪ್ರಾಂತಗಳಲ್ಲಿ ಕಮ್ಯೂನಿಸ್ಟರು ಚಳುವಳಿಗಳ ಮೂಲಕ ಕೇಂದ್ರದ ಮೇಲೆ ಒತ್ತಡ ತಂದರು. ಕರ್ನಾಟಕದಲ್ಲಿ ಎಸ್.ವಿ.ಘಾಟೆ ಮತ್ತು ಎನ್. ಎಲ್. ಉಪಾಧ್ಯಾಯ ಇವರ ನೇತೃತ್ವದಲ್ಲಿ 'ಕರ್ನಾಟಕ ಸಂಘಟನಾ ಸಮಿತಿ' ಯನ್ನು ರಚಿಸಿ ಚಳುವಳಿಯನ್ನು ಸಂಘಟಿಸಲು ತೀರ್ಮಾನಿಸಿದರು. ಎಲ್ಲಾ ಕನ್ನಡ ಜಿಲ್ಲೆಗಳಲ್ಲಿ ಜಿಲ್ಲಾವಾರು ಪ್ರತಿನಿಧಿಗಳನ್ನು ನೇಮಿಸಿ ಸಂಘಟನಾ ಕಾರ್ಯವನ್ನು ವಹಿಸಲಾಯಿತು. ಕನ್ನಡ ಪ್ರದೇಶಗಳನ್ನೆಲ್ಲಾ ಸಂಚರಿಸಿ ಏಕೀಕರಣ ಪರ ಪ್ರಚಾರ ಕೈಗೊಂಡರು.

ಹುಬ್ಬಳ್ಳಿ ಘಟನೆ, ಉಪ–ಚುನಾವಣೆಗಳ ಫಲಿತಾಂಶ ಮತ್ತು ಕಮ್ಯೂನಿಸ್ಟರ ಹೆಚ್ಚಿದ ಚಟುವಟಿಕೆಗಳು ಸೇರಿದಂತೆ ಭಾಷಾವಾರು ರಾಜ್ಯಗಳ ರಚನೆಗೆ ಜನತೆಯ ಚಳುವಳಿಗಳು ತೀವ್ರವಾಗುತ್ತಿರುವುದನ್ನು ಕಂಡು ಕೇಂದ್ರದ ನೆಹರೂ ಸರ್ಕಾರ 1953 ಡಿಸೆಂಬರ್ 29 ರಂದು ಫಜಲ್ ಅಲಿ ಆಯೋಗವನ್ನು ನೇಮಿಸಿತು. ಅಕರಾನಿ ಪರಿಷತ್ತು ಮತ್ತು ಕಮ್ಯೂನಿಸ್ಟ್ ಪಕ್ಷ ಪ್ರತ್ಯೇಕವಾಗಿ ಮನವಿಗಳನ್ನು ಅರ್ಪಿಸಿದವು.

ಕೊಡಗು ಕರ್ನಾಟಕ ಪ್ರಾಂತದಲ್ಲಿರಬೇಕು ಎಂಬುದು ಕಮ್ಯೂನಿಸ್ಟರ ವಾದ:

1955 ಮೇ 12 ರಂದು ಮಡಿಕೇರಿಯಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ಪ್ರಾಂತ ಸಮಿತಿ ಸಭೆಯು ಅಖಂಡ ಕರ್ನಾಟಕ ಪ್ರಾಂತ ರಚನೆಗೆ ಒತ್ತಾಯಿಸಿ ನಿರ್ಣಯ ತೆಗೆದುಕೊಂಡಿತು. ಏಕೀಕರಣದ ಚಳುವಳಿಯು ಬಲ ಹೊಂದುತ್ತಿರುವುದನ್ನು, ಆರು ಆಡಳಿತಗಳಲ್ಲಿ ಹರಿದು ಹಂಚಲ್ಪಟ್ಟಿರುವ ಕರ್ನಾಟಕವನ್ನು ಒಂದುಗೂಡಿಸಿ ಒಂದೇ ಪ್ರಾಂತೀಯ ಆಡಳಿತದೊಳಗೆ ತರಬೇಕೆಂಬ ಕನ್ನಡಿಗರ ಬಯಕೆಗೆ ಹೆಚ್ಚಿನ ಬೆಂಬಲ ದೊರಕುತ್ತಿರುವುದನ್ನು ಗುರಿತಿಸಿ, ಕೊಡಗು ಸೇರಿದಂತೆ ಕನ್ನಡಿಗರ ಭಾಗಗಳನ್ನೆಲ್ಲಾ ಒಳಗೊಂಡಿರುವ ಅಖಂಡ ಕರ್ನಾಟಕ ಪ್ರಾಂತವನ್ನು ಕೂಡಲೇ ರಚಿಸಬೇಕೆಂಬ ಬೇಡಿಕೆಯನ್ನು ಮತ್ತೊಮ್ಮೆ ಘೋಷಿಸಿತು. ಕರ್ನಾಟಕ ಪ್ರಾಂತ ರಚನೆಯ ಬೇಡಿಕೆಯನ್ನು ಸಾಧಿಸಲು ಚಳವಳಿಯನ್ನು ಬಲಪಡಿಸಬೇಕೆಂದು ಅದು ಕರ್ನಾಟಕದ ಜನರನ್ನೂ, ಸಂಘಟನೆಗಳನ್ನೂ ಕೇಳಿಕೊಂಡಿತು.

ಜನತೆಯ ಹೋರಾಟದ ಪರಿಣಾಮವಾಗಿ ರಾಜ್ಯ ಪುನರ್ವಿಂಗಡಣಾ ಆಯೋಗ ನವೆಂಬರ್ 1955 ರಲ್ಲಿ ವರದಿ ಪ್ರಕಟಿಸಿತು. ಅದರಲ್ಲಿ ಕರ್ನಾಟಕ ಪ್ರಾಂತ ರಚನೆಗೆ ಪುರಸ್ಕಾರ ಸಿಕ್ಕಿತ್ತು. ಆದರೆ ಅದರಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದೂ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಬೇಕೆಂದೂ ಶಿಫಾರಸ್ಸು ಮಾಡಲಾಗಿತ್ತು. ಅದನ್ನು ಪ್ರತಿಭಟಿಸಿ ಜನತೆ ಹೋರಾಡಬೇಕಾಯಿತು. ಸಾವಿರಾರು ಜನ ಬಳ್ಳಾರಿ ಮತ್ತು ಕಾಸರಗೋಡಿನಲ್ಲಿ ಜೈಲಿಗೆ ಹೋದರು. ಹರತಾಳಗಳಾದವು. ಪರಿಣಾಮವಾಗಿ ಬಳ್ಳಾರಿ ಕರ್ನಾಟಕದಲ್ಲೇ ಉಳಿಯಿತು. ಕಾಸರಗೋಡು ಕೇರಳಕ್ಕೆ ಸೇರಿಸಲ್ಪಟ್ಟಿತು.

ಬುಹುಭಾಷಾ ಪ್ರಾಂತಗಳ ರಚನೆಗೆ ಯತ್ನ: ಶಾಸನಸಭೆಯಲ್ಲಿ ಕೆ.ಎಸ್. ವಾಸನ್ ರಿಂದ ವಿರೋಧ:

ಈ ನಡುವೆ ಪಾರ್ಲಿಮೆಂಟಿನಲ್ಲಿ ಪ್ರಾಂತ ಪುನರ್ವಿಂಗಡಣೆಯ ಚರ್ಚೆ ಮುಗಿಯುವ ಮುಂಚೆಯೇ ಬಹು ಭಾಷಾ ಪ್ರಾಂತ ರಚನೆಯನ್ನು ಜನತೆಯ ಮೇಲೆ ಹೊರಿಸುವ ಪ್ರಯತ್ನವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಕಾಂಗ್ರೆಸ್ ಸರ್ಕಾರ ಮಾಡುತ್ತಿತ್ತು. ಕೇರಳ–ಕರ್ನಾಟಕಗಳ ಅಥವಾ ಕರ್ನಾಟಕ–ಆಂಧ್ರಗಳನ್ನೊಳಗೊಂಡ 'ದಕ್ಷಿಣ ಪ್ರದೇಶ'ಮತ್ತು 'ಪಶ್ಚಿಮ ಪ್ರದೇಶ'ಗಳ ರಚನೆಗೆ ಪ್ರಯತ್ನ ನಡೆಯಿತು. ಮೈಸೂರು ವಿಧಾನಸಭೆಯಲ್ಲಿ ಹನುಮಂತಯ್ಯನವರು ಇದರ ಪರವಾಗಿ ಠರಾವನ್ನು ಅಂಗೀಕರಿಸಿ ಬಹುಭಾಷಾ ಪ್ರಾಂತ್ಯಕ್ಕೆ ಬೆಂಬಲಕೊಟ್ಟರು. ಒಂದೇ ಕರ್ನಾಟಕವಾದರೆ ಮೈಸೂರಿನ 'ವೈಶಿಷ್ಟತೆ' ಹೋಗುವುದು ಎಂದ ಅವರು ದಕ್ಷಿಣ ಪ್ರಾಂತವಾದರೆ ಮೈಸೂರಿನ ವೈಶಿಷ್ಟತೆಯನ್ನು ಹೇಗೆ ಉಳಿಸಿಕೊಳ್ಳತ್ತಾರೆಂಬುದನ್ನು ವಿವರಿಸಲು ವಿಫಲವಾದರು. ಶಾಸನಸಭೆಯಲ್ಲಿ ಕಮ್ಯೂನಿಸ್ಟ್ ಶಾಸಕರಾಗಿದ್ದ ಕೆ.ಎಸ್. ವಾಸನ್ ಇದನ್ನು ವಿರೋಧಿಸಿದರು. ಈ ಗಂಡಾಂತರವನ್ನು ವಿರೋಧಿಸಿ ಕಮ್ಯೂನಿಸ್ಟ್ ಪಕ್ಷ 1956 ರ ಮಾರ್ಚ್ 18 ರಂದು ಪ್ರಾಂತ್ಯದಾದ್ಯಂತ 'ದಕ್ಷಿಣ ಪ್ರಾಂತ ಪ್ರತಿಭಟನಾ ದಿನಾಚರಣೆ'ಯನ್ನು ಆಚರಿಸಿತು. ಹೀಗೆ ಪ್ರತಿ ಹೆಜ್ಜೆಗೂ ಜನತೆ ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಬೇಕಾಯಿತು. ಕಮ್ಯೂನಿಸ್ಟ್ ಪಾರ್ಟಿ ತತ್ವಬದ್ಧವಾದ ಹೋರಾಟವನ್ನು ನಡೆಸಿತು. ಅಂತೂ ಕೊನೆಗೆ ಜನತೆಯ ಆಶೋತ್ತರಗಳು ಕೈಗೂಡಿ 1956 ರ ನವೆಂಬರ್ ಒಂದರಂದು ಕರ್ನಾಟಕದ ಏಕೀಕರಣವಾಯಿತು.

'ವೀರ' ಸಾವರ್ಕರ್–ಏಳು ಮಿಥ್ಯೆಗಳು

ಪುಟ 2 ರಿಂದ

ಜಾತ್ಯತೀತ ಸಿದ್ಧಾಂತವನ್ನು ಒಪ್ಪುವವರು ಸಾವರ್ಕರ್ ಅವರನ್ನು ಪೂಜ್ಯಭಾವದಿಂದ ಕಾಣುವುದು ಅರ್ಥವಾಗದ ಸಂಗತಿ. ಜಾತ್ಯತೀತ ಸಿದ್ಧಾಂತವನ್ನು ಒಪ್ಪದ ಆರ್.ಎಸ್.ಎಸ್ ಅಥವಾ ಶಿವಸೇನಾದಂಥವರು ಅವರನ್ನು ಗೌರವಿಸುವುದು ಸರಿ. ಆದರೆ ಕಾಂಗ್ರೆಸ್ ಮುಖಂಡರುಗಳು ಹಠಾತ್ತನೆ ಸಾವರ್ಕರನ್ನು ಹಾಡಿಹೊಗಳುವುದೆಂದರೆ ಹೇಗೆ?" ಸ್ವಾತಂತ್ರ್ಯ ಚಳುವಳಿಗೆ ದ್ರೋಹ ಬಗೆದ ಮತ್ತು ಗಾಂಧಿಯವರ ಹತ್ಯೆಗೆ ಕಾರಣವಾದ ವ್ಯಕ್ತಿಯೊಬ್ಬನನ್ನು ಒಂದು ಪಕ್ಷವಾಗಿ ಕಾಂಗ್ರೆಸ್ ಹಾಗೂ ಕಾಂಗ್ರೆಸ್ಸಿಗರು ಸಮರ್ಥಿಸುವುದು ಪರಮ ನೀಚತನವೇ ಸರಿ.

ಮುಸ್ಲಿಂ ಲೀಗ್, ಹಿಂದೂ ಮಹಾಸಭಾ ಹಾಗೂ ಆರ್.ಎಸ್.ಎಸ್. ನೊಂದಿಗೆ ಕಾಂಗ್ರೆಸ್ ಸದಸ್ಯರಾರೂ ಒಡನಾಟ ಇಟ್ಟುಕೊಳ್ಳಬಾರದೆಂದು ಗಾಂಧಿ, ನೆಹರೂ ಮತ್ತು ಪಟೇಲ್ ಅವರ ನೇತೃತ್ವದ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಜೂನ್ 1934 ರಲ್ಲಿ ಅಂಗೀಕರಿಸಿದ ನಿರ್ಣಯವನ್ನು ಇವತ್ತಿನ ಕಾಂಗ್ರೆಸ್ ನಾಯಕತ್ವ ಮರೆತಂತಿದೆ, ಆ ನಿರ್ದೇಶನ ಇವತ್ತಿಗೂ ನ್ಯಾಯಾನುಸಾರವಾಗಿಯೇ ಇದೆ, ಏಕೆಂದರೆ ಅದನ್ನು ಹಿಂತೆಗೆದುಕೊಂಡಿಲ್ಲ.

ವಿಷಾದದ ಸಂಗತಿಯೆಂದರೆ, ಫ್ಯಾಸಿಸ್ಟ್ ಹಾಗೂ ಸಂಕುಚಿತ ಮನೋಭಾವವನ್ನು ವಿರೋಧಿಸಿದ ಅವಿಸ್ಮರಣೀಯ ಪರಂಪರೆಯನ್ನು ಹೊಂದಿರುವ ಕಾಂಗ್ರೆಸ್ಸಿನ ಇವತ್ತಿನ ನಾಯಕತ್ವವು ತಮ್ಮ ಭವ್ಯ ಗತಕಾಲವನ್ನು ಸಂಪೂರ್ಣ ಮರೆತಿರುವ ಸನ್ನಿವೇಶವನ್ನು ನಾವು ಕಾಣುತ್ತಿದ್ದೇವೆ. ಈ ಕಾರಣದಿಂದಾಗಿಯೇ ಭಾರತ ಸ್ವಾತಂತ್ರ್ಯ ಸಂಗ್ರಾಮದ ಮಹತ್ತರವಾದ ಉದಾರವಾದಿ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಪರಂಪರೆಯನ್ನು ಗೊಂದಲಮಯವಾಗಿಸುವಲ್ಲಿ ಸಾವರ್ಕರ್ ಬಂಟರು ಯಶಸ್ವಿಯಾಗಿದ್ದಾರೆ; ಪ್ರಜಾಸತ್ತಾತ್ಮಕ ಜಾತ್ಯತೀತ ಭಾರತವನ್ನು ಸಾವರ್ಕರ್ ಎಂದಿಗೂ ಬಯಸಿರಲಿಲ್ಲ. ಅವರಂಥವರ ಚಿಂತನೆಗಳನ್ನು ಕೃತಿಗಳನ್ನು ಹಾಡಿ ಹೊಗಳುವುದು ಸರಿಯಾಗಲಾರದು. ಆರ್.ಎಸ್.ಎಸ್. ನ ರಾಜಕೀಯ ಮುಖವಾದ ಭಾರತೀಯ ಜನತಾ ಪಕ್ಷವು 2014 ರಲ್ಲಿ ರಾಷ್ಟ್ರ ಮಟ್ಟದಲ್ಲಿ ಅಧಿಕಾರಕ್ಕೆ ಬಂದ ನಂತರ ಸಾವರ್ಕರ್ ಅವರ ವೈಭವೀಕರಣ ವೇಗ ಪಡೆದುಕೊಂಡಿತು. ತಾನೊಬ್ಬ ಆರ್.ಎಸ್.ಎಸ್.ನ ಸದಸ್ಯ ಎಂದು ಬಹಿರಂಗವಾಗಿ ಘೋಷಿಸಿಕೊಳ್ಳುವ ಪ್ರಧಾನ ಮಂತ್ರಿಗಳು ಸಾವರ್ಕರ್ ಅವರನ್ನು "ಸಾವಿಗೆ ಹೆದರದ ವೀರ ಸಾವರ್ಕರ್ ಒಬ್ಬ ವೀರ ಪುರುಷ"(1) ಎಂದು ಹಾಡಿ ಹೊಗಳುತ್ತಾರೆ. ತನ್ನನ್ನು ರೂಪಿಸಿದವರೇ ಸಾವರ್ಕರ್ ಎಂದು ಹೇಳುವ ಮಟ್ಟಕ್ಕೆ ಮೋದಿ ಹೋಗುತ್ತಾರೆ.(2) ಆ ಹಿಂದುತ್ವ ಸಿದ್ಧಾಂತಿ ಸಾವರ್ಕರ್ ಅವರ 131 ನೇ ಜನ್ಮ ದಿನಾಚರಣೆಯಂದು ನರೇಂದ್ರ ಮೋದಿ ತನ್ನ ಸಚಿವ ಸಂಪುಟ ಹಾಗೂ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗಿ ಸಂಸತ್ತಿನ ಸೆಂಟ್ರಲ್ ಸಭಾಂಗಣದಲ್ಲಿನ ಸಾವರ್ಕರ್ ಫೋಟೋಕ್ಕೆ ನಮನ ಸಲ್ಲಿಸುತ್ತಾರೆ. ಸಾವರ್ಕರ್ ಫೋಟೋಕ್ಕೆ ವಂದಿಸುವ ಪ್ರಧಾನಿಗಳಲ್ಲಿ ವಾಜಪೇಯಿಯವರ ನಂತರ ಮೋದಿ ಎರಡನೇಯವರು. ಸಾವರ್ಕರ್ ಅವರ ನಂಬಿಕಸ್ಥ ಮಿತ್ರನಾಗಿದ್ದ ಮತ್ತು ಮಹಾತ್ಮಾಗಾಂಧಿಯನ್ನು ಹತ್ಯೆ ಮಾಡಿದ ಅಪರಾಧಕ್ಕೆ ನೇಣಿಗೇರಿಸಲ್ಪಟ್ಟ ನಾಥೂರಾಂ ಗೋಡ್ಸೆ ಕೂಡ ಗೌರವಿಸಬೇಕಾದ ವ್ಯಕ್ತಿತ್ವ' ಎಂದು ಬಿಜೆಪಿಯ ಮತ್ತೊಬ್ಬ ಸಂಸದ ಸಾಕ್ಷಿ ಮಹಾರಾಜ್ ಬಣ್ಣಿಸಿದ್ದರು. "ನಾಥೂರಾಂ ಗೋಡ್ಸೆ ಕೂಡ ಒಬ್ಬ ರಾಷ್ಟ್ರೀಯವಾದಿ ಮತ್ತು ಮಹಾತ್ಮಾ ಗಾಂಧಿ ದೇಶಕ್ಕಾಗಿ ಬಹಳ ಶ್ರಮಿಸಿದ್ದಾರೆ ಕೂಡ. ಗೋಡ್ಸೆ ಕೂಡ ಒಬ್ಬ ನೊಂದ ವ್ಯಕ್ತಿ. ಅವನು ತಪ್ಪು ತಿಳುವಳಿಕೆಯಿಂದ ಏನನ್ನೋ ಮಾಡಿರಬಹುದು ಆದರೆ ಅವನು ದೇಶದ್ರೋಹಿಯಲ್ಲ. ಅವನೊಬ್ಬ ದೇಶಭಕ್ತ." ಎಂದು ಗೋಡ್ಸೆಯನ್ನು ಗಾಂಧಿಗೆ ಹೋಲಿಸಿ ಹಾಡಿ ಹೊಗಳಿದ್ದರು ಸಾಕ್ಷಿ ಮಹಾರಾಜ್.

ಪ್ರಜಾಸತ್ತಾತ್ಮಕ–ಜಾತ್ಯತೀತ ಭಾರತವನ್ನು ರಚಿಸಿ ಸರಿಸುಮಾರು ಒಂದು ಶತಮಾನವಾಗುತ್ತಿರುವಾಗಲೂ ಇತಿಹಾಸವನ್ನು ಹಾಳುಗೆಡಹುವ ಸಾವರ್ಕರ್ ಬಂಟರ ಕೃತ್ಯಗಳು ಮುಂದುವರಿಯುತ್ತಿರುವುದು ನಿಜಕ್ಕೂ ಖೇದಕರ. ಅವರೊಬ್ಬ ಮಹಾನ್ ಕ್ರಾಂತಿಕಾರಿ, ಅದಮ್ಯ ಸ್ವಾತಂತ್ರ್ಯ ಹೋರಾಟಗಾರ, ಮಹೋನ್ನತ ವಿಚಾರವಾದಿ ಇತ್ಯಾದಿ ಇತ್ಯಾದಿ ಎಂದು ಅವರನ್ನು ಗುತ್ತಿಗೆ ಪಡೆದವರಂತೆ ಸ್ತುತಿಸುತ್ತಿದ್ದಾರೆ. ಆದರೆ ಸಾವರ್ಕರ್ ಅವರ ಬರಹಗಳು ಮತ್ತು ಕಾರ್ಯಾಚರಣೆಗಳನ್ನು ಗಮನಿಸಿದರೆ ಈ ಎಲ್ಲಾ ಸಮರ್ಥನೆಗಳು ಸುಳ್ಳು ಎಂದು ಸಾಬೀತಾಗುತ್ತವೆ.

(ಮುಂದುವರೆಯುವುದು)

ರಾಜ್ಯದ ರಾಜಕೀಯ ಸ್ವಾತಂತ್ರ್ಯ........

ಪುಟ 8 ರಿಂದ

ಪರೀಕ್ಷೆಗಳನ್ನು(ಸಿಯುಈಟಿ)ಈಗ ಒಕ್ಕೂಟ ಸರ್ಕಾರವೇ ನಡೆಸುವ ಕ್ರಮ ತೆಗೆದುಕೊಂಡಿದೆ. ಈ ಕ್ರಮಗಳಿಂದ ರಾಜ್ಯಗಳಲ್ಲಿ ದೇಶಿಯ ಭಾಷೆಗಳಲ್ಲಿ ಮತ್ತು ಸ್ಥಳೀಯ ಪಠ್ಯಕ್ರಮದಲ್ಲಿ ಕಲಿತ ಮಕ್ಕಳಿಗೆ ಇದರಿಂದ ವಂಚನೆಯಾಗುತ್ತಿದೆ. ಎಲ್ಲಕ್ಕಿಂತ ಅಪಾಯಕಾರಿ ನಡೆಯೆಂದರೆ ಶಿಕ್ಷಣವನ್ನು ಕಾರ್ಪೋರೇಟೀಕರಣಕ್ಕೆ ಒಳಪಡಿಸಲಾಗುತ್ತಿದೆ. ಇದರಿಂದ ರಾಜ್ಯಗಳಲ್ಲಿ ಒಬಿಸಿ, ಪ.ಜಾ. ಪ.ಪಂ. ಮತ್ತು ಅಲ್ಪಸಂಖ್ಯಾತ ಮಕ್ಕಳಿಗೆ ಅನ್ಯಾಯವಾಗುತ್ತದೆ. ಈ ಕ್ರಮಗಳು ತ್ರೈವರ್ಣೀಕರಿಗೆ(ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ) ಮಾತ್ರ, ಅಂದರೆ ಇಂಗ್ಲೀಷ್ ಮಾಧ್ಯಮದಲ್ಲಿ 'ಸಿಬಿಎಸ್‌ಈ, ಐಎಸ್‌ಸಿಈ' ಪಠ್ಯ ಕ್ರಮದಲ್ಲಿ ಕಲಿತ ಮಕ್ಕಳಿಗೆ ಅನುಕೂಲವನ್ನು ಒದಗಿಸುತ್ತವೆ.

5.ನಮ್ಮ ದೇಶದಲ್ಲಿ ಒಟ್ಟು ತೆರಿಗೆ ಮೊತ್ತದಲ್ಲಿ ಒಕ್ಕೂಟವು ಶೇ. 60 ರಷ್ಟನ್ನು ಸಂಗ್ರಹಿಸಿಕೊಳ್ಳುತ್ತಿದೆ. ಆದರೆ ದೇಶದಲ್ಲಿ ನಡೆಯುವ ಒಟ್ಟು ಸಾರ್ವಜನಿಕ ವೆಚ್ಚದಲ್ಲಿ ಅದರ ಪಾಲು ಶೇ. 40 ಮಾತ್ರ. ಒಕ್ಕೂಟದ ತೆರಿಗೆಗಳು ಸಮೃದ್ಧವಾಗಿದ್ದರೆ ರಾಜ್ಯಗಳ ತೆರಿಗೆಗಳು ಬರಡಾಗಿವೆ. ಒಕ್ಕೂಟ ವ್ಯವಸ್ಥೆಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ನಮ್ಮ ಸಂವಿಧಾನದಲ್ಲಿ ಒಕ್ಕೂಟದಿಮದ ರಾಜ್ಯಗಳಿಗೆ ಹಣಕಾಸು ಸಂಪನ್ಮೂಲದ ಶಾಸನಾತ್ಮಕ ವರ್ಗಾವಣೆಗೆ ಕ್ರಮ ರೂಪಿಸಲಾಗಿದೆ(ಹಣಕಾಸು ಆಯೋಗ). ಸರ್ಕಾರವು ಸಂಪನ್ಮೂಲವನ್ನು ರಾಜ್ಯಗಳಿಗೆ ವರ್ಗಾಯಿಸಬೇಕು. ನಮ್ಮ ದೇಶದಲ್ಲಿ ಹಣಕಾಸು ಆಯೋಗವಲ್ಲದೆ ಸರ್ಕಾರವು ಹಣಕಾಸು ಸಂಪನ್ಮೂಲವನ್ನು ಯೋಜನಾ ಆಯೋಗದ ಮೂಲಕ ವರ್ಗಾವಣೆ ಮಾಡುವ ಕೆಲಸವನ್ನು ಮಾಡುತ್ತಿತ್ತು. ಇದನ್ನು 2014ರಲ್ಲಿ ರದ್ದುಪಡಿಸಿ ನೀತಿ ಆಯೋಗ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ(ನ್ಯಾಷಿನಲ್ ಇನ್ಸಟಿಟ್ಯೂಷನ್ ಫಾರ್ ಟ್ರಾನ್ಸಫಾರ್ಮಿಂಗ್ ಇಂಡಿಯಾ). ಆದರೆ ಇದಕ್ಕೆ ರಾಜ್ಯಗಳಿಗೆ ಸರ್ಕಾರದ ಮಟ್ಟದಲ್ಲಿ ಹಣಕಾಸು ಸಂಪನ್ಮೂಲವನ್ನು ಶಿಫಾರಸ್ಸು – ವರ್ಗಾವಣೆ ಮಾಡುವ ಅಧಿಕಾರವಿಲ್ಲ.

6.ಸಾಮಾಜಿಕ ನ್ಯಾಯಕ್ಕೆ ಒಕ್ಕೂಟ ಸರ್ಕಾರ ತಿಲಾಂಜಲಿಯಿಡುತ್ತಿದೆ. ರಾಜ್ಯಗಳು ತಮ್ಮದೇ ನೆಲೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಲು ಪ್ರಯತ್ನ ನಡೆಸುತ್ತಿದ್ದವು. ಇಂದು 'ಸಾಮಾಜಿಕ ನ್ಯಾಯ' ಎನ್ನುವುದು ನಿರಾಕರಣೆಯ ಸಂಗತಿಯಾಗಿದೆ. ಉದಾ: ದೇಶದ 100ಕ್ಕೂ ಮಿಕ್ಕು ಹಿಂದುಳಿದ ಜಿಲ್ಲೆಗಳನ್ನು 80 ➚

ಒಕ್ಕೂಟವಲ್ಲದ ಭಾರತ ಉಳಿಯಬಲ್ಲುದೇ...?

ಪುಟ 9 ರಿಂದ

ತರುವುದರ ಮೂಲಕ ರಾಜ್ಯಗಳ ಪಟ್ಟಿಯಲ್ಲಿದ್ದ 5 ಅಧಿಕಾರಗಳನ್ನು ಸಮವರ್ತಿ ಪಟ್ಟಿಗೆ ವರ್ಗಾಯಿಸಲಾಯಿತು. 1. ಶಿಕ್ಷಣ, 2. ಅರಣ್ಯ, 3. ತೂಕ ಮತ್ತು ಅಳತೆ, 4. ಕಾಡು ಪ್ರಾಣಿಗಳು ಮತ್ತು ಪಕ್ಷಿಗಳ ರಕ್ಷಣೆ, 5. ನ್ಯಾಯಾಂಗದ ಆಡಳಿತ (ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟುಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಕೋರ್ಟುಗಳ ನ್ಯಾಯಾಡಳಿತ, ಸಂರಚನೆ ಮತ್ತು ಸಂಘಟನೆ).

ಸಂವಿಧಾನಕ್ಕೆ 101 ನೇ ತಿದ್ದುಪಡಿಯ ಮೂಲಕ ತರಲಾದ ಜಿಎಸ್‌ಟಿ, ರಾಜ್ಯಗಳ ಮಾರಾಟ ತೆರಿಗೆ, ಸೇವಾ ತೆರಿಗೆ ಮತ್ತು ಅಬಕಾರಿ ತೆರಿಗೆ ಮುಂತಾದ ಪರೋಕ್ಷ ತೆರಿಗೆಗಳನ್ನೆಲ್ಲಾ ಒಟ್ಟುಗೂಡಿಸಿ ಕೇಂದ್ರೀಕೃತ ತೆರಿಗೆ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಇದೇ ತಿದ್ದುಪಡಿಯ ಮೂಲಕ ಐಟಂ ನಂಬರ್ 52 (ಅನುಭೋಗ, ಬಳಕೆ ಅಥವಾ ಮಾರಾಟಕ್ಕೆ ಸ್ಥಳೀಯ ಪ್ರದೇಶಗಳಿಗೆ ಸರಕುಗಳ ಪ್ರವೇಶದ ಮೇಲಿನ ತೆರಿಗೆ) ಮತ್ತು 55 ನ್ನು (ಮಾಧ್ಯಮಗಳನ್ನು ಹೊರತುಪಡಿಸಿದ ಜಾಹೀರಾತುಗಳ ಮೇಲಿನ ತೆರಿಗೆ) ತೆಗೆದು ಹಾಕಲಾಗಿದೆ.

(ಇ) ಸಮವರ್ತಿ ಪಟ್ಟಿ: ಇದರಲ್ಲಿ ಈಗ 47 ವಿಷಯಗಳಿವೆ. ಕೇಂದ್ರ ಮತ್ತು ರಾಜ್ಯ ಎರಡೂ ಸರ್ಕಾರಗಳು ಈ ಪಟ್ಟಿಯ ವಿಷಯಗಳ ಬಗ್ಗೆ ಶಾಸನಗಳನ್ನು ಮಾಡಬಹುದು. ಸಂಘರ್ಷ ಏರ್ಪಟ್ಟರೆ ಕೇಂದ್ರದ ಶಾಸನ ಊರ್ಜಿತವಾಗುತ್ತದೆ.

ವರ್ಗಾವಣೆಯಾಗಿದ್ದ ರಾಜ್ಯ ಪಟ್ಟಿಯಲ್ಲಿದ್ದ ಶಾಸನಾತ್ಮಕ ಅಧಿಕಾರಗಳು ಸಮವರ್ತಿ ಪಟ್ಟಿಗೆ ವಾಪಸಾಗಲಿಲ್ಲ. ಮಾತ್ರವಲ್ಲ, ರಾಜ್ಯಗಳ ಅಧಿಕಾರಗಳನ್ನು ಒಕ್ಕೂಟ ಸರ್ಕಾರ ಅತಿಕ್ರಮಿಸುವ ಮತ್ತು ವಶಪಡಿಸಿಕೊಳ್ಳುವ ಪ್ರಕ್ರಿಯೆ ಹೆಚ್ಚುತ್ತಲೇ ಇದೆ. ಮೋದಿ ಸರ್ಕಾರದ ಅವಧಿಯಲ್ಲಂತೂ ಇದು ಮೇರೆ ಮೀರಿದೆ. ಇತ್ತೀಚೆಗಿನ 3 ಕೃಷಿ ಕಾಯ್ದೆಗಳ ಜಾರಿಯ ಪ್ರಯತ್ನವಂತೂ ಸಂಪೂರ್ಣವಾಗಿ ರಾಜ್ಯಗಳ ಶಾಸನಾತ್ಮಕ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ.

4. ಕೇಂ.ಪ್ರಾ.ಸ್ಕೀಂಗಳನ್ನು ಜಾರಿ ಮಾಡುವಾಗ ರಾಜ್ಯ ಪಟ್ಟಿಯ ವಿಷಯಗಳ ಮೇಲೆ ಕಠಿಣ ನಿಯಮಗಳನ್ನು ವಿಧಿಸಲಾಗಿದೆ. ಇದು ರಾಜ್ಯಗಳ ಹಣಕಾಸು ಮತ್ತು ಸ್ವಾಯತ್ತತೆಯ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ರಾಜ್ಯಗಳ ಅಭಿವೃದ್ಧಿಯ ಆದ್ಯತೆಯನ್ನು ವ್ಯತ್ಯಾಸ ಮಾಡುತ್ತದೆ. ಆದ್ದರಿಂದಲೇ ರಾಜ್ಯ ಪಟ್ಟಿಯಡಿಯಲ್ಲಿ ಬರುವ ಈಗಿರುವ ಎಲ್ಲಾ ಕೇಂದ್ರ ಸ್ಕೀಂಗಳ ರಚನೆ ಮತ್ತು ಜಾರಿಯನ್ನು ನಿಧಿ ಸಮೇತ ರಾಜ್ಯಗಳಿಗೆ ವರ್ಗಾಯಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

6. ರಾಜ್ಯಗಳಿಗೆ ಶಾಸನಗಳನ್ನು ಮಾಡುವ ರೆಸಿಡ್ಯುಯರಿ ಪವರ್ (ರಾಜ್ಯ ಪಟ್ಟಿಯಲ್ಲಿ ಇಲ್ಲದಿರುವ ಸಬ್ಜೆಕ್ಟ್‌ಗಳಲ್ಲಿ ಶಾಸನ ಮಾಡುವ ಅಧಿಕಾರ) ನೀಡಬೇಕೆಂಬ ಬೇಡಿಕೆಯನ್ನು ಕೇಂದ್ರ ಇದುವರೆಗೂ ಒಪ್ಪಿಲ್ಲ. ಸೇವಾ ವಲಯದಲ್ಲಿ ತೆರಿಗೆ ವಿಧಿಸುವ ರೆಸಿಡ್ಯುಯರಿ ಅಧಿಕಾರವನ್ನು ಸಂಪೂರ್ಣವಾಗಿ ಕೇಂದ್ರವೇ ಬಳಸುತ್ತಿದೆ.

7. ರಾಜ್ಯ ಅಸೆಂಬ್ಲಿಗಳು ಪಾಸು ಮಾಡಿದ ಮಸೂದೆಗಳ ವಿಚಾರದಲ್ಲಿ ರಾಜ್ಯಪಾಲ/ ರಾಷ್ಟ್ರಪತಿ ಅಂಕಿತ ಹಾಕಲು ಖಚಿತ ಕಾಲಮಿತಿ ಇರಬೇಕೆಂಬ ಬೇಡಿಕೆ ಪರಿಗಣನೆ ಆಗಿಲ್ಲ. ಸಮವರ್ತಿ ಪಟ್ಟಿಯಲ್ಲಿನ ಶಾಸನಗಳಿಗೆ ಸಂಬಂಧಿಸಿ ರಾಜ್ಯಗಳು ಮತ್ತು ಕೇಂದ್ರದ ನಡುವೆ ಕಡ್ಡಾಯ ಸಮಾಲೋಚನೆಗೆ ಬೇಕಾದ ಔಪಚಾರಿಕ ಸಾಂಸ್ಥಿಕ ಸಂರಚನೆ ಮಾಡಲಾಗಿಲ್ಲ ಎಂಬುದನ್ನು ಗಮನಿಸಬೇಕು.

8. ಒಪ್ಪಂದಗಳನ್ನು ಮಾಡುವ ಅಧಿಕಾರ: ಈಗ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಮಾಡುವುದು ಪೂರ್ಣವಾಗಿ ಒಕ್ಕೂಟ ಕಾರ್ಯಾಂಗದ ಅಧಿಕಾರವಾಗಿದೆ. ಇದನ್ನು ಪೂರ್ಣವಾಗಿ ಪುನರ್ರಚಿಸಬೇಕು. ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಶಾಸನಾತ್ಮಕ ಒಪ್ಪಿಗೆ ಕಡ್ಡಾಯ ಎಂಬುದಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕು. ಡಬ್ಲ್ಯುಟಿಓ ತರಹದ ಅಂ.ರಾ. ಒಪ್ಪಂದಗಳು "ಕೃಷಿ"ಯಂತಹ ರಾಜ್ಯ ಸಬ್ಜೆಕ್ಟ್‌ಗಳ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತದೆ. ಇಂತಹ ಎಲ್ಲಾ ಸಂದರ್ಭಗಳಲ್ಲಿ ರಾಜ್ಯಗಳ ಜೊತೆ ಸಮಾಲೋಚನೆ ಮತ್ತು ಅಂತರ-ರಾಜ್ಯ ಮಂಡಳಿಯ ಸಹಮತವನ್ನು ಕಡ್ಡಾಯ ಮಾಡಬೇಕು.

9. ಅಖಿಲ ಭಾರತ ಸೇವೆಗಳು: ಐಎಎಸ್, ಐಪಿಎಸ್ ಮುಂತಾದ ಸೇವೆಗಳು ಈಗ ಸಂಪೂರ್ಣವಾಗಿ ಒಕ್ಕೂಟ ಸರ್ಕಾರದ ಡೊಮೈನ್‌ನಲ್ಲಿವೆ. ಕೆಲವು ಅಧಿಕಾರಗಳನ್ನು ರಾಜ್ಯಗಳಿಗೆ ವರ್ಗಾಯಿಸಬೇಕು, ಮುಖ್ಯವಾಗಿ ಅಖಿಲ ಭಾರತ ಸೇವೆಗಳ ರೂಲ್ಸ್ ಅಂಡ್ ರೆಗ್ಯುಲೇಷನ್ಸ್‌ನ ನಿರ್ವಹಣೆಯಲ್ಲಿ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಪಾತ್ರ ನೀಡಬೇಕು.

10. ಮಾರುಕಟ್ಟೆಯಿಂದ ಸಾಲ ಎತ್ತುವುದು: ಮಾರುಕಟ್ಟೆಯಿಂದ ಸಾಲ ಪಡೆಯುವ ವಿಚಾರದಲ್ಲಿ ರಾಜ್ಯಗಳಿಗೆ ಹೆಚ್ಚಿನ ಫ್ಲೆಕ್ಸಿಬಿಲಿಟಿ ಮತ್ತು ಸ್ವಾಯತ್ತತೆಯನ್ನು ಒದಗಿಸಲು ಸಂವಿಧಾನದ ಪ.293ನ್ನು ತಿದ್ದುಪಡಿ ಮಾಡಬೇಕು. ಮಾರುಕಟ್ಟೆ ಸಾಲದ ಪ್ರಮಾಣವನ್ನು ಹೆಚ್ಚಿಸಬೇಕು. ಈಗ ರಾಜ್ಯಗಳ ಸಾಲ ಎತ್ತುವ ಮಿತಿಯನ್ನು ಎಫ್.ಆರ್.ಬಿ.ಎಂ. ಶಾಸನದ ಕಟ್ಟಿಹಾಕಲಾಗಿದೆ. (1950'ರಲ್ಲಿ ಒಟ್ಟಾರೆ ಮಾರುಕಟ್ಟೆ ಎತ್ತುವಳಿಯಲ್ಲಿ ರಾಜ್ಯಗಳಿಗೆ ಮತ್ತು ಕೇಂದ್ರಕ್ಕೆ ಸಮನಾದ ಪ್ರಮಾಣವಿತ್ತು). ಜೊತೆಗೆ ಕೋವಿಡ್-19 ಸಂದರ್ಭದಲ್ಲಿ ಸಾಲದ ಪ್ರಮಾಣವನ್ನು ಶೇ.3 ರಿಂ ಶೇ.5 ಕ್ಕೆ ಹೆಚ್ಚಿಸಬೇಕಾದರೆ, 1. ಪಡಿತರ ವ್ಯವಸ್ಥೆ (ಒಂದು ದೇಶ ಒಂದು ರೇಷನ್ ಕಾರ್ಡ್) ಸುಧಾರಣೆ, 2. ವ್ಯಾಪಾರ ಸರಳೀಕರಣ ನೀತಿಗಳು, 3. ವಿದ್ಯುತ್ ವಿತರಣಾ ಕಂಪನಿಗಳ ಖಾಸಗೀಕರಣ, ಮತ್ತು 4. ನಗರ ಸ್ಥಳೀಯ ಆಡಳಿತ ಸುಧಾರಣೆಗಳನ್ನು ಮಾಡಬೇಕೆಂದು ಷರತ್ತುಗಳನ್ನು ವಿಧಿಸಲಾಗಿದೆ. ಈ ರೀತಿಯಾಗಿ ರಾಜ್ಯಗಳನ್ನು ಅಡಕತ್ತರಿಗೆ ಸಿಲುಕಿಸುವ ಮತ್ತು ದುರ್ಬಲಗೊಳಿಸುವ ಪ್ರಯತ್ನಗಳನ್ನು ಒಕ್ಕೂಟ ಸರ್ಕಾರ ಮಾಡುತ್ತಿದೆ.

11. ಆರ್‌ಬಿಐ ಸೇರಿದಂತೆ ಎಲ್ಲಾ ಹಣಕಾಸು ಮತ್ತು ಸಾರ್ವಜನಿಕ ಬ್ಯಾಂಕ್‌ಗಳ ಕಾರ್ಯನಿರ್ವಹಣೆಯಲ್ಲಿ ರಾಜ್ಯಗಳನ್ನು ಒಳಗೊಳ್ಳುವಿಕೆ, ಎಲ್ಲಾ ಒಕ್ಕೂಟ ಮಂಡಳಿಗಳಲ್ಲಿ ರಾಜ್ಯಗಳ ಪ್ರಾತಿನಿಧ್ಯ, ಖನಿಜ ಸಂಪನ್ಮೂಲಗಳಿಗೆ ಸಂಬಂಧಿಸಿ, ಅಂತರ್-ರಾಜ್ಯ ಪೈಪೋಟಿ ಇರುವ ಹಿನ್ನೆಲೆಯಲ್ಲಿ, ಸಾಮಾನ್ಯ ಮಾನದಂಡಗಳನ್ನು ರೂಪಿಸುವುದು, ಖನಿಜದ ರಾಯಲ್ಟಿ ದರಗಳನ್ನು ನಿರಂತರವಾಗಿ ಪುನರ್ ನಿಗದಿಪಡಿಸುವುದು, ಮುಂತಾದ ಪ್ರಶ್ನೆಗಳಲ್ಲಿ ರಾಜ್ಯಗಳ ಹಕ್ಕುಗಳ ಮೇಲೆ ದಾಳಿಗಳು ಹೆಚ್ಚಾಗುತ್ತಲೇ ಇವೆ.

12. ಜಮ್ಮು-ಕಾಶ್ಮೀರ: ರಾಜ್ಯವನ್ನು 2 ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾರ್ಪಡಿಸಲಾಗಿದೆ. ಅಲ್ಲಿದ್ದ ಚುನಾಯಿತ ಶಾಸಕಾಂಗದ ಒಪ್ಪಿಗೆ ಪಡೆಯದೇ ಮಾಡಲಾದ ಈ ತೀರ್ಮಾನ ಒಕ್ಕೂಟ ವ್ಯವಸ್ಥೆಯನ್ನು ನಾಶ ಮಾಡಲು ಮೋದಿ ಸರ್ಕಾರ ಯಾವ ಹಂತಕ್ಕೆ ಬೇಕಾದರೂ ಹೋಗಬಲ್ಲದು ಎಂಬುದನ್ನು ನಿರೂಪಿಸಿದೆ.

13. ಆರ್‌ಎಸ್‌ಎಸ್‌ನ ಹಿಂದುತ್ವ ರಾಷ್ಟ್ರ ನಿರ್ಮಾಣಕ್ಕೆ ಅತ್ಯಂತ ಕೇಂದ್ರೀಕೃತವಾದ ಪ್ರಭುತ್ವ ರಚನೆ ಅನಿವಾರ್ಯವಾಗಿದೆ. ಹೀಗಾಗಿ, ಸಂವಿಧಾನದಲ್ಲಿ ಅಡಕವಾಗಿರುವ ಮತ್ತು ತೋರಿಕೆಗಾದರೂ ಇರುವ ಒಕ್ಕೂಟದ ಲಕ್ಷಣಗಳನ್ನು ಹಿಂದೆಂದಿಗಿಂತಲೂ ಆಕ್ರಮಣಕಾರಿಯಾಗಿ ನಾಶ ಮಾಡಲು ಪ್ರಯತ್ನ ನಡೆದಿದೆ.

ಕಾರ್ಮಿಕ ಕಾನೂನುಗಳ ತಿದ್ದುಪಡಿ, ಕೃಷಿ ಕಾಯ್ದೆಗಳ ತಿದ್ದುಪಡಿ, ಸಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವುದು, ಭೂಸುಧಾರಣಾ ಕಾಯ್ದೆಗಳ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ, ವಿದ್ಯುತ್ ಕಾಯ್ದೆ ತಿದ್ದುಪಡಿ, ರಾಜ್ಯಗಳ ಅಧಿಕಾರವನ್ನು ಕಳಚಿ ಹಾಕುವುದು, ಶಿಕ್ಷಣವನ್ನು ಪೂರ್ಣವಾಗಿ ಕೇಂದ್ರೀಕರಿಸಲು ನೂತನ ಶಿಕ್ಷಣ ನೀತಿ, ಹಿಂದಿ ಹೇರಿಕೆಯ ಪ್ರಯತ್ನಗಳು, ಹೀಗೆ ಎಲ್ಲಾ ರಂಗಗಳಲ್ಲೂ ಅತ್ಯಂತ ಕೇಂದ್ರೀಕೃತವಾದ ಪ್ರಭುತ್ವ ಸ್ಥಾಪನೆಗೆ ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ.

ಭಾಷೆಗಳ ಆಧಾರದಲ್ಲಿ ರಚನೆಗೊಂಡ ಮತ್ತು ಒಕ್ಕೂಟ ವ್ಯವಸ್ಥೆಗೆ ಕಾರಣವಾದ ಎಲ್ಲ ಸಂಗತಿಗಳನ್ನು ಇಲ್ಲವಾಗಿಸುವ ಇಂತಹ ಪ್ರಯತ್ನಗಳನ್ನು ಹಿಮ್ಮೆಟ್ಟಿಸಬೇಕಾಗಿದೆ. ಭಾರತವೆಂಬ ಕಲ್ಪನೆ ಉಳಿಸಲು ರಾಜ್ಯಗಳ ಶಾಸನಾತ್ಮಕ ಹಕ್ಕು ಅಧಿಕಾರಗಳನ್ನು ಉಳಿಸಿಕೊಳ್ಳಬೇಕಾಗಿದೆ.

➘ ಕ್ಕೂ ಅಧಿಕ ಸೂಚಿಗಳನ್ನು ಆಧರಿಸಿ 'ಆಸ್ಪಿರೇಶನಲ್ ಡಿಸ್ಟ್ರಿಕ್ಟ್ ಕಾರ್ಯಕ್ರಮ' ಎಂಬ ಮಹತ್ವಾಕಾಂಕ್ಷೆಯ ಯೋಜನೆಯನ್ನು ನೀತಿ ಆಯೋಗ ರೂಪಿಸಿದೆ. ಈ ಯೋಜನೆಯ ಮೂಲಕ ರಾಜ್ಯಗಳಲ್ಲಿ ಯಾವ ವಲಯ ಹಿಂದುಳಿದಿದೆ, ಎಷ್ಟು ಹಿಂದುಳಿದಿದೆ, ಏಕೆ ಹಿಂದುಳಿದಿದೆ, ಇದಕ್ಕೆ ಪರಿಹಾರವೇನು ಎಂಬುದನ್ನು ಗುರುತಿಸಿ ಅವುಗಳ ಅಭಿವೃದ್ಧಿಗೆ ಮಾರ್ಗದರ್ಶನವನ್ನು ನೀತಿ ಆಯೋಗ ರಾಜ್ಯಗಳಿಗೆ ನೀಡುತ್ತದೆ. ಆದರೆ ಈ ಕಾರ್ಯಕ್ರಮಕ್ಕೆ ಒಕ್ಕೂಟ ಸರ್ಕಾರದ ಅನುದಾನವಿಲ್ಲ. ರಾಜ್ಯಗಳ ಮತ್ತು ರಾಜ್ಯಗಳೊಳಗಿನ ಜಿಲ್ಲೆಗಳ ಹಿಂದುಳಿದಿರುವಿಕೆಯನ್ನು ಎದುರಿಸಲು ಹಣಕಾಸು ಬಿಕ್ಕಟ್ಟನ್ನು ರಾಜ್ಯಗಳು ಎದುರಿಸುತ್ತಿವೆ. ಈ ಸಮಸ್ಯೆಯನ್ನು ನಿರ್ವಹಿಸುವ ಜವಾಬ್ದಾರಿ ಒಕ್ಕೂಟ ಸರ್ಕಾರಕ್ಕೂ ಇದೆ. ಆದರೆ ಇಂದಿನ ಒಕ್ಕೂಟ ಸರ್ಕಾರ ಇಂತಹ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ.

7.ಸ್ವಾತಂತ್ರ್ಯ ಬಂದಾಗಿನಿಂದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳ ವರ್ಗಾವಣೆಯನ್ನು ಒಕ್ಕೂಟ ಸರ್ಕಾರ ರಾಜ್ಯ ಸರ್ಕಾರಗಳ ಜೊತೆಯಲ್ಲಿ ಸಮಾಲೋಚಿಸಿ ನಡೆಸುವ ಸಂಪ್ರದಾಯವನ್ನು ಪಾಲಿಸುತ್ತಿತ್ತು. ಆದರೆ ಈಗ ಇದಕ್ಕೆ ಅನೇಕ ನಿಯಂತ್ರಣಗಳನ್ನು ಒಕ್ಕೂಟ ಸರ್ಕಾರ ಹೇರುತ್ತಿದೆ. ಅಖಿಲ ಭಾರತೀಯ ಅಧಿಕಾರಿಗಳನ್ನು ಒಕ್ಕೂಟ ಸರ್ಕಾರವೇ ಆಯ್ಕೆ ಮಾಡಿ ನೇಮಕ ಮಾಡಿದರೂ ಅವರು ಸೇವೆ ಸಲ್ಲಿಸುವುದು ರಾಜ್ಯಗಳಲ್ಲಿ. ಆದರಿಂದ ಅವರ ವರ್ಗಾವಣೆಯು ಅಧಿಕಾರವೂ ರಾಜ್ಯ ಸರ್ಕಾರಗಳಿಗಿರಬೇಕು. ಒಕ್ಕೂಟ ಸರ್ಕಾರದ ಸೇವೆಗೆ ಅಧಿಕಾರಿಗಳು ಬೇಕು ಎಂದಾದರೆ ಇದನ್ನು ರಾಜ್ಯ ಸರ್ಕಾರಗಳ ಜೊತೆಯಲ್ಲಿ ಸಮಾಲೋಚಿಸಿ ವರ್ಗಾವಣೆ ಮಾಡಬೇಕು. ಈ ಸಂಪ್ರದಾಯವನ್ನು ಒಕ್ಕೂಟ ಸರ್ಕಾರ ಮುರಿಯುತ್ತಿದೆ.

8.ರಾಜ್ಯ ಸಕಾರ್ರಗಳ ರಾಜಕೀಯ ಅಧಿಕಾರವನ್ನು ಇಂದು ರಾಜ್ಯಪಾಲರು ಚಲಾಯಿಸಲು ತೊಡಗಿದ್ದಾರೆ. ನಮ್ಮ ಸಂವಿಧಾನದ ಪ್ರಕಾರ ರಾಜ್ಯಪಾಲರು ರಾಜ್ಯ ಸರ್ಕಾರಗಳ ಸಲಹೆ-ಸೂಚನೆ ಮೇರೆಗೆ ಕಾರ್ಯನಿರ್ವಹಿಸಬೇಕು. ಇಂದು ಒಕ್ಕೂಟ ಸರ್ಕಾರದ ದೊಡ್ಡಣ್ಣತನದ ವರ್ತನೆಯಿಂದ ರಾಜ್ಯಗಳಲ್ಲಿ ಸಮಾನಾಂತರ ಸರ್ಕಾರ ನಡೆಸುವಂತಹ ಸಾಹಸಕ್ಕೆ ರಾಜ್ಯಪಾಲರು ಕೈಹಾಕುತ್ತಿದ್ದಾರೆ. ಕೇರಳ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿ ರಾಜ್ಯಪಾಲರು ಚುನಾಯಿತ ಜನಪ್ರತಿನಿಧಿ ಸರ್ಕಾರಕ್ಕೆ ಸವಾಲೊಡ್ಡುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಇದು ಒಕ್ಕೂಟ ತತ್ವಕ್ಕೆ ವಿರುದ್ಧವಾದುದು.

9.ಇಂದು ಕೇವಲ ಒಕ್ಕೂಟ ವ್ಯವಸ್ಥೆಗೆ ಮಾತ್ರವಲ್ಲ, ಅದರ ಆಧಾರ ಸ್ತಂಬವಾದ ಸಂವಿಧಾನಕ್ಕೆ, ಅದರ ಪ್ರಮುಖ ಆಧಾರವಾದ ಪ್ರಜಾಪ್ರಭುತ್ವಕ್ಕೆ ಅಪಾಯ ಬಂದಿದೆ. ಉದಾ: ಒಕ್ಕೂಟ ಸರ್ಕಾರವು ಇಡೀ ದೇಶಕ್ಕೆ ಅನ್ವಯವಾಗುವಂತಹ ಮತ್ತು ಅತ್ಯಂತ ಗಂಭೀರವಾದ ಬದಲಾವಣೆಗಳಿಗೆ ಕಾರಣವಾಗುವಂತಹ ತೀಮಾನಗಳನ್ನು ಒಕ್ಕೂಟ ತತ್ವಕ್ಕೆ ಅನುಗುಣವಾಗಿ ರಾಜ್ಯ ಸಕಾರ್ರಗಳ ಜೊತೆ ಚರ್ಚೆ ಮಾಡಿ-ಸಮಾಲೋಚಿಸಿ ತೆಗೆದುಕೊಳ್ಳಬೇಕು. ಇದು ಕಾಯಿದೆ ಅಥವಾ ನಿಯಮದ ಪ್ರಶ್ನೆಯಲ್ಲ. ಡಿಮಾನಿಟೈಸೇಶನ್ ಎಂಬ ಕ್ರಮ ತೆಗೆದುಕೊಂಡಾಗ ಒಕ್ಕೂಟ ಸರ್ಕಾರ ರಾಜ್ಯ ಸರ್ಕಾರಗಳ ಜೊತೆಯಲ್ಲಿ ಸಮಾಲೋಚನೆ(ರಹಸ್ಯ-ಗುಪ್ತವಾಗಿ)ನಡೆಸಿ ಜಾರಿಗೊಳಿಸಲಿಲ್ಲ. ಈ ಕ್ರಮ ಉಂಟು ಮಾಡಬಹುದಾದ ವಿಪರೀತಗಳನ್ನು ಗಮನಿಸದೆ ತೀರ್ಮಾನಿಸಿದ್ದರಿಂದ ಏನೆಲ್ಲ ಅನಾಹುತಗಳಾದವು ಎಂಬುದು ಇಂದು ಚರಿತ್ರೆ. ಒಕ್ಕೂಟ ಸರ್ಕಾರದ ಇಂತಹ ತೀರ್ಮಾನದಿಂದ ಉಂಟಾಗುವ ಎಲ್ಲ ಅನಾಹುತಗಳನ್ನು, ಅಪಾಯಗಳನ್ನು ರಾಜ್ಯ ಸರ್ಕಾರಗಳು ನಿರ್ವಹಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಕೊವಿಡ್ ಪೆಂಡಮಿಕ್‌ನಲ್ಲಿ ಏಕಾಏಕಿ ರಾತ್ರೋರಾತ್ರಿ ಯಾವ ಸಿದ್ಧತೆಯೂ ಇಲ್ಲದೆ ದೇಶದಾದ್ಯಂತ ಲಾಕ್‌ಡೌನ್ ಹೇರಿದಾಗಲೂ ರಾಜ್ಯ ಸರ್ಕಾರಗಳ ಜೊತೆಯಲ್ಲಿ ಸಮಾಲೋಚಿಸಲಿಲ್ಲ. ಯಾವ ಸಿದ್ದತೆಯಿಲ್ಲದೆಯೇ ಲಾಕ್‌ಡೌನ್ ಹೇರಿದ ಪರಿಣಾಮವಾಗಿ ಲಕ್ಷಾಂತರ ಕೂಲಿಕಾರರು, ವಲಸೆ ಕಾರ್ಮಿಕರು, ಅವರ ಕುಟುಂಬಗಳ ಮಹಿಳೆಯರ ಬದುಕು ನುಚ್ಚು ನೂರಾಯಿತು. ಸಾವಿರಾರು ಜನರು ಅನ್ನವಿಲ್ಲದೆ, ನೀರಿಲ್ಲದೆ, ವೈದ್ಯಕೀಯ ಸೇವೆಯಿಲ್ಲದೆ ಪ್ರಾಣ ಕಳೆದುಕೊಂಡರು. ಈ ಎಲ್ಲ ಆತಂಕಕಾರಿ ಬೆಳವಣಿಗೆಗಳನ್ನು ನಿರ್ವಹಿಸುವ ಜವಾಬ್ದಾರಿ ರಾಜ್ಯ ಸರ್ಕಾರಗಳದ್ದಾಗಿತ್ತು. ಆದರೆ ಇವುಗಳಿಗೆ ಸಂಬಂಧಿಸಿದ ತೀರ್ಮಾನಗಳಿಗೆ ರಾಜ್ಯ ಸರ್ಕಾರಗಳು ಜವಾಬ್ದಾರರಾಗಿರಲಿಲ. ಈ ನಿರ್ಣಯಗಳು ಉಂಟು ಮಾಡಿದ ಅನಾಹುತಗಳಿಗೆ ಮಾತ್ರ ರಾಜ್ಯಗಳು ಜವಾಬ್ದಾರರಾಗಬೇಕಾಯಿತು. ಇವೆಲ್ಲ ಬೆಳವಣಿಗೆಗಳು ಮೂಲತಃ ಪ್ರಜಾಪ್ರಭುತ್ವಕ್ಕೆ ಬಂದಿರುವ ಅಪಾಯಗಳಾಗಿವೆ. ಇದು ಕೇವಲ ರಾಜ್ಯ ಸರ್ಕಾರಗಳ ಆರ್ಥಿಕ ಅಥವಾ ಹಣಕಾಸು ಅಧಿಕಾರಗಳ ಹರಣದ ಸಮಸ್ಯೆ ಮಾತ್ರವಲ್ಲ.

10.ಕೊನೆಯದಾಗಿ ಒಕ್ಕೂಟ ಎನ್ನುವುದು ಭಾರತದಲ್ಲಿನ ಅನೇಕ ಭಾಷೆಗಳ, ಅನೇಕ ಸಂಸ್ಕೃತಿಗಳ, ಅನೇಕ ಸಂಪ್ರದಾಯಗಳ, ಅನೇಕ ಉಡುಪು-ಆಹಾರ ಪದ್ಧತಿಗಳ, ಹತ್ತಾರು ಧರ್ಮಗಳ, ನೂರಾರು ಜಾತಿಗಳ, ಅನೇಕ ಕೃಷಿಗಳ ಒಂದು ಬೃಹತ್ ಬಹುತ್ವದ ವ್ಯವಸ್ಥೆ. ಈ ವ್ಯವಸ್ಥೆಗೆ ಸಾವಿರಾರು ವರ್ಷಗಳ ಚರಿತ್ರೆಯಿದೆ. ಇವೆಲ್ಲವೂ ಇಂದು ಏಕಾಕಾರಿ, ಮೇಜಾರಿಟೇರಿಯನ್, ದ್ವೇಷ – ದೂಷಣೆ ಸಂಸ್ಕೃತಿಯ ಅಪಾಯಕ್ಕೆ ಒಳಗಾಗುತ್ತಿವೆ. ಹಿಂದಿ ಭಾಷೆ ಹೇರಿಕೆ ಎಂಬುದು ಕೇವಲ ಭಾಷೆಯ ಹೇರಿಕೆ ಮಾತ್ರವಲ್ಲ. ನಮ್ಮ ಸಂಕರ ಸಂಸ್ಕೃತಿಯ ಮೇಲಿನ ಆಕ್ರಮಣ ಇದಾಗಿದೆ. ಇದಲ್ಲದೆ ಸಾರ್ವಜನಿಕ ವಲಯವನ್ನು ಖಾಸಗಿ-ಕಾರ್ಪೋರೇಟ್ ಬಂಡವಳಿಗರಿಗೆ ಒಪ್ಪಿಸುವ ಕೆಲಸವನ್ನು ಒಕ್ಕೂಟ ಸರ್ಕಾರ ಮಾಡುತ್ತಿದೆ. ಇದರ ಪರಿಣಾಮಗಳನ್ನು ಎದುರಿಸಬೇಕಾಗಿರುವುದು ರಾಜ್ಯಸಕರ್ಶರಗಳಾಗಿವೆ. ಈ ಎಲ್ಲ ಸಮಸ್ಯೆಗಳಿಗೆ ಉತ್ತರ ನೀಡುವ ಕಾಲ ಈಗ ಬರುತ್ತಿದೆ. ಈ ರಾಜ್ಯೋತ್ಸವದ ಸಂದರ್ಭದಲ್ಲಿ ಈ ಬಗ್ಗೆ ನಾವು ನಿರ್ಣಾಯಕ ಹೆಜ್ಜೆ ಇಡಬೇಕಾಗಿದೆ.

ದ್ವೇಷ ಭಾಷಣದ ವಿರುದ್ಧ ಶೀಘ್ರ ಕ್ರಮ: ಉತ್ತರದ 3 ರಾಜ್ಯಗಳಿಗೆ ಸುಪ್ರಿಂಕೋರ್ಟ್ ತಾಕೀತು

ನ್ಯೂಸ್ 18 ವಾಹಿನಿಗೆ ಹಿಜಬ್ ಪ್ರಕರಣದಲ್ಲಿ ಸುದ್ದಿ ಮಾನಕಗಳ ಪ್ರಾಧಿಕಾರದಿಂದ 50 ಸಾವಿರ ರೂ. ದಂಡ

ಇದು ಅಮೃತ ಕಾಲ

ದೇಶದಲ್ಲಿ ಹಬ್ಬುತ್ತಿರುವ ದ್ವೇಷ ಪ್ರಚಾರಕ್ಕೆ ಕೊನೆಯೆಂದು ಎಂದು ಪ್ರಜಾಪ್ರಭುತ್ವವಾದಿಗಳು ಹಲುಬುತ್ತಿರುವ ವಾತಾವರಣವನ್ನು ತುಸುವಾದರೂ ತಿಳಿಗೊಳಿಸುವ ಎರಡು ಸುದ್ದಿಗಳು ಕಳೆದ ವಾರ ಬಂದವು.

ಮೊದಲನೆಯದು, ಸುಪ್ರಿಂ ಕೋರ್ಟ್ ಪೀಠವೊಂದು ಮೂರು ಉತ್ತರ ಭಾರತದ ರಾಜ್ಯ ಸರಕಾರಗಳಿಗೆ–ಉತ್ತರಪ್ರದೇಶ, ಉತ್ತರಾಖಂಡ ಮತ್ತು ದಿಲ್ಲಿ) ದ್ವೇಷ ಭಾಷಣಗಳ ವಿರುದ್ಧ ದೂರುಗಳಿಗೆ ಕಾಯದೇ ಕ್ರಮ ಕೈಗೊಳ್ಳಿ, ಇಲ್ಲವೇ ನ್ಯಾಯಾಂಗ ನಿಂದನೆ ಕ್ರಮವನ್ನು ಎದುರಿಸಬೇಕಾದೀತು ಎಂದು ತಾಕೀತು ಮಾಡಿರುವುದು, ಮತ್ತು ಎರಡನೆಯದ್ದು, ಕರ್ನಾಟಕದಲ್ಲಿ ಹಿಜಬ್ ನಿಷೇಧ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎನ್‌ಬಿಡಿಎಸ್‌ಎ ನ್ಯೂಸ್18 ವಾಹಿನಿಗೆ 50,000 ರೂ. ದಂಡ ಹಾಕಿರುವುದು. ಈ ಮೂರರಲ್ಲಿ ಎರಡು ರಾಜ್ಯಗಳು ಬಿಜೆಪಿ ಆಳ್ವಿಕೆಯಲ್ಲಿರುವುದು, ದಿಲ್ಲಿಯಲ್ಲಿ ಕೂಡ ಕಾನೂನು ವ್ಯವಸ್ಥೆ ಕೇಂದ್ರ ಸರಕಾರದ ಅಡಿಯಲ್ಲಿರುವುದು ಕಾಕತಾಳೀಯವಲ್ಲ ಎಂದು ಬಹುಶಃ ಈಗ ಯಾರಿಗೂ ಹೇಳಬೇಕಾಗಿಲ್ಲ.

ಮುಸ್ಲಿಂ ಸಮುದಾಯವನ್ನು ದ್ವೇಷ ಪ್ರಚಾರಕ್ಕೆ ಗುರಿ ಮಾಡುವುದನ್ನು ನಿಲ್ಲಿಸಬೇಕು ಎಂದು ಪತ್ರಕರ್ತರೊಬ್ಬರ ಅರ್ಜಿಯ ವಿಚಾರದ ವೇಳೆಯಲ್ಲಿ, ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಮತ್ತು ನ್ಯಾಯಮೂರ್ತಿ ಹೃಷಿಕೇಶ್ ರಾಯ್ ರವರಿರುವ ಸುಪ್ರಿಂ ಕೋರ್ಟ್ ನ್ಯಾಯಪೀಠ ರಾಜ್ಯ ಸರಕಾರಗಳು ತಾವಾಗಿಯೇ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದೆ. ಇದೊಂದು ಅತ್ಯಂತ ಗಂಭೀರ ವಿಷಯ, ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಕಂಡರಿಸಿರುವ ಈ ದೇಶದ ಜಾತ್ಯತೀತ ಸ್ವರೂಪವನ್ನು ಕಾಯ್ದುಕೊಳ್ಳಬೇಕಾದರೆ ರಾಜ್ಯ ಸರಕಾರಗಳು ದೂರುಗಳಿಗೆ ಕಾಯದೆ ತಕ್ಷಣ ಪ್ರಕರಣಗಳನ್ನು ದಾಖಲಿಸಬೇಕು ಮತ್ತು ಕ್ರಮ ಕೈಗೊಳ್ಳಬೇಕು ಎನ್ನುತ್ತ ಇದರಲ್ಲಿ ವಿಳಂಬ ಬ್ಯಾಯಾಲಯ ನಿಂದನೆ ಶಿಕ್ಷೆಗೆ ಕಾರಣವಾಗಬಹುದು ಎಂದು ಎಚ್ಚರಿಸಿರುವುದಾಗಿ 'ಲೈವ್‌ಲಾ" ವರದಿ ಮಾಡಿದೆ.

ಭಾರತದ ಸಂವಿಧಾನ ಒಂದು ಜಾತ್ಯತೀತ ರಾಷ್ಟ್ರ ಮತ್ತು ವ್ಯೆಯಕ್ತಿಕ ಘನತೆಯ ಆಶ್ವಾಸನೆ ನೀಡುತ್ತ ನಾಗರಿಕರ ನಡುವೆ ಸೋದರತ್ವವನ್ನು ಕಂಡರಿಸಿದೆ.. ವಿಭಿನ್ನ ಧರ್ಮಗಳ ಸಮುದಾಯಗಳ ಸದಸ್ಯರು ಸಾಮರಸ್ಯದಿಂದ ಬದುಕಲು ಸಾಧ್ಯವಾಗದಿದ್ದರೆ ಸೋದರತ್ವ ಸಾಧ್ಯವಾಗವುದಿಲ್ಲ ಎಂದು ನ್ಯಾಯಪೀಠ ಹೇಳಿತು.

"ಕಲಮು 51ಎ ನಾವು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎನ್ನುತ್ತದೆ. ಆದರೆ ನಾವು ಧರ್ಮದ ಹೆಸರಿನಲ್ಲಿ ಎಲ್ಲಿಗೆ ತಲುಪಿದ್ದೇವೆ? ಇದು ದುರಂತ" ಎಂದು ನ್ಯಾಯಮೂರ್ತಿ ಜೊಸೆಫ್ ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

ದ್ವೇಷ ಭಾಷಣಗಳ ಬಗ್ಗೆ ಹಲವು ದೂರುಗಳನ್ನು ಸಲ್ಲಿಸಿದರೂ ಆಡಳಿತಗಳಾಗಲೀ, ಸ್ವತಃ ಸುಪ್ರಿಂ ಕೋರ್ಟ್ ಕೂಡ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅರ್ಜಿದಾರರ ಪರವಾಗಿ ವಾದ ಮಾಡಿದ ಹಿರಿಯ ವಕೀಲ ಕಪಿಲ್ ಸಿಬಾಲ್ ನ್ಯಾಯಪೀಠದ ಗಮನ ಸೆಳೆದರು. ಅವರು ಬಿಜೆಪಿ ಸಂಸದ ಪರ್ವೇಷ್ ವರ್ಮರವರ ಹೇಳಿಕೆಗಳನ್ನು ಉಲ್ಲೇಖಿಸಿದಾಗ ನ್ಯಾಯ ಪೀಠ ಆಘಾತ ವ್ಯಕ್ತಪಡಿಸಿತು.

ಮೇಲೆ ಹೇಳಿದ ಇನ್ನೊಂದು ಸುದ್ದಿಯಲ್ಲಿ ನ್ಯೂಸ್ ಬ್ರಾಡ್‌ಕಾಸ್ಟಿಂಗ್ ಅಂಡ್ ಡಿಜಿಟಲ್ ಸ್ಟಾಂಡರ್ಸ್ ಅಥಾರಿಟಿ (ಎನ್‌ಬಿಡಿಎಸ್‌ಎ–ಸುದ್ದಿ ಮಾನಕಗಳ ಪ್ರಾಧಿಕಾರ)) ಕರ್ನಾಟಕದ ಹಿಜಬ್ ಪ್ರಕರಣದಲ್ಲಿ ನ್ಯೂಸ್ 18 ಇಂಡಿಯ ಸುದ್ದಿವಾಹಿನಿಯ ಮೇಲೆ ರೂ.50,000 ದಂಡ ಮತ್ತು ನಿರೂಪಕ ಅಮನ್ ಚೋಪ್ರಾ ಶೋ ಅನ್ನು ಏಳುದಿನಗಳ ಒಳಗೆ ವಾಹಿನಿಯ ವೆಬ್‌ಸೈಟ್ ಸೇರಿದಂತೆ ಎಲ್ಲ ವೇದಿಕೆಗಳಿಂದ ತೆಗೆಯಬೇಕು ಎಂದು ವಾಹಿನಿಗೆ ಅಕ್ಟೋಬರ್ 26ರಂದು ನಿರ್ದೇಶನ ನೀಡಿದೆ ಎಂದು 'ಲೈವ್‌ಲಾ' ವರದಿ ಮಾಡಿದೆ.

ಕಳೆದ ಡಿಸೆಂಬರಿನಲ್ಲಿ ಉಡುಪಿಯಲ್ಲಿ ಆರಂಭವಾದ ತರಗತಿಗಳಲ್ಲಿ ಹಿಜಬ್ ನಿಷೇಧದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಪ್ರಿಲ್ 6ರಂದು ನ್ಯೂಸ್ 18 ನಲ್ಲಿ ಪ್ರಸಾರ ಮಾಡಿದ ಶೋನಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಗಲಭೆ ನಡೆಸಿದರು ಎಂದು ಸುಳ್ಳು ಆರೋಪ ಹಾಕಿ ಅವರನ್ನು 'ಹಿಜಬಿ ಗ್ಯಾಂಗ್' ಮತ್ತು 'ಹಿಜಬ್‌ವಾಲಿ ಗಜ್ವ ಗ್ಯಾಂಗ್' ಎಂದು ಹೀಗಳೆದರು ಎಂಬ ದೂರನ್ನು ಪರಿಶೀಲಿಸಿದ ಎನ್‌ಬಿಡಿಎಸ್‌ಎ ಇದಕ್ಕೆ ನ್ಯೂಸ್ 18 ವಾಹಿನಿಗೆ ಕೊಟ್ಟ ಸಮರ್ಥನೆಯನ್ನು ಒಪ್ಪದೆ, ಈ ನಿರ್ದೇಶನ ನೀಡಿದೆ.

ವಾಹಿನಿ ಏರ್ಪಡಿಸಿದ ಚರ್ಚೆಯಲ್ಲಿ ಭಾಗವಹಿಸಿ ಹಿಜಬ್ ನಿಷೇದದ ವಿರುದ್ಧ ಮಾತಾಡಿದವರನ್ನು ಅಲ್‌ಖೈದ ಭಯೋತ್ಪಾದಕ ಸಂಘಟನೆಯೊಂದಿಗೆ ಜೋಡಿಸಿರುವುದಕ್ಕೆ ಯಾವುದೇ ಸಮರ್ಥನೆ ಕಂಡಿಲ್ಲ, ನಿರೂಪಕ ನೀತಿ ಮತ್ತು ಪ್ರಸಾರ ಸಂಹಿತೆಗೆ ಅಗೌರವದಿಂದ ವರ್ತಿಸಿದ್ದಾರೆ ಎಂದು ಎನ್‌ಬಿಡಿಎಸ್‌ಎ ಹೇಳಿದೆ. ಇಂತಹ ಉಲ್ಲಂಘನೆಗಳು ಮುಂದುವರೆದರೆ ಚೋಪ್ರಾರವರನ್ನು ತನ್ನ ಮುಂದೆ ಹಾಜರಾಗುವಂತೆ ಹೇಳಬೇಕಾಗುತ್ತದೆ ಎಂದೂ ಪ್ರಾಧಿಕಾರ ಎಚ್ಚರಿಸಿರುವುದಾಗಿ ಸ್ಕ್ರಾಲ್.ಇನ್ (ಅ.26) ವರದಿ ಮಾಡಿದೆ.

ಈ ಸುದ್ದಿ ಮಾನಕಗಳ ಪ್ರಾಧಿಕಾರ ಬಿಜೆಪಿ ನಿಯಂತ್ರಣದಲ್ಲಿರುವ ಉತ್ತರ ದಿಲ್ಲಿ ಮಹಾನಗರ ಪಾಲಿಕೆ ಜಹಾಂಗೀರ್‌ಪುರಿಯಲ್ಲಿ ಮಾಡಿದ ಬುಲ್‌ಡೋಜರ್ ಕಾರ್ಯಾಚರಣೆ ಕುರಿತ ನ್ಯೂಸ್18ನ ಕವರೇಜ್‌ನಲ್ಲಿ ಕೂಡ ನೀತಿ ಮತ್ತು ಪ್ರಸಾರ ಸಂಹಿತೆಯ ಉಲ್ಲಂಘನೆ ಮಾಡಲಾಗಿದೆ ಎಂದು ಟೀಕೆ ಮಾಡಿದೆ.



"ನಾನಿಲ್ಲಿ ನಗರ ನಕ್ಸಲರ ಬಗ್ಗೆ ಎಚ್ಚರಿಸಲು ಬಂದಿದ್ದೇನೆ"
–ಗುಜರಾತಿನಲ್ಲಿ ಪ್ರಧಾನ ಮಂತ್ರಿಗಳು
ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ಇವೆರಡು ಸುದ್ದಿಗಳು ತಾತ್ಕಾಲಿಕ ಸಮಾಧಾನ ಮಾತ್ರವೇ? ಇಂತಹ ಸಂದೇಹಕ್ಕೆ ಬಹಳಷ್ಟು ಅವಕಾಶಗಳಿವೆ, ಕಾದು ನೋಡಬೇಕಷ್ಟೇ.

ಕಪಿಲ್ ಸಿಬಾಲ್ ಬಿಜೆಪಿ ಸಂಸದನ ಹೇಳಿಕೆಗಳನ್ನು ಉಲ್ಲೇಖಿಸಿದಾಗ ಆ ಬಗ್ಗೆ ನ್ಯಾಯಪೀಠ ಆಘಾತ ವ್ಯಕ್ತಪಡಿಸುವಾಗಲೂ, ಒಬ್ಬ ನ್ಯಾಯಮೂರ್ತಿಗಳು ಮುಸ್ಲಿಮರೂ ದ್ವೇಷ ಭಾಷಣದಲ್ಲಿ ತೊಡಗಿದ್ದಾರೆಯೇ ಎಂದು ಕೇಳಿದರಂತೆ. ಹಾಗೆ ಮಾಡಿದರೆ ಅವರನ್ನು ಬಿಡುತ್ತಾರೆಯೇ ಎನ್ನುತ್ತ ಸಿಬಾಲ್ ಪ್ರತಿಯೊಬ್ಬರ ಬಗ್ಗೆಯೂ ಕಾನೂನಿನ ಅಡಿಯಲ್ಲಿ ಕಟ್ಟುನಿಟ್ಟಾಗಿ ವರ್ತಿಸಬೇಕು ಎಂದು ಹೇಳಿದರಂತೆ. ಆ ನ್ಯಾಯಮೂರ್ತಿಗಳು, ಒಂದು ಪ್ರಜಾಪ್ರಭುತ್ವಕ್ಕೆ ಇಂತಹ (ಪರ್ವೇಶ್ ವರ್ಮರಂತವರ) ಹೇಳಿಕೆಗಳು ಕಳವಳಕಾರಿ ಎನ್ನುತ್ತಲೇ, ಒಂದೇ ಸಮುದಾಯದ ವಿರುದ್ಧದ ಹೇಳಿಕೆಗಳನ್ನು ನ್ಯಾಯಾಲಯದ ಮುಂದೆ ತರಲಾಗುತ್ತಿದೆ, ಸರ್ವೋಚ್ಚ ನ್ಯಾಯಾಲಯ ಒಬ್ಬರನ್ನೇ ಗುರಿ ಮಾಡುತ್ತಿದೆ ಎಂಬ ಭಾವನೆ ಬರಬಾರದು ಎಂದಿರುವುದು ಗಮನಾರ್ಹ.

ಅದೇ ವೇಳೆಗೆ "ಮೌನ ಖಂಡಿತವಾಗಿಯೂ ಒಂದು ಉತ್ತರವಲ್ಲ, ನಮ್ಮ ಕಡೆಯಿಂದ, ಮತ್ತು ನ್ಯಾಯಾಲಯದ ಕಡೆಯಿಂದ" ಎಂದು ಕಪಿಲ್ ಸಿಬಾಲ್ ನ್ಯಾಯಪೀಠದ ಎದುರು ಹೇಳಿರುವುದೂ ಗಮನಾರ್ಹ.

ಕೇಸರಿ ಸ್ಪರ್ಧೆ ಮತ್ತು ರೂಪಾಯಿ ಬಲ

ತನ್ನ ಸರಕಾರದಲ್ಲಿ ಸಹಯೋಗಿಯಾಗಿದ್ದ ರಾಜೇಂದ್ರ ಪಾಲ್ ಗೌತಮ್ ಬೌದ್ಧ ದೀಕ್ಷಾ ಸಮಾರಂಭದಲ್ಲಿ ಭಾಗವಹಿಸಿದ್ದಕ್ಕಾಗಿ ಬಿಜೆಪಿ ಮಂದಿಯ ಟೀಕೆಗೊಳಗಾದಾಗ ಅವರ ಸಮರ್ಥನೆಗೆ ಮುಂದಾಗದ, ದಿಲ್ಲಿಯ ಮುಖ್ಯಮಂತ್ರಿಗಳು ಈಗ ಮತ್ತೆ ಸುದ್ದಿಯಲ್ಲಿದ್ದಾರೆ– ಅದೇ ಜಾಡಿನಲ್ಲಿ.



ಅವರ ಕೆರೆಯಲ್ಲಿ ಇವರ ಗಾಳ
ವ್ಯಂಗ್ಯಚಿತ್ರ: ವಿಷ್ಣು ಮಾಧವ್, 'ಪೆನ್ಸಿಲಾಶನ್';, ಟ್ವಿಟರ್

ಭಾರತದ ಕರೆನ್ಸಿ ನೋಟುಗಳಲ್ಲಿ ಹಿಂದೂ ದೇವತೆಗಳಾದ ಗಣೇಶ ಮತ್ತು ಲಕ್ಷ್ಮಿಯ ಚಿತ್ರಗಳನ್ನು ಮುದ್ರಿಸಬೇಕು ಎಂದು ಅವರು ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿದ್ದಾರೆ ಎಂಬುದು ದೊಡ್ಡ ಸುದ್ದಿಯಾಗುತ್ತಿದೆ. ಮುಖ್ಯವಾಗಿ ವ್ಯಂಗ್ಯಚಿತ್ರಕಾರರಿಗೆ!

"75 ವರ್ಷಗಳ ನಂತರವೂ ಭಾರತ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿಯೇ ಇದೆ. ಭಾರತವನ್ನು ಒಂದು ಶ್ರೀಮಂತ ದೇಶವಾಗಿಸಲು ದೊಡ್ಡ ಸಂಖ್ಯೆಯಲ್ಲಿ ಶಾಲೆಗಳನ್ನು ಮತ್ತು ಆಸ್ಪತ್ರೆಗಳನ್ನು ನಿರ್ಮಿಸಬೇಕಾಗಿದೆ. ಬಹಳಷ್ಟು ಪ್ರಯತ್ನಗಳನ್ನು ಮಾಡಬೇಕಾಗಿದೆ. ಆದರೆ ದೇವ–ದೇವಿಯರ ಆಶೀರ್ವಾದ ನಮಗಿದ್ದಾಗ ಮಾತ್ರವೇ ಪ್ರಯತ್ನಗಳು ಫಲ ನೀಡುತ್ತವೆ" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ.

85% ಮುಸ್ಲಿಂ ಜನಸಂಖ್ಯೆ ಹೊಂದಿರುವ ಇಂಡೋನೇಸ್ಯಾ ಅದನ್ನು ಮಾಡಬಹುದಾದರೆ ನಾವೇಕೆ ಮಾಡಬಾರದು ಎಂದೂ ಅವರು ತರ್ಕಿಸಿದ್ದಾರಂತೆ. ಆದರೆ ಇಂಡೋನೇಸ್ಯಾಕ್ಕೆ ಅದು ಫಲ ನೀಡಿದೆ ಯೆಂದೇನೂ ಅವರು ಹೇಳಿದಂತಿಲ್ಲ, ಅಲ್ಲದೆ ದೇವಿ–ದೇವತೆಗಳ ಚಿತ್ರಗಳನ್ನು ಹಾಕಿದ ಮಾತ್ರಕ್ಕೆ ಪರಿಸ್ಥಿತಿ ಸುಧಾರಿಸುತ್ತದೆ ಎಂದೇನೂ ತಾನು ಹೇಳುತ್ತಿಲ್ಲ ಎಂದೂ ಅವರು ಸೇರಿಸಿದ್ದಾರಂತೆ.

ಭಾರತದ ಅರ್ಥವ್ಯವಸ್ಥೆ ಒಂದು ಒಂದು ಕಷ್ಟಕರ ಘಟ್ಟದಿಂದ ಹಾದು ಹೋಗುತ್ತಿದೆ, ಡಾಲರಿಗೆದುರಾಗಿ ರೂಪಾಯಿ ದುರ್ಬಲಗೊಳ್ಳುತ್ತಿದೆ ಎಂದು ಅವರು ಹೇಳುತ್ತಿರುವಂತೆಯೇ ಒಂದು ಡಾಲರಿಗೆ 82.81 ರೂಪಾಯಿ ಇದ್ದದ್ದು ಈಗ 82.33 ಆಗಿ ರೂಪಾಯಿ ಬಲ ಹೆಚ್ಚಿದೆ ಎಂದು ವರದಿಯಾಗಿದೆ.

ಆದರೆ ಇದು ನಮ್ಮ ಹಣಕಾಸು ಮಂತ್ರಿಗಳು ಕೆಲವು ದಿನಗಳ ಹಿಂದೆ ಹೇಳಿದ ರೀತಿಯಲ್ಲಿ ಆಗಿದೆ–ತಿರುಗುಮುರುಗಾಗಿ ಅಷ್ಟೇ. ಅಂದರೆ ಇಲ್ಲಿ ಸದ್ಯಕ್ಕೂ ರೂಪಾಯಿ ಬಲ ಹೆಚ್ಚಿಲ್ಲ, ಬದಲಿಗೆ ಸದ್ಯಕ್ಕೆ ಡಾಲರ್ ಬಲ ಕುಂದಿದೆ. ಇದರಿಂದಾಗಿ ಜಗತ್ತಿನ ಎಲ್ಲ ಪ್ರಮುಖ ಕರೆನ್ಸಿಗಳ ಬಲವೂ ಹೆಚ್ಚಿದೆಯಂತೆ.

'ಉದ್ಯೋಗ ಮೇಳ' ಆರಂಭ!


–10 ಲಕ್ಷದಲ್ಲಿ 75 ಸಾವಿರದೊಂದಿಗೆ!!

ಅಕ್ಟೋಬರ್ 22 ರಂದು ಪ್ರಧಾನ ಮಂತ್ರಿಗಳು 'ರೋಜ್‌ಗಾರ್ ಮೇಲಾ'(ಉದ್ಯೋಗ ಮೇಳ') ಆರಂಭಿಸಿದ್ದಾರೆಂದು ವರದಿಯಾಗಿದೆ. "ಸ್ವಾತಂತ್ರ್ಯದ 75 ವರ್ಷಗಳನ್ನು ಮನಸ್ಸಿನಲ್ಲಿಟ್ಟುಕೊಂಡು 75,000 ಯುವಜನರಿಗೆ ಕೇಂದ್ರ ಸರಕಾರ ಒಂದು ಕಾರ್ಯಕ್ರಮದ ಅಡಿಯಲ್ಲಿ ನೇಮಕಾತಿ ಪತ್ರಗಳನ್ನು ಕೊಡುತ್ತಿದೆ" ಎಂದು ಈ ಸಂದರ್ಭದಲ್ಲಿ ಅವರು ಹೇಳಿದ್ದಾರೆ.

ಎನ್‌ಡಿಎ/ಬಿಜೆಪಿ ನೇತೃತ್ವದ ರಾಜ್ಯ ಸರಕಾರಗಳೂ ಇಂತಹ ಮೇಳಗಳನ್ನು ನಡೆಸುತ್ತವೆ ಎಂದೂ ಅವರು ಹೇಳಿದ್ದಾರೆ.

ಇದಕ್ಕೆ ತುಸು ಮೊದಲು, ಅಕ್ಟೋಬರ್ ತಿಂಗಳಲ್ಲಿ ಹಬ್ಬದ ಸೀಜನ್ ಹೊರತಾಗಿಯೂ ನಿರುದ್ಯೋಗ ದರ ಈ ಹಣಕಾಸು ವರ್ಷದ ಆರಂಭದಲ್ಲಿ ಇದ್ದುದಕ್ಕಿಂತಲೂ ಮೇಲಿನ ಮಟ್ಟಕ್ಕೆ, 7.83% ದಿಂದ 7.86%ಕ್ಕೆ ಏರಿದೆ ಎಂದು ವರದಿಯಾಗಿದೆ.

ಕೇಂದ್ರ ಸರಕಾರೀ ಇಲಾಖೆಗಳಲ್ಲಿ, ಕೇಂದ್ರೀಯ ಯೋಜನೆಗಳಲ್ಲಿ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ 30 ಲಕ್ಷ ದಾಟಿದೆ, ಮುಂದಿನ 18 ತಿಂಗಳಲ್ಲಿ 10ಲಕ್ಷ ಉದ್ಯೋಗಗಳನ್ನು ಕೊಡುವುದಾಗಿ ಹೇಳುವ ಮೂಲಕ ಸರಕಾರ ತನ್ನ ವಿಫಲತೆಯನ್ನು ಒಪ್ಪಿಕೊಂಡಿದ್ದ ಸರಕಾರ ಈಗ 4 ತಿಂಗಳಾದ ಮೇಲೆ 75000 ನೇಮಕಾತಿ ಪತ್ರಗಳನ್ನಷ್ಟೇ ನೀಡಿದೆ. ಅಂದರೆ ಈ 10 ಲಕ್ಷದ ಗುರಿಯೂ ಈಡೇರುವುದಿಲ್ಲ ಎಂದು ಕೇರಳದ ಮಾಜಿ ಹಣಕಾಸು ಮಂತ್ರಿ ಪ್ರೊ. ಥಾಮಸ್ ಐಸಾಕ್ ಟಿಪ್ಪಣಿ ಮಾಡಿದ್ದಾರೆ.



ಹೆಚ್ಚುತ್ತಿರುವ ಹಸಿವು ಮತ್ತು ಬೆಳೆಯುತ್ತಿರುವ ಬಡತನ

ಉನ್ನತ ಮಟ್ಟದ ಜೀವನದ ಭಾಗವಾಗಿ ಆಹಾರ ಧಾನ್ಯಗಳ ಬಳಕೆಯನ್ನು ಇಚ್ಛಾನುಸಾರವಾಗಿ ಕಡಿಮೆ ಮಾಡಿಕೊಳ್ಳಲಾಗಿರುವುದರಿಂದ ತಲಾ ಆಹಾರಧಾನ್ಯಗಳ ಬಳಕೆಯಲ್ಲಿ ಇಳಿಕೆಯಾಗಿರಬಹುದು, ಆದ್ದರಿಂದ ಇದು ಜೀವನಮಟ್ಟ ಸುಧಾರಣೆಯಾಗುತ್ತಿರುವುದರ ಲಕ್ಷಣವೇ ವಿನಃ ಜೀವನ ಮಟ್ಟ ಹದಗೆಡುತ್ತಿರುವುದರ ಲಕ್ಷಣವಲ್ಲ. ಆದ್ದರಿಂದ, ಮೇಲ್ನೋಟದಲ್ಲಿ ಹಸಿವು ಹೆಚ್ಚುತ್ತಿರುವುದಾಗಿ ತೋರುತ್ತಿರುವ ಕಾರಣದ ಮೇಲೆ ಬಡತನದ ಹೆಚ್ಚಳದ ಬಗ್ಗೆ ತೀರ್ಮಾನಕ್ಕೆ ಬರುವುದು ತರವಲ್ಲ. ಬಡತನದ ವ್ಯಾಪ್ತಿ ಹೆಚ್ಚುತ್ತಿಲ್ಲ; ಅದು ಇಳಿಯುತ್ತಿದೆ ಎಂಬೊಂದು ವಾದವಿದೆ. ಭಾರತ ಸರ್ಕಾರ ಮತ್ತು ವಿಶ್ವ ಬ್ಯಾಂಕ್ ಇದನ್ನೇ ಹೇಳುತ್ತಿವೆ. ಆದರೆ ಉನ್ನತ ಬೆಳವಣಿಗೆಯ ದೇಶಗಳು ಎಂದು ಹೇಳಲಾಗುವ ಒಂದೇ ಒಂದು ದೇಶವೂ ಸಹ ಹಸಿವಿನ ಸೂಚ್ಯಂಕ ಪಟ್ಟಿಯಲ್ಲಿ ಭಾರತ ಇಳಿದಿರುವ ಸ್ಥಾನದ ಹತ್ತಿರದಲ್ಲಿಯೂ ಇಲ್ಲದಿರುವುದು, ಬದಲಿಗೆ ಸಾಮಾನ್ಯವಾಗಿ ಬಡ ದೇಶಗಳೆಂದೇ ಪರಿಗಣಿಸಲ್ಪಟ್ಟ ದೇಶಗಳ ಜತೆಗಿರುವುದು ಇಂತಹ ವಾದಗಳ ವಿಚಾರಶೂನ್ಯತೆಯನ್ನು ತೋರಿಸುತ್ತದೆ. ಬಡತನದ ಅಂದಾಜುಗಳ ಅಪ್ರಾಮಾಣಿಕತೆಯನ್ನು ಜಾಗತಿಕ ಹಸಿವು ಸೂಚ್ಯಂಕವು ಬಹಿರಂಗಪಡಿಸಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್



ಜಾಗತಿಕ ಹಸಿವಿನ ಸೂಚ್ಯಂಕವನ್ನು ಸಿದ್ಧಪಡಿಸಿ ವರ್ಷ ವರ್ಷವೂ ಪ್ರಕಟಿಸುವ ವಾಡಿಕೆಯಂತೆ 2022ರ ಜಾಗತಿಕ ಹಸಿವು ಸೂಚ್ಯಂಕವು ಹೊರಬಂದಿದೆ. 121 ದೇಶಗಳನ್ನು ಒಳಗೊಂಡ ಈ ಸೂಚ್ಯಂಕದಲ್ಲಿ (ಹಸಿವೆಯು ಒಂದು ಸಮಸ್ಯೆಯಾಗಿಲ್ಲದ ದೇಶಗಳನ್ನು ಹೊರಗಿಡಲಾಗಿದೆ) 29.1 ಅಂಕಗಳನ್ನು ಪಡೆದ ಭಾರತವು 107ನೇ ಶ್ರೇಯಾಂಕದಲ್ಲಿದೆ. 2014ರ ಸೂಚ್ಯಂಕದಲ್ಲಿ ಪಡೆದಿದ್ದ 28.2 ಅಂಕಗಳಿಗೆ ಹೋಲಿಸಿದರೆ 2022ರಲ್ಲಿ ದೇಶವು ಹೀನಾಯವಾಗಿ ಕೆಳಗಿಳಿದಿದೆ (ಸಂಖ್ಯೆಯು ಪಟ್ಟಿಯಲ್ಲಿ ಎಷ್ಟು ಕೆಳಗಿನದೊ ಹಸಿವೆಯ ಮಟ್ಟವು ಅಷ್ಟು ಕೀಳಾಗಿದೆ ಎಂದರ್ಥ). ಅತ್ಯಂತ ವೇಗವಾಗಿ ಬೆಳೆಯುತ್ತಿರುವ ವಿಶ್ವದ ಅರ್ಥವ್ಯವಸ್ಥೆಗಳಲ್ಲಿ ಭಾರತವೂ ಒಂದು; ಉದಯೋನ್ಮುಖ ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿರುವ ಭಾರತದ ಜಿಡಿಪಿಯು 5 ಟ್ರಿಲಿಯನ್ ಡಾಲರ್ ಮಟ್ಟವನ್ನು ಬೇಗನೆ ತಲುಪಲಿದೆ ಎಂಬುದಾಗಿ ಇತ್ತೀಚಿನ ದಿನಗಳಲ್ಲಿ ಎಡೆಬಿಡದೆ ಹೊಮ್ಮಿಸುತ್ತಿರುವ ಬಣ್ಣದ ಮಾತುಗಳಿಗೆ ಮರುಳಾಗುತ್ತಿದ್ದವರನ್ನು ಜಾಗತಿಕ ಹಸಿವಿನ ಸೂಚ್ಯಂಕವು ಕಣ್ಣು ತೆರೆಯುವಂತೆ ಮಾಡಿದೆ. ವಿಪರ್ಯಾಸವೆಂದರೆ, ಈ ಸೂಚ್ಯಂಕದಲ್ಲಿ ಭಾರತಕ್ಕಿಂತ ಕೆಳಗಿನ ಸ್ಥಾನದಲ್ಲಿರುವ ಇಡೀ ದಕ್ಷಿಣ ಏಷ್ಯಾದ ಏಕೈಕ ದೇಶವೆಂದರೆ ಯುದ್ಧದಿಂದ ವಿಪರೀತ ಹಾನಿಗೊಳಗಾದ ಅಫ್ಘಾನಿಸ್ತಾನ (109ನೇ ಸ್ಥಾನ) ಮಾತ್ರ. ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾ 64ನೇ ಸ್ಥಾನದಲ್ಲಿದ್ದರೆ, ನೇಪಾಳ 81, ಬಾಂಗ್ಲಾದೇಶ 84 ಮತ್ತು ಪಾಕಿಸ್ತಾನ 99ನೇ ಸ್ಥಾನದಲ್ಲಿವೆ.

ಈ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ದೇಶದಲ್ಲಿ ಹಸಿವೆಯು ಹೆಚ್ಚುತ್ತಿರುವುದನ್ನು ಮತ್ತು ಹೊಟ್ಟೆಗಿಲ್ಲದವರ ಸಂಖ್ಯೆ ಬೆಳೆಯುತ್ತಿರುವುದನ್ನು ಹಲವಾರು ಪರಿಣತರು ಹೇಳುತ್ತಲೇ ಬಂದಿದ್ದಾರೆ. ದೈನಂದಿನ ಕ್ಯಾಲೋರಿ ಸೇವನೆಯ ತಲಾ ಪ್ರಮಾಣ ಮತ್ತು ವಾರ್ಷಿಕ ಆಹಾರ ಧಾನ್ಯಗಳ ತಲಾ ಲಭ್ಯತೆಯ ದತ್ತಾಂಶವನ್ನು ಆಧರಿಸಿ ಲೆಕ್ಕ ಹಾಕಿರುವ ಪರಿಣತರು ಈ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಆದರೆ, ಹಾಡಿ ಹೊಗಳಿದ ಜಿಡಿಪಿ ಬೆಳವಣಿಗೆಯ ಹೊರತಾಗಿಯೂ, ಹಸಿವೆ ಮತ್ತು ಬಡತನಗಳು ಹೆಚ್ಚುತ್ತಿವೆ. ಹಸಿವೆಯ ತೀವ್ರತೆಯು ಹೆಚ್ಚುತ್ತಿರುವ ಬಡತನದ ಲಕ್ಷಣವಾಗಿರುವುದರಿಂದ ಮತ್ತು ಈ ಪ್ರತಿಪಾದನೆಯನ್ನು ಯೋಜನಾ ಆಯೋಗವು ಮೂಲತಃ ಒಪ್ಪಿಕೊಂಡಿರುವುದರಿಂದ, ನವ-ಉದಾರವಾದದ ಅವಧಿಯು, ಹಸಿವೆಯ ಹೆಚ್ಚಳದ ಮತ್ತು ಅಬಾಧಿತವಾಗಿ ಬೆಳೆದ ಬಡತನದ ಅವಧಿಯಾಗಿರಲೇಬೇಕೆಂದು ಮತ್ತು ಈ ವಿದ್ಯಮಾನವು ಈ ವರ್ಷದ ಹಸಿವಿನ ಸೂಚ್ಯಂಕದಲ್ಲಿ ಪರಾಕಾಷ್ಠೆಯನ್ನು ತಲುಪಿದೆ ಎಂದೂ ಪರಿಣತರು ವಾದಿಸುತ್ತಾರೆ.

ನವ-ಉದಾರವಾದಿ ಆಳ್ವಿಕೆಯ ಕಾಲದಲ್ಲಿ ಹೆಚ್ಚುತ್ತಾ ಬಂದ ಹಸಿವೆಯ ಬಗ್ಗೆ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಸ್ಥೆಯ "ದೊಡ್ಡ ಮಾದರಿ" ಸರ್ವೆಯ ಅಂಕಿ ಅಂಶಗಳನ್ನು ಪುರಾವೆಯಾಗಿ ಉಲ್ಲೇಖಿಸಬಹುದು. "ದೊಡ್ಡ ಮಾದರಿ" ಸರ್ವೆ ಎಂದರೆ, ಹಲವು ಸಾವಿರ ಕುಟುಂಬಗಳನ್ನು ಐದು ವರ್ಷಕ್ಕೊಮ್ಮೆ ವ್ಯವಸ್ಥಿತವಾಗಿ ಸಂದರ್ಶಿಸಿ ಅವರು ಸೇವಿಸುವ ಆಹಾರದ ವಿವರ ಮತ್ತು ಅವರ ಖರ್ಚಿನ ವಿವರಗಳನ್ನು ಆಧರಿಸಿ ಅವರ ಆಹಾರ ಸೇವನೆಯ ಕ್ಯಾಲೊರಿ ಪ್ರಮಾಣವನ್ನು ನಿರ್ಧರಿಸುವ ಕ್ರಮ. ವಿಶ್ವದಲ್ಲೇ ಅತಿ ದೊಡ್ಡ ಸ್ಯಾಂಪಲ್ ಸರ್ವೆ ಎನಿಸಿದ್ದ ಈ ಸರ್ವೆಯ ವಿವರಗಳು ಲಭ್ಯವಿರುವ ಇತ್ತೀಚಿನ ವರ್ಷವೆಂದರೆ 2011–12 ಮಾತ್ರ. ನವ-ಉದಾರವಾದಿ ಆಳ್ವಿಕೆಯ ಆರಂಭದ ನಂತರ ನಡೆಸಿದ ಮತ್ತು ದತ್ತಾಂಶಗಳನ್ನು ಸರ್ಕಾರವು ಬಿಡುಗಡೆ ಮಾಡಿದ ಮೊದಲ "ದೊಡ್ಡ ಮಾದರಿ" ರಾಷ್ಟ್ರೀಯ ಸರ್ವೆಯ ವರ್ಷವೆಂದರೆ (NSS “large sample” year) 1993–94. ಎರಡನೆಯ ಹಾಗೂ ಕೊನೆಯ "ದೊಡ್ಡ ಮಾದರಿ" ರಾಷ್ಟ್ರೀಯ ಸರ್ವೆಯ ವರ್ಷವೆಂದರೆ 2011–12. ಬಡತನದ ಮಟ್ಟವನ್ನು ನಿರ್ಧರಿಸಲು ನಿಗದಿಪಡಿಸಿದ ಕ್ಯಾಲೋರಿ ಮಾನದಂಡದ ಪ್ರಕಾರ, ಈ ಎರಡು ಸರ್ವೆಗಳ ನಡುವಿನ ಅವಧಿಯಲ್ಲಿ, ಗ್ರಾಮೀಣ ಭಾರತದಲ್ಲಿ ದಿನಕ್ಕೆ ತಲಾ 2200 ಕ್ಯಾಲೋರಿಗಳಿಗಿಂತ ಕಡಿಮೆ ಆಹಾರ ಸೇವಿಸುತ್ತಿದ್ದ ಜನಸಂಖ್ಯೆಯ ಅನುಪಾತವು ಶೇ. 58ರಿಂದ ಶೇ. 68ಕ್ಕೆ ಏರಿತ್ತು. ಅದೇ ರೀತಿಯಲ್ಲಿ, ನಗರ ಭಾರತದಲ್ಲಿ 2100 ಕ್ಯಾಲೋರಿಗಳಿಗಿಂತ ಕಡಿಮೆ ತಲಾ ಆಹಾರ ಸೇವಿಸುತ್ತಿದ್ದ ಜನಸಂಖ್ಯೆಯ ಅನುಪಾತವು ಶೇ. 57ರಿಂದ ಶೇ. 65ಕ್ಕೆ ಏರಿತ್ತು. 2017–18ರ "ದೊಡ್ಡ ಮಾದರಿ" ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ಅಂಕಿಅಂಶಗಳು ಎಷ್ಟು ದಿಗಿಲುಗೊಳಿಸುವಂತಿದ್ದವು ಎಂದರೆ, ಸರ್ಕಾರವು ಅವುಗಳನ್ನು ಬಚ್ಚಿಟ್ಟಿತು ಮತ್ತು ಈ "ದೊಡ್ಡ ಮಾದರಿ" ಸರ್ವೆಯನ್ನೇ ನಿಲ್ಲಿಸಿತು. ಮಾಧ್ಯಮಗಳಲ್ಲಿ ಸೋರಿಕೆಯಾದ ಈ ಸರ್ವೆಯ ವರದಿಯ ಪ್ರಕಾರ. 2011–12 ಮತ್ತು 2017–18ರ ನಡುವೆ ಗ್ರಾಮೀಣ ಭಾರತದಲ್ಲಿ ತಲಾ ನೈಜ ವೆಚ್ಚವು ಶೇ. 9ರಷ್ಟು ಕುಸಿದಿದೆ.

ಹೆಚ್ಚುತ್ತಿರುವ ಹಸಿವೆ ಹದಗೆಡುತ್ತಿರುವ ಪರಿಸ್ಥಿತಿಯ ಪುರಾವೆ ಅಲ್ಲ?

ಕಾಲಕ್ರಮೇಣ ಹೆಚ್ಚುತ್ತಿರುವ ಹಸಿವೆಯನ್ನು ಹದಗೆಡಲಿರುವ ಪರಿಸ್ಥಿತಿಯ ಪುರಾವೆಯಾಗಿ ತೆಗೆದುಕೊಳ್ಳಬಾರದು ಎಂದು ಅನೇಕ ಸಂಶೋಧಕರು ವಾದಿಸಿದ್ದಾರೆ. ಈ ವಾದದಲ್ಲಿ ಎರಡು ಎಳೆಗಳಿವೆ. ಯಾಂತ್ರೀಕರಣವು ಸರ್ವವ್ಯಾಪಿಯಾಗಿರುವ ಕಾರಣದಿಂದಾಗಿ, ಕೆಲಸದ ದೈಹಿಕ ಶ್ರಮವು ಕಾಲಕ್ರಮೇಣ ಕ್ಷೀಣಿಸಿದೆ. ಹಾಗಾಗಿ, ಇಂದಿನ ದಿನಗಳಲ್ಲಿ ದುಡಿಯುವ ಜನರಿಗೆ ಮೊದಲಿನಷ್ಟು ಕ್ಯಾಲೊರಿಗಳ ಅಗತ್ಯವಿಲ್ಲ. ಅವರು ಆಹಾರಕ್ಕಾಗಿ ಮೊದಲಿಗಿಂತ ಕಡಿಮೆ ಖರ್ಚು ಮಾಡುತ್ತಾರೆ ಮತ್ತು ಇತರ ಉದ್ದೇಶಗಳಿಗಾಗಿ ಹೆಚ್ಚು ಹಣ ಖರ್ಚು ಮಾಡುತ್ತಾರೆ ಎಂಬುದಾಗಿ ವಾದದ ಒಂದು ಎಳೆ ಹೇಳುತ್ತದೆ. ಎರಡನೆಯ ಎಳೆಯ ವಾದವು, ಮೈಮುರಿಯುವ ಶ್ರಮದ ಇಳಿಕೆಯಾಗಿರುವ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಆದರೆ ಜನರು ಆಹಾರ ಧಾನ್ಯಗಳ ಮೇಲೆ ಮಾಡುವ ಖರ್ಚಿಗಿಂತಲೂ ಹೆಚ್ಚಾಗಿ, ಸಂಸ್ಕರಿಸಿದ ಮತ್ತು ರುಚಿ ರುಚಿಯಾದ ಆಹಾರದ ಮೇಲೆ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಮತ್ತು ಆರೋಗ್ಯ ರಕ್ಷಣೆಗಾಗಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಾರೆ ಎಂದು ಸರಳವಾಗಿ ಹೇಳುತ್ತದೆ.

ಈ ಎರಡೂ ಎಣಿಕೆಗಳ ಪ್ರಕಾರ, ತಲಾ ಆಹಾರಧಾನ್ಯಗಳ ಬಳಕೆಯಲ್ಲಿನ ಇಳಿಕೆಯು (ಉನ್ನತ ಮಟ್ಟದ ಜೀವನದ ಭಾಗವಾಗಿ ಆಹಾರ ಧಾನ್ಯಗಳ ಬಳಕೆಯನ್ನು ಇಚ್ಛಾನುಸಾರವಾಗಿ ಕಡಿಮೆ ಮಾಡಿಕೊಳ್ಳಲಾಗಿದೆ) ಜೀವನಮಟ್ಟ ಸುಧಾರಣೆಯಾಗುತ್ತಿರುವುದರ ಲಕ್ಷಣವೇ ವಿನಃ ಜೀವನ ಮಟ್ಟ ಹದಗೆಡುತ್ತಿರುವುದರ ಲಕ್ಷಣವಲ್ಲ. ಆದ್ದರಿಂದ, ಮೇಲ್ನೋಟದಲ್ಲಿ ಹಸಿವು ಹೆಚ್ಚುತ್ತಿರುವುದಾಗಿ ತೋರುತ್ತಿರುವ ಕಾರಣದ ಮೇಲೆ ಬಡತನದ ಹೆಚ್ಚಳದ ಬಗ್ಗೆ ತೀರ್ಮಾನಕ್ಕೆ ಬರುವುದು ತರವಲ್ಲ. ಬಡತನದ ವ್ಯಾಪ್ತಿ ಹೆಚ್ಚುತ್ತಿಲ್ಲ; ಅದು ಇಳಿಯುತ್ತಿದೆ ಎಂಬುದನ್ನೇ ಸರ್ಕಾರ ಹೇಳುತ್ತದೆ ಮತ್ತು ವಿಶ್ವ ಬ್ಯಾಂಕ್ ಸಹ ಹೇಳುತ್ತದೆ. (ಕೊರೊನಾ ಸಾಂಕ್ರಾಮಿಕದ ಸಮಯದಲ್ಲಿ ಬಡತನದ ಹೆಚ್ಚಳವಾಗಿತ್ತು ಎಂದು ವಿಶ್ವ ಬ್ಯಾಂಕ್ ಇತ್ತೀಚೆಗೆ ಹೇಳಿದೆ).


ವಿಷಯವನ್ನು ಮತ್ತೊಮ್ಮೆ ಹೇಳುವುದಾದರೆ, ನೇರ ಮತ್ತು ಪರೋಕ್ಷ (ಸಂಸ್ಕರಿಸಿದ ಆಹಾರಗಳು ಮತ್ತು ಪಶು ಆಹಾರಗಳು ಪರೋಕ್ಷ ಬಳಕೆಯಲ್ಲಿ ಸೇರಿವೆ) ಬಳಕೆ ಎರಡನ್ನೂ ಒಟ್ಟಿಗೆ ತೆಗೆದುಕೊಂಡಾಗ, ಭಾರತದಲ್ಲಿ ಆಹಾರ ಧಾನ್ಯಗಳ ತಲಾ ಬಳಕೆಯು ಇಳಿಕೆಯಾಗಿದೆ ಎಂಬ ಅಂಶದ ಬಗ್ಗೆ ವಿವಾದವಿಲ್ಲ. ತಲಾ ಕ್ಯಾಲೋರಿ ಸೇವನೆಯ ಇಳಿಕೆಯ ಬಗ್ಗೆಯೂ ವಿವಾದವಿಲ್ಲ. ಭಿನ್ನಾಭಿಪ್ರಾಯವೆಂದರೆ, ಇದು ಬೆಳೆಯುತ್ತಿರುವ ಬಡತನವನ್ನು ಸೂಚಿಸುತ್ತದೆಯೊ ಅಥವಾ ಬಡತನದ ಇಳಿಕೆಯ ಲಕ್ಷಣವೆನಿಸಿದ ಧಾನ್ಯಗಳಿಂದ ದೂರವಾದ ಬಳಕೆಯ ವೈವಿಧ್ಯತೆಯನ್ನು ಸೂಚಿಸುತ್ತದೆಯೊ ಎಂಬುದರ ಬಗ್ಗೆ. ಬಡತನದ ಹೆಚ್ಚಳವು ಹಸಿದವರ ಸಂಖ್ಯೆಯನ್ನು ಹೆಚ್ಚಿಸುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಸಮಸ್ಯೆ ಎಂದರೆ, ಆಹಾರ ಧಾನ್ಯಗಳ ಸೇವನೆಯ ಇಳಿಕೆಯ ಅಂಶವನ್ನು ಹೆಚ್ಚುತ್ತಿರುವ ಬಡತನದ ಪುರಾವೆಯಾಗಿ ತೆಗೆದುಕೊಳ್ಳಬಹುದೇ ಎಂಬುದು. ಜಾಗತಿಕ ಹಸಿವಿನ ಸೂಚ್ಯಂಕವು ಉಪಯುಕ್ತವಾಗುವುದು ಇಲ್ಲಿಯೇ.

ಆಹಾರ ಸೇವನೆಯ ಇಳಿಕೆಯೇ ನಿಜಕ್ಕೂ ಜೀವನ ಮಟ್ಟದ ಸುಧಾರಣೆಯ ಒಂದು ಲಕ್ಷಣವಾಗಿದ್ದರೆ, ಬೆಳವಣಿಗೆ ದರ ಉನ್ನತವಾಗಿ ತೋರುವ ಇನ್ನೂ ಅನೇಕ ದೇಶಗಳು ಭಾರತದೊಂದಿಗೆ ಜಾಗತಿಕ ಹಸಿವಿನ ಸೂಚ್ಯಂಕ ಕೋಷ್ಟಕದ ಕೆಳಭಾಗದಲ್ಲಿರುತ್ತಿದ್ದವು. ಆದರೆ, ಹಸಿವಿನ ಸೂಚ್ಯಂಕ ಪಟ್ಟಿಯಲ್ಲಿ 107ನೇ ಸ್ಥಾನದಲ್ಲಿರುವ ಭಾರತದ ಶ್ರೇಯಾಂಕದ ಹತ್ತಿರ ಹತ್ತಿರದ ಸ್ಥಾನಗಳಲ್ಲಿ ರುವಾಂಡಾ (102ನೇ ಸ್ಥಾನದಲ್ಲಿ), ನೈಜೀರಿಯಾ (103), ಇಥಿಯೋಪಿಯಾ (104), ರಿಪಬ್ಲಿಕ್ ಆಫ್ ಕಾಂಗೋ (105), ಸುಡಾನ್ (106), ಜಾಂಬಿಯಾ

ಪುಟ 14 ಕ್ಕೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ದಲಿತರ ಮೇಲೆ ನಿರಂತರವಾಗಿ ದೌರ್ಜನ್ಯ ಏಕೆ ಹೆಚ್ಚುತ್ತಿದೆ

ಪುಟ 4 ರಿಂದ

ಗಳ ಮೇಲಿನ ದೌರ್ಜನ್ಯದ 96.0% ಪ್ರಕರಣಗಳು ವಿಚಾರಣೆ ಬಾಕಿ ಉಳಿದಿವೆ. ಆದರೆ ಎಸ್.ಟಿ. ಗಳಿಗೆ ಶೇಕಡಾವಾರು 95.5% ರಷ್ಟಿದೆ.

ದಲಿತ ಮತ್ತು ಆದಿವಾಸಿ ಸಂತ್ರಸ್ತರಿಗೆ ತ್ವರಿತ ನ್ಯಾಯ ದೊರಕುವಲ್ಲಿ ಭರವಸೆ ಮೂಡಿಸಿದ ತಿದ್ದುಪಡಿಗಳು 2016 ರಲ್ಲಿ ಜಾರಿಗೆ ಬಂದ ನಂತರವೂ ತಿದ್ದುಪಡಿ ಮಾಡಲಾದ ಎಸ್.ಸಿ. ಮತ್ತು ಎಸ್.ಟಿ. ಗಳ (POA) ತಿದ್ದುಪಡಿ ಕಾಯಿದೆ 2015 ರ ಅನುಷ್ಠಾನವು ಸವಾಲಾಗಿಯೇ ಉಳಿದಿದೆ ಎಂದು NCPSA ನಂಬುತ್ತದೆ.

ತಿದ್ದುಪಡಿ ಮಾಡಲಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯಿದೆ 1989(2015) ರ ಹೊಸ ನಿಬಂದನೆಗಳನ್ನು ಜಾರಿಗೊಳಿಸಲು ಸರ್ಕಾರದ ಮೇಲೆ ಒತ್ತಡ ಹಾಕಿದ್ದರು.

ಪ್ರಬಲ ಜಾತಿಯ ಅಪರಾಧಿಗಳ ವಿರುದ್ಧ ತ್ವರಿತವಾಗಿ ಮತ್ತು ದೃಢವಾಗಿ ಕ್ರಮವನ್ನು ತೆಗೆದುಕೊಳ್ಳುವುದು ಮತ್ತು ದಲಿತರು ಮತ್ತು ಆದಿವಾಸಿಗಳ ಮಾನವಹಕ್ಕುಗಳು, ಪರಿಶಿಷ್ಟ ಜಾತಿಗಳು ಮತ್ತು ಪಂಗಡದ ಅಡಿಯಲ್ಲಿ ಮುಕ್ತ ಪಾರದರ್ಶಕ ತನಿಖೆಯನ್ನು ನಡೆಸುವುದು ಅಪರಾಧಿಗಳಿಗೆ ಸಹಾಯದ ಮತ್ತು ಕುಮ್ಮಕ್ಕು ನೀಡದ ಸರ್ಕಾರಿ ಮತ್ತು ಪೊಲೀಸ್ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು.

ತ್ವರಿತ ವಿಚಾರಣೆಗಾಗಿ ತಿದ್ದುಪಡಿ ಮಾಡಲಾದ ಕಾಯಿದೆಯಲ್ಲಿ ಕಡ್ಡಾಯವಾಗಿರುವ ವಿಶೇಷ ನ್ಯಾಯಲಯ ಸರ್ಕಾರ ಜಾರಿಗೊಳಿಸಬೇಕು ಎಂದು ಈಗಾಗಲೆ ದಲಿತ ಸಂಘಟನೆಗಳು ಒತ್ತಾಯಿಸಿದೆ. ರಾಜ್ಯದಲ್ಲಿ ದಲಿತ ಹಕ್ಕುಗಳ ಸಮಿತಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ವಿಶೇಷ ನ್ಯಾಯಾಲಯ ಜಾರಿ ಮಾಡಬೇಕೆಂದು ಒತ್ತಾಯಿಸಿದೆ.

ಎಸ್.ಸಿ. ಗಳ ಮೇಲಿನ ದೌರ್ಜನ್ಯದ ಒಟ್ಟು 52,159 ಪ್ರಕರಣಗಳ ಮತ್ತು ಎಸ್ಟಿಗಳ ಮೇಲಿನ 8825 ದೌರ್ಜನ್ಯ ಪ್ರಕರಣಗಳನ್ನು ಪೊಲೀಸರು ವಿಲೇವಾರಿ ಮಾಡಿದ್ದಾರೆ.

ಪರಿಶಿಷ್ಟ ಜಾತಿಗಳ ಮೇಲಿನ ದೌರ್ಜನ್ಯಗಳ ಚಾರ್ಜ್ ಶೀಟಿಂಗ್ ಶೇಕಡವಾರು 80.0% ಮತ್ತು ಪರಿಶಿಷ್ಟ ಪಂಗಡಗಳಿಗೆ 81.4% ನೊಂದಿಗೆ ಕೊನೆಗೊಂಡಿದೆ.

ಒಟ್ಟು 2,63,512 ಎಸ್ಸಿಗಳ ಮೇಲಿನ ದೌರ್ಜನ್ಯ ಪ್ರಕರಣಗಳು ಮತ್ತು 42,512 ಎಸ್ಸಿಗಳ ಮೇಲಿನ ದೌರ್ಜನ್ಯ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಿವೆ. ಈ ಪೈಕಿ 10,108 ಎಸ್.ಸಿ.ಗಳ ಮೇಲಿನ ದೌರ್ಜನ್ಯ ಪ್ರಕರಣಗಳ ವಿಚಾರಣೆ ಪೂರ್ಣಗೊಂಡಿದ್ದು 1947 ಎಸ್ಟಿಗಳಿಗೆ ಸಂಬಂಧಿಸಿದ ಪ್ರಕರಣಗಳು.

ಖುಲಾಸೆಗೊಂಡ ಪ್ರಕರಣಗಳು ಎಸ್.ಸಿ. 5628 ಮತ್ತು ಎಸ್ಟಿ 1399 ಪ್ರಕರಣಗಳು. 2015–49,946, 2016–47,369, 2017–50,328, 2018–49,321, 2019–53,531, 2020–58,563, 2021–60,045. ಬಿಜೆಪಿ ಸರ್ಕಾರ ಅಧಿಕಾರವಧಿಯಲ್ಲಿ ಪ್ರತಿ ವರ್ಷ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿವೆ. 2015 ರಲ್ಲಿ ಎಸ್‌ಸಿ/ಎಸ್‌ಟಿ (ದೌರ್ಜ್ಯನ್ಯ ತಡೆ) ಕಾಯಿದೆ ಬಲಪಡಿಸಲು ಹಲವು ನಿಬಂದನೆಗಳಾಗಿ ತಂದರು ಅವು ಜಾರಿಯಾಗುತ್ತಿಲ್ಲ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿ ವಿರೋಧಿ ಭಾವನೆಗಳು: ದಲಿತ ನೈಜಸ್ಥಿತಿ ತಿಳಿಸಲು ವಿಫಲವಾದ ಸರ್ಕಾರಗಳು

ಭಾರತದ ವರ್ಣ ವ್ಯವಸ್ಥೆಯ ಕ್ರೂರ ನೀತಿಗಳಿಂದಾಗಿ ಅಸ್ಪೃಶ್ಯತೆ, ಜಾತಿ ತಾರತಮ್ಯತೆಯಿಂದ ಮನುಷ್ಯ ಮನುಷ್ಯರ ನಡುವೆ ಅಸಮಾನತೆ ಉಂಟಾಯಿತು ಎಂಬುದು ಸತ್ಯಸಂಗತಿ. ಈ ಕಾರಣದಿಂದ ಜಾತಿ ಬೇಧ ವ್ಯವಸ್ಥೆಯಿಂದ ದಲಿತರನ್ನು ಊರ ಹೊರಕ್ಕೆ ತಳ್ಳಲ್ಪಟರು, ಭೂಮಿ, ವಿದ್ಯೆ ಸಿಗದಂತೆ ಕಟ್ಟುವಾಗಿ ಪ್ರಾಣಿಗಳಿಗಿಂತ ಹೀನಾಯ ವ್ಯವಸ್ಥೆ ಉಂಟಾಯಿತು. ಇದರಿಂದ ಶತಮಾನಗಳ ಕಾಲದಿಂದ ಇಂದಿನವರೆಗೆ ಜಾತಿ ಪದ್ಧತಿ ನಡೆದುಕೊಂಡು ಬಂದಿದೆ.

ಸ್ವಾತಂತ್ರ್ಯಬಂದ ಭಾರತದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ರವರ ಅಸಮಾನತೆ ವಿರುದ್ಧ ಹೋರಾಟದ ಅನುಭವದಿಂದ ಮೂಡಿ ಬಂದ ಸಂವಿಧಾನದಲ್ಲಿ ಮೀಸಲಾತಿ ಸೌಲಭ್ಯವನ್ನು ಒದಗಿಸಿದರಿಂದ ಇದರಿಂದ ದಲಿತರು ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು.

1947 ರಲ್ಲಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿ ಪರಿಶಿಷ್ಟ ವರ್ಗಕ್ಕೆ ಶೇ. 12.5 ರಷ್ಟು ಮೀಸಲಾತಿ ನೀಡಿತು. ಕರ್ನಾಟಕ ರಾಜ್ಯ ಸರ್ಕಾರ 10–08–1950 ರಲ್ಲಿ ಅಂದಿನ ಮೈಸೂರು ರಾಜ್ಯದಲ್ಲಿ ಪ.ಜಾ. ಗಳಿಗೆ ಶೇ. 18 ಮೀಸಲಾತಿ ಘೋಷಿಸಿತು. 29–10–1956 ರಲ್ಲಿ ಪ್ರಜಾ. ಶೇ 15% ಮತ್ತು ಶೇ. 3 ರಷ್ಟು ಮೀಸಲಾತಿಯನ್ನು ಪ್ರತ್ಯೇಕವಾಗಿ ನೀಡಲಾಯಿತ್ತು. 4–2–1958 ರಲ್ಲಿ ಹಿಂದುಳಿದ ವರ್ಗದವರಿಗೂ ಶೇ. 57 ರಷ್ಟು ಮೀಸಲಾತಿ ಒದಗಿಸಿತು.

ಕರ್ನಾಟಕ ಸರ್ಕಾರವು 103 ನೇ ತಿದ್ದುಪಡಿ ಮಾಡಿ ಸಾಮಾನ್ಯ ವರ್ಗದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೂ ಶೇ. 10 ರಷ್ಟು ಮೀಸಲಾತಿ ನೀಡಿತು. ನ್ಯಾಯಮೂರ್ತಿ ಹೆಚ್.ಎಸ್. ನಾಗಮೋಹನ್‌ದಾಸ್‌ರವರ ಮೀಸಲಾತಿ ಭ್ರಮೆ ಮತ್ತು ವಾಸ್ತವದ ಪುಸ್ತಕದ ಮಾಹಿತಿಯಂತೆ 2018 ರಲ್ಲಿ ಸಂಸತ್ತಿನಲ್ಲಿ ನೀಡಿರುವ ಹೇಳಿಕೆಯಂತೆ. ಕೇಂದ್ರದಲ್ಲಿ 37%, ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ 2.59 ಲಕ್ಷ. ಈ ಹುದ್ದೆಗಳು ಭರ್ತಿಯಾಗಿರುವುದಿಲ್ಲ.

ಇಷ್ಟೆಲ್ಲಾ ಅಂಕಿ ಅಂಶಗಳಿದ್ದರು ಮೀಸಲಾತಿ ಜಾರಿ ಸತ್ಯಾಂಶವನ್ನು ದೇಶದ ಜನರ ಅರ್ಥ ಮಾಡದೆ ಹೊಂದಿದು ವಿಪರ್ಯಾಸವೇ ಸರಿ.

ಡಾ॥ ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಮೀಸಲಾತಿ ಸೌಲಭ್ಯಗಳನ್ನು 10 ವರ್ಷಗಳಲ್ಲಿ ಪೂರ್ಣಗೊಳಿಸಿ ದೇಶದ ಜನರಲ್ಲಿ ಸಮತೋಲನ ಬರಬೇಕೆಂದು ತಿಳಿಸಿದ್ದರು.

ಆದರೆ ಆಳುವ ಸರ್ಕಾರಗಳು ಬಂಡವಾಳಶಾಹಿ ಭೂಮಾಲಕರ ಪರ ನೀತಿಗಳನ್ನು ಅನುಸರಿಸಿದ ಫಲವಾಗಿ ಇದು ಸಾರ್ಥಕತೆ ಪಡೆಯಲಿಲ್ಲ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಉನ್ನತ ಶಿಕ್ಷಣದಲ್ಲಿ ಇನ್ನೂ ಕೂಡ ಮೀಸಲಾತಿ ಪಡೆಯಲಿಲ್ಲ ಶಕ್ತರಾಗಿಲ್ಲ. ಧೀರ್ಘ ಕಾಲಮೀಸಲಾತಿ ದಲಿತರಿಗೆ ಪೂರ್ಣ ಪ್ರಮಾಣದಲ್ಲಿ ಧಕ್ಕಿರುವುದಿಲ್ಲ ದೇಶದ ಒಟ್ಟು ದಲಿತರಲ್ಲಿ ಶೇ. 82 ರಷ್ಟು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಕೃಷಿ ಕೂಲಿಗಾರರಾಗಿದ್ದಾರೆ. ಅತಿ ಕಡಿಮೆ ಭೂಮಿ 2 ಎಕರೆ ಗಿಂತ ಕಡಿಮೆ ತುಂಡು ಭೂಮಿ ಇರುವವರ ಸಂಖ್ಯೆ ಅಧಿಕವಾಗಿದೆ.

ಜಾತಿ ತಾರತಮ್ಯ–ಅಸ್ಪೃಶ್ಯತೆ ಆಳವಾಗಿ ಬೇರೂರಿದ್ದು ದಲಿತರು ಆತಂಕದ ಬದುಕು ನಡೆಸುತ್ತಿದ್ದಾರೆ.

ದೇಶದಲ್ಲಿ ಹಿಂದುತ್ವದ ವಿಷಮನಸ್ಸುಗಳಿಗೆ ಈ ಪರಿಸ್ಥಿತಿ ಅರ್ಥವಾಗದ ವಿಷಯವಲ್ಲ. ಹಿಂದೂ ಧಾರ್ಮಿಕ ದೇಶವನ್ನು ಮಾಡಬೇಕೆನ್ನುವ ಅವರ ಚಪಲತಕ್ಕೆ ದೇಶದ ದಲಿತರು ಬಲಿಯಾಗುತ್ತಿದ್ದಾರೆ. ಮನುವಾದಿಗಳು ಸನಾತನವಾದಿಗೂ ಕೋಮುದಳ್ಳುರಿಗೆ ತುಪ್ಪಸುರಿಯುತ್ತಿರುವ ಪರಿಸ್ಥಿತಿ ಭಾರತದ್ದು.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ದೌರ್ಜನ್ಯಗಳಿಗೆ ಕುಮ್ಮಕ್ಕು ನೀಡುತ್ತಿದೆ

ರಾಜ್ಯದಲ್ಲಿ ಹಿಂಬಾಗಿಲಿಂದ ಅಧಿಕಾರಕ್ಕೆ ಬಂದ ಯಡೂರಪ್ಪನವರ ಬಿಜೆಪಿ ಸರ್ಕಾರ ಅತಂತ್ರದ ಸರ್ಕಾರವಾಗಿದ್ದಾಗಲೂ–ಕುದುರೆ ವ್ಯಾಪಾರ ನಡೆಸಿ–ಹಣದಿಂದ ಶಾಸಕರನ್ನು ಖರೀದಿ ಮಾಡಿ ಅಧಿಕಾರಕ್ಕೆ ಬಂದಿತ್ತು. ಇವರ ಅಧಿಕಾರದ ಅಮಲಿನಿಂದ ಜಾತಿ ವೈಷಮ್ಯ, ಜಾತಿ ದೌರ್ಜನ್ಯಕ್ಕೆ ಕುಮಕ್ಕು ಸಿಕ್ಕಿತು. ಈ ಅವಧಿಯಲ್ಲಿ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ದಲಿತ ಮರಣ ಹೋಮ ನಡೆದಿದೆ. ಅತ್ಯಾಚಾರ, ಸಾಮಾಜಿಕ ಬಹಿಷ್ಕಾರ, ನಿತ್ಯದ ಸುದ್ದಿಗಳಾಗಿವೆ.

ರಾಜ್ಯದಲ್ಲಿ ವಿಜಯಪುರ ಜಿಲ್ಲೆಯ ದಲಿತ ವಿದ್ಯಾರ್ಥಿನಿ ಧಾನಮ್ಮ ಮೇಲೆ ಸಾಮೂಹಿಕ ಅತ್ಯಾಚಾರ, ಇದೇ ಜಿಲ್ಲೆಯಲ್ಲಿ ಸಿಂದಗಿಯಲ್ಲಿ ಅನಿಲ್ ಇಂಗಳಗಿ ಎಂಬ ದಲಿತ ತನ್ನ ಊರಿನ ಜಗಲಿಕಟ್ಟೆ ಮೇಲೆ ಸವರ್ಣಿಯ ಪಕ್ಕದಲ್ಲಿ ಕುಳಿತ ಕಾರಣಕ್ಕೆ ಕೊಲೆ, ವಿಜಯಪುರ ನಗರದಲ್ಲಿ ಅಯ್ಯಪ್ಪನ ಪೂಜೆಗೆ ಇಟ್ಟಿದ್ದ ಪ್ರಸಾದವನ್ನು ಮುಟ್ಟಿದನೆಂದು ಕೊಲೆ ಮಾಡಿದರು. ಸಿಂಧಗಿಯಲ್ಲಿ ಮೇಲ್ ಜಾತಿ ಹುಡುಗಿ ಪ್ರೀತಿಸುತ್ತಿದ ದಲಿತ ಯುವಕನನ್ನು ಹಳ್ಳಕ್ಕೆ ಹಾಕಿ ಹುಡುಗ ತಾಯಿ ಎದುರಿನಲ್ಲಿ ಚಚ್ಚಿ ಸಾಯಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಮೂಡುಗೆರೆ ತಾಲೂಕಿನ ಪೊಲೀಸ್ ಅಧಿಕಾರಿ ದಲಿತ ಯುವಕನಿಗೆ ಹುಚ್ಚೆ ಕುಡಿಸಿ ದೌರ್ಜನ್ಯ ನಡೆಸಿದ ಘಟನೆ ನಡೆಯಿತು. ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕ್ ಮಲ್ಲೆಕಾವು ಗ್ರಾಮದಲ್ಲಿ ದೊಡಮ್ಮ ದೇವಿಗೆ ದಲಿತ ಜಗದೀಶ ಕುಟುಂಬ ಪೂಜೆ ಮಾಡಲು ದೇವಸ್ಥಾನಕ್ಕೆ ಪ್ರವೇಶ ಮಾಡಿದಕ್ಕೆ ಊರಿನ ಮೇಲ್ ಜಾತೀಯವರು 25 ಸಾವಿರ ದಂಡ. ದೇವಸ್ಥಾನಕ್ಕೆ ಸುಣ್ಣಬಣ್ಣ ಹೊಡೆಸಕೊಡಬೇಕೆಂದು ಊರಿನಿಂದ ಸಾಮಾಜಿಕ ಬಹಿಷ್ಕಾರ ಹಾಕಿದರು. ಇದೇ ಜಿಲ್ಲೆಯ ಮಧುಗಿರಿ ತಾಲೂಕಿನ ತಿಪ್ಪಾಪುರಲ್ಲಿ ದಲಿತ ಹನುಮಂತಪ್ಪ ತನ್ನ ಜಮೀನ್‌ನಲ್ಲಿ ಬೋರ್‌ವೆಲ್ ಹಾಕಿಸಿದಾಗ ಹೆಚ್ಚು ನೀರು ಬಂತು. ಅದನ್ನು ಸಹಿಸದ ಪಕ್ಕದ ಜಮೀನಿನ ಮೇಲ್ ಜಾತಿಯವರು ಹನುಮಂತಪ್ಪ ನನ್ನು ಅಡ್ಡಗಟ್ಟಿ ಕೈ ಕಾಲು ಮುರಿದು ಹಾಕಿದರು. ಗುಬ್ಬಿ ತಾಲೂಕ್‌ನ ಪೆದ್ದನಹಳ್ಳಿಯಲ್ಲಿ ಇಬ್ಬರು ದಲಿತ ಯುವಕರನ್ನು ಅಮಾನುಷವಾಗಿ ಕೊಚ್ಚಿ ಕೆರೆಗೆ ಬಿಸಾಡಿದರು. ಇದೇ ತಾಲ್ಲೂಕ್‌ನ ನಿಟ್ಟೂರು ಗ್ರಾಮದಲ್ಲಿ ಮುಳ್ಳುಕಟ್ಟಮ್ಮ ದೇವಸ್ಥಾನದಲ್ಲಿ ದಲಿತರಿಗೆ ಪೂಜೆ ಮಾಡಲು ನಿರಾಕರಣೆ ಮಾಡಿ ದಲಿತ ಕುಟುಂಬಕ್ಕೆ ಅವಮಾನ ಮಾಡಿದ ಘಟನೆ ನಡೆಯಿತು.

ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಶನಿದೇವರ ದೇವಸ್ಥಾನಕ್ಕೆ ಬಂದ ದಲಿತ ಯುವಕ ಪ್ರತಾಪನನ್ನು ಬೆತ್ತಲೆಗೊಳಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೆರವಣಿಗೆ ಮಾಡಿದ ವಿಚಾರ ರಾಜ್ಯದ ಗಮನಕ್ಕೆ ಬಂದಿದೆ.

ಮಂಡ್ಯದ ಕೆ.ಆರ್.ಪೇಟೆ ಹರಿಹರಪುರದಲ್ಲಿ ದಲಿತರು ಊರಿನ ಜಾತ್ರೆಯಲ್ಲಿ ದೇವಸ್ಥಾನ ಪ್ರವೇಶ ಮಾಡಿದ್ದರಿಂದ ಮೇಲ್‌ಜಾತಿಯ ಸವರ್ಣಿಯರು ದಲಿತರ ಕೇರಿಗೆ ನುಗ್ಗಿ ದಾಂದಲೆ ನಡೆಸಿದ್ದರಿಂದ ದಲಿತ ಯುವಕ ತಲೆಗೆ ಏಟು ಬಿದ್ದು ಆಸ್ಪತ್ರೆ ಸೇರಿದರು.

ಉತ್ತರ ಕರ್ನಾಟಕದ ಜೇವರ್ಗಿ ಜಿಲ್ಲೆಯ ಚನ್ನೂರಿನಲ್ಲಿರುವ ದಲಿತರ ಬಾವಿಗೆ ವಿಷಹಾಕಿ ದಲಿತರ ಮಾರಣ ಹೋಮ ನಡೆಸುವ ಹುನ್ನಾರ ಬೆಳಕಿಗೆ ಬಂದಿತು.

ಬಳ್ಳಾರಿ–ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕ್ ಗೋನಾಳ ಗ್ರಾಮದಲ್ಲಿ ದಲಿತ ಯುವಕ ನನ್ನ ಹಾಡು ಹಗಲೇ ಕೈ ಕತ್ತರಿಸಿ ಅಮಾನುಷವಾದ ಘಟನೆ ನಡೆದುಹೋಯಿತು.

ಬೆಂಗಳೂರು ನಗರದ ಅಂಚಿನಲ್ಲಿರುವ ಬೆಂ. ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ಕಾಚನ ಹಳ್ಳಿಯಾಗೆ ದಲಿತರು ದೇವರ ಜಾತ್ರೆಯಲ್ಲಿ ತಮಟೆ ಬಾರಿಸಲು ನಿರಕರಿಸಿದ ಕಾರಣಕ್ಕೆ ದಲಿತರ ಮೇಲೆ ದೌರ್ಜನ್ಯ ನಡೆಯಿತು.

ವಿಜಯನಗರ ಹೊಸಪೇಟೆ ಕನ್ನಡ ವಿಶ್ವವಿದ್ಯಾಲಯದಲ್ಲಿ ದಲಿತ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ವಿದ್ಯಾರ್ಥಿ ವೇತನ ನೀಡದೆ ಕಿರುಕುಳ ನೀಡಿ ಕುಲಪತಿಗಳೇ ದೌರ್ಜನ್ಯ ನಡೆಸಿದ ಘಟನೆಗಳು.

ರಾಯಚೂರು ಜಿಲ್ಲೆಯಲ್ಲಿ ನ್ಯಾಯಲಯದಲ್ಲಿ ಜನವರಿ 26 – ಗಣರಾಜೋತ್ಸವ ಕಾರ್ಯಕ್ರಮದಲ್ಲಿ ಅಂಬೇಡ್ಕರ ಭಾವಚಿತ್ರವನ್ನು ನ್ಯಾಯದೀಶ ಮಲ್ಲಿಯಪ್ಪಗೌಡರವರು ತೆಗೆಸಿ ಅಂಬೇಡ್ಕರ್ ರವರಿಗೆ ಅವಮಾನ ಮಾಡಿದ ಘಟನೆ ರಾಜ್ಯದಲ್ಲಿ ದಲಿತರನ್ನು ರೊಚ್ಚಿಗೆಬ್ಬಿಸಿ ಬೃಹತ್ ರ‍್ಯಾಲಿಗೆ ಕಾರಣವಾಯಿತು. ■

ಹೆಚ್ಚುತ್ತಿರುವ ಹಸಿವು ಮತ್ತು ಬೆಳೆಯುತ್ತಿರುವ ಬಡತನ

ಪುಟ 13 ರಿಂದ

(108), ಅಫ್ಘಾನಿಸ್ತಾನ (109) ಮತ್ತು ತಿಮೋರ್–ಲೆಸ್ಟೆ (110) ದೇಶಗಳಿವೆ. ಸಾಮಾನ್ಯವಾಗಿ ಬಡ ದೇಶಗಳೆಂದೇ ಪರಿಗಣಿಸಲ್ಪಟ್ಟ ಈ ದೇಶಗಳು ಕೋಷ್ಟಕದ ಕೆಳಭಾಗದಲ್ಲಿರುವುದು ಆಶ್ಚರ್ಯವಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಆರ್ಥಿಕ ಅಭಿವೃದ್ಧಿಯನ್ನು ನಾವು ಹೋಲಿಕೆ ಮಾಡಬಯಸುವ ಚೀನಾದಂತಹ ದೇಶಗಳು ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿವೆ. ಸೂಚ್ಯಂಕ ಪಟ್ಟಿಯಲ್ಲಿ ಚೀನಾ ಅಗ್ರ 17 ದೇಶಗಳ ಗುಂಪಿನಲ್ಲಿದೆ. ಈ ಹದಿನೇಳೂ ದೇಶಗಳು ಪ್ರತ್ಯೇಕ ಶ್ರೇಯಾಂಕ ಹೊಂದಿರದೆ, ಸಾಮೂಹಿಕವಾಗಿ ಒಂದೇ ಶ್ರೇಯಾಂಕವನ್ನು ಹೊಂದಿವೆ. ಐದಕ್ಕಿಂತ ಕಡಿಮೆ ಅಂಕ ಗಳಿಸಿದ ಚೀನಾ, 29.1 ಅಂಕಗಳನ್ನು ಗಳಿಸಿದ ಭಾರತಕ್ಕಿಂತ ಬಹಳ ದೂರದಲ್ಲಿದೆ.

'ಅಭಿರುಚಿ'ಯ ಬದಲಾವಣೆ ಕಾರಣವಲ್ಲ

ಉನ್ನತ ಬೆಳವಣಿಗೆಯ ದೇಶಗಳು ಎಂದು ಹೇಳಲಾಗುವ ಒಂದೇ ಒಂದು ದೇಶವೂ ಸಹ ಸೂಚ್ಯಂಕ ಪಟ್ಟಿಯಲ್ಲಿ ಭಾರತ ಪಡೆದ ಕೆಳಗಿನ ಸ್ಥಾನದ ಹತ್ತಿರದಲ್ಲಿಲ್ಲದ ಅಂಶವು, ಅಭಿರುಚಿಯ ಬದಲಾವಣೆಯ (ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಆಸಕ್ತಿ) ಅಂಶದ ಮೂಲಕ ಅಥವಾ ಮೈಮುರಿಯುವ ಕೆಲಸಗಳ ಇಳಿಕೆಯ (ಯಾಂತ್ರೀಕರಣದ ಮೂಲಕ) ಅಂಶದ ಮೂಲಕ ಧಾನ್ಯ ಸೇವನೆಯ ಇಳಿಕೆಯನ್ನು ಸಮರ್ಥಿಸುವ ವಾದಗಳ ವಿಚಾರ ಶೂನ್ಯತೆಯನ್ನು ತೋರಿಸುತ್ತದೆ. ಯಾಂತ್ರೀಕರಣದಿಂದಾಗಿ ಮೈಮುರಿಯುವ ಕೆಲಸಗಳ ಇಳಿಕೆ ಅಥವಾ ಮಕ್ಕಳ ಶಿಕ್ಷಣದ ಬಯಕೆ, ಇವೇನೂ ಭಾರತದ ಜನರಿಗೆ ಮಾತ್ರ ನಿರ್ದಿಷ್ಟವಾದ ಗುಣಲಕ್ಷಣಗಳಲ್ಲ. ಅವು ಸಾರ್ವತ್ರಿಕ ವಿದ್ಯಮಾನಗಳು. ಆದ್ದರಿಂದ, ಉನ್ನತ ಬೆಳವಣಿಗೆಯ ದೇಶಗಳ ಪೈಕಿ ಭಾರತ ಮಾತ್ರ ಸೂಚ್ಯಂಕ ಪಟ್ಟಿಯಲ್ಲಿ ತೀರಾ ಕೆಳಮಟ್ಟದ ಸ್ಥಾನ ಪಡೆದಿದೆ, ಏಕೆ?

ಮಕ್ಕಳ ಶಿಕ್ಷಣ ಮತ್ತು ಸರಿಯಾದ ಆರೋಗ್ಯ ರಕ್ಷಣೆಯ ಬಯಕೆ, ಇವು ಎಲ್ಲ ದೇಶದ ಜನರಿಗೂ ಸಾಮಾನ್ಯವಾಗಿರುವ ಅಂಶಗಳೇ. ಈ ಸೇವೆಗಳು ಭಾರತದಲ್ಲಿ ದುಬಾರಿಯಾಗಿದ್ದರೆ, ಚೀನಾದಲ್ಲಿ ಅವು ಅಗ್ಗವಾಗಿರಬಹುದು ಎಂದು ವಾದಿಸಬಹುದು. ಈ ಕಾರಣದಿಂದಾಗಿ, ಭಾರತದಲ್ಲಿ ತಮ್ಮ ಮಕ್ಕಳನ್ನು ದುಬಾರಿ ಶುಲ್ಕದ ಶಾಲೆಗಳಿಗೆ ಸೇರಿಸುವ ಪೋಷಕರು ತಮ್ಮ ಆಹಾರ ಸೇವನೆಯನ್ನು ಕಡಿತಗೊಳಿಸಬೇಕಾಗಬಹುದು. ಆದರೆ ಚೀನಾದಲ್ಲಿ ಶಾಲಾ ಶಿಕ್ಷಣದ ಖರ್ಚುಗಳು ಕಡಿಮೆ ಇರುವುದರಿಂದ, ಮಕ್ಕಳ ಶಿಕ್ಷಣಕ್ಕಾಗಿ ಆಹಾರ ಸೇವನೆಯನ್ನು ಅವರು ಕಡಿತಗೊಳಿಸಬೇಕಾಗಿಲ್ಲ.

ಈ ಬಗ್ಗೆ ನಮ್ಮ ಅಭಿಪ್ರಾಯವೂ ಸಹ ಇದೇ ಆಗಿದೆ ಮತ್ತು ಅದು "ಅಭಿರುಚಿಯ ಬದಲಾವಣೆ"ಯೊಂದಿಗೆ ಸಂಬಂಧ ಹೊಂದಿಲ್ಲ. ಎಲ್ಲೆಡೆಯೂ, ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಉತ್ಸುಕರಾಗಿರುತ್ತಾರೆ. ಆದರೆ ಒಂದು ನಿರ್ದಿಷ್ಟ ದೇಶದಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಆಹಾರವನ್ನು ತ್ಯಜಿಸಬೇಕಾದ ಅಗತ್ಯವಿದ್ದರೆ, ಆ ರೀತಿಯ ತ್ಯಾಗವು ಬಡತನ ಹೆಚ್ಚಳದ ಲಕ್ಷಣವಾಗಿರುತ್ತದೆ. ಇದು ಏನನ್ನು ಸೂಚಿಸುತ್ತದೆ ಎಂದರೆ, ಜನರು ಬಳಸುವ ಸರಕುಗಳ ಬುಟ್ಟಿಯಲ್ಲಿ ಒಂದು ಸರಕಿನ ಬೆಲೆಯಲ್ಲಿ ಹೆಚ್ಚಳವಾದರೂ ಅದು ಜೀವನ ವೆಚ್ಚದ ಹೆಚ್ಚಳವನ್ನು ಸೂಚಿಸುತ್ತದೆ. ಜೀವನ ವೆಚ್ಚದಲ್ಲಾಗುವ ಹೆಚ್ಚಳಗಳಿಗೆ ಅನುಗುಣವಾಗಿ ಹಣ ಆದಾಯದ ಹೆಚ್ಚಳ ಇರುವುದಿಲ್ಲ ಮತ್ತು ಅದು ಆಹಾರ ಧಾನ್ಯಗಳ ಬಳಕೆಯ ಇಳಿಕೆಗೆ ಕಾರಣವಾ➚

ರಿಷಿ ಸುನಕ್ ಬಳಿ ಯು.ಕೆ ಬಿಕ್ಕಟ್ಟು ಪರಿಹಾರದ ಮಂತ್ರದಂಡ ಇದೆಯಾ?

ಪುಟ 16 ರಿಂದ

ಬಜೆಟಿನಲ್ಲಿ ಇರಲಿಲ್ಲ. ಈಗಾಗಲೇ ತೈಲ ಕೊರತೆ ಮತ್ತು ಬೆಲೆ ಏರಿಕೆ, ಇದರಿಂದಾದ ಅಭೂತಪೂರ್ವ ಭಾರೀ (ಶೇ.10) ಹಣದುಬ್ಬರ, ಬಡ–ಮಧ್ಯಮ ವರ್ಗದವರ ಜೀವನ ವೆಚ್ಚ ದುಬಾರಿಗೊಳಿಸಿದ ಹಲವು ಕುಟುಂಬಗಳನ್ನು ಬಡತನಕ್ಕೆ ತಳ್ಳಿದ ಸ್ಥಿತಿಯಲ್ಲಿ ಟ್ರಸ್– ಕ್ವಾರ್ಟೆಂಗ್ ಮಿನಿ ಬಜೆಟ್ ಯು.ಕೆ ಆರ್ಥಿಕವನ್ನು ತೀವ್ರ ಬಿಕ್ಕಟ್ಟಿಗೆ ತಳ್ಳಿತು. ಶ್ರೀಮಂತರಿಗೆ ಕಾರ್ಪೊರೆಟ್ ಗಳಿಗೆ ತೆರಿಗೆ ಕಡಿತದಿಂದ ಶೇರು ಮಾರುಕಟ್ಟೆ ‘ಖುಶ್’ ಆಗಿ ಏರುತ್ತದೆ ಎಂಬ ಟ್ರಸ್ ನಿರೀಕ್ಷೆ ತಲೆಕೆಳಗಾಗಿಸಿ ಹಣಕಾಸು ಮಾರುಕಟ್ಟೆ ಅಲ್ಲೋಲ ಕಲ್ಲೋಲವಾಯಿತು. ಪೌಂಡ್ ಬೆಲೆ ಮಾರ್ಚ್ ನಲ್ಲಿದ್ದ 1.33 ಡಾಲರಿನಿಂದ 1.03 ಡಾಲರಿಗೆ (ಈ ವರೆಗಿನ ಅತ್ಯಂತ ಕೆಳಮಟ್ಟ) ಕುಸಿಯಿತು. ಮಾರುಕಟ್ಟೆ ಅಲ್ಲೋಲ ಕಲ್ಲೋಲದಿಂದ ಪೆನ್ಶನ್ ನಿಧಿ ಕರಗಿ ಹೋಗುವ ಅಪಾಯ ತಡೆಯಲು ಬ್ಯಾಂಕ್ ಆಫ್ ಇಂಗ್ಲೆಂಡ್ 65 ಶತಕೋಟಿ ಡಾಲರ್ ಖರ್ಚು ಮಾಡಬೇಕಾಯಿತು. ದ ’ ೀ ಶಿ ೀ ೦ ು ’ ು ವ ಾ ಗ ಿ ೦ ು ’ ು ೂ , ಅಂತರ್ರಾಷ್ಟ್ರೀಯವಾಗಿಯೂ ಈ ಬೇಜವಾಬ್ದಾರ ಕ್ರಮಕ್ಕೆ ತೀವ್ರ ಟೀಕೆಗಳು ಕೇಳಿ ಬಂದವು. ಸಾಮಾನ್ಯವಾಗಿ ಬಡ ಮೂರನೆಯ ಜಗತ್ತಿನ ದೇಶಗಳ ಆರ್ಥಿಕ ನೀತಿಗಳ ಕುರಿತು ಉಪದೇಶ ಮಾಡುವ ಐ.ಎಂ.ಎಫ್ ಈ ಕ್ರಮದ ವಿರುದ್ಧ ಹೇಳಿಕೆ ನೀಡಿತು. ಮೊದ ಮೊದಲು ಟೀಕೆಗಳನ್ನು ಲೆಕ್ಕಿಸದ ಪ್ರಧಾನಿ ಟ್ರಸ್ ಹಣಕಾಸು ಮಂತ್ರಿಯನ್ನು ಬಲಿಕೊಟ್ಟರು. ಕೊನೆಗೆ ಸಾರ್ವತ್ರಿಕ ಆಕ್ರೋಶಕ್ಕೆ ಮಣಿದು ರಾಜೀನಾಮೆ ಕೊಟ್ಟರು.


ಮತ್ತೆ ಪ್ರಧಾನಿ ಪಟ್ಟಕ್ಕೆ ಪೈಪೋಟಿ ಆರಂಭವಾಯಿತು. ರಿಷಿ ಸುನಕ್, ಪೆನ್ನಿ ಮೊಡೌರ್ಂಟ್ ಕಣಕ್ಕೆ ಇಳಿದರು. ಬೊರಿಸ್ ಜಾನ್ಸನ್ ಸಹ ಕಣದಲ್ಲಿ ಇಳಿಯುವವರಿದ್ದರು. ಆದರೆ, ಈಗಾಗಲೇ ಟೋರಿ ಪಕ್ಷ ಒಡೆದ ಮನೆಯಾಗಿರುವ ಕುರಿತು ಆತಂಕಗೊಂಡ ಟೋರಿ ಪಾರ್ಲಿಮೆಂಟ್ ಸದಸ್ಯರ ಮತ್ತು ಸಾರ್ವಜನಿಕ ಪ್ರತಿಕ್ರಿಯೆ ಕಂಡು ಪೆನ್ನಿ ಮೊಡೌರ್ಂಟ್ ಮತ್ತು ಬೊರಿಸ್ ಜಾನ್ಸನ್ ಕಣದಿಂದ ಹಿಂದೆ ಸರಿದರು. ರಿಷಿ ಸುನಕ್ ಪ್ರಧಾನಿಯಾಗಿ ಆಯ್ಕೆಯಾದರು.

ಯು.ಕೆ ಆರ್ಥಿಕ ಬಿಕ್ಕಟ್ಟಿಗೆ ಟ್ರಸ್ ದುಸ್ಸಾಹಸ ಮಾತ್ರ ಕಾರಣವೇ?

ಈಗಿನ ಯುಕೆ ಆರ್ಥಿಕ ಬಿಕ್ಕಟ್ಟಿಗೆ ಟ್ರಸ್ ದುಸ್ಸಾಹಸ ಮಾತ್ರ ಕಾರಣವೇ? ಕೆಟ್ಟದಾಗಿದ್ದ ಆರ್ಥಿಕ ಪರಿಸ್ಥಿತಿಯನ್ನು ತಮ್ಮ ತಪ್ಪು ನೀತಿಗಳಿಂದ ಪ್ರಪಾತಕ್ಕೆ ತಳ್ಳಿದರು ಎಂಬುದು ನಿಜ. ಆದರೆ ಯು.ಕೆ ಆರ್ಥಿಕ ಬೆಳವಣಿಗೆ 1970ರ ದಶಕದಿಂದಲೇ ಮಂದವಾಗುತ್ತಾ ಬಂದಿದೆ. ಥ್ಯಾಚರ್ ಅವರ ಬಲಪಂಥಿಯ ನೀತಿಗಳು, 2008ರ ಆರ್ಥಿಕ ಮಹಾಕುಸಿತ, ಕಳೆದ 12 ವರ್ಷಗಳ ಟೋರಿ ಆಳ್ವಿಕೆಯ ಮಿತವ್ಯಯದ ಉಗ್ರ ಬಲಪಂಥೀಯ ನೀತಿಗಳು, 2016ರ ಬ್ರೆಕ್ಸಿಟ್, ಕೊವಿದ್ ಪರಿಣಾಮಗಳು, ಈಗ ಉಕ್ರೇನ್ ಯುದ್ಧ ಮತ್ತು ರಶ್ಯಾದ ಮೇಲೆ ಹೇರಲಾದ ಆರ್ಥಿಕ ದಿಗ್ಬಂಧನಗಳ ಒಟ್ಟು ಫಲವೇ ಇಂದಿನ ಬಿಕ್ಕಟ್ಟು ಎನ್ನುತ್ತಾರೆ ಆರ್ಥಿಕ ತಜ್ಞರು.

ಯು.ಕೆ ಜಿಡಿಪಿ ಬೆಳವಣಿಗೆ (ನಿಜ ಬೆಲೆಗಳಲ್ಲಿ) 1945–73 ಅವಧಿಯಲ್ಲಿ ಶೇ.2.8 ಇತ್ತು. 1974 ಮತ್ತು 2008 ಮಧ್ಯೆ ಯು,ಕೆ ಯುರೋಪಿನ ಆರ್ಥಿಕ ಸಮುದಾಯ ಮತ್ತು ಆ ಮೇಲೆ ಯುರೋ ಕೂಟದ ಸದಸ್ಯ ಆಗಿದ್ದಾಗ ಶೇ. 2.3ಕ್ಕೆ ಇಳಿಯಿತು. ಇದೇ ಅವಧಿಯಲ್ಲಿ ಥ್ಯಾಚರ್ ನೀತಿಗಳು ಜಾರಿಗೆ ಬಂದವು. 2008 ರ ಜಾಗತಿಕ ಆರ್ಥಿಕ ಕುಸಿತ ಮತ್ತು 2016ರ ಬ್ರೆಕ್ಸಿಟ್ ವರೆಗೆ ಅದು ಶೇ.1.3ಕ್ಕೆ ಕುಸಿಯಿತು.

ಹಿಂದಿನ ಅಂಶಗಳು ಇದ್ದರೂ, ಇಂದಿನ ಬಿಕ್ಕಟ್ಟಿನ ಆರಂಭ ಟೋರಿ ದೊಡ್ಡ ರೀತಿಯಲ್ಲಿ ಬೆಂಬಲಿಸಿದ 2016ರ ಬ್ರೆಕ್ಸಿಟ್, ಅದರಲ್ಲೂ ಟೋರಿ ಸರಕಾರಗಳು ಬ್ರೆಕ್ಸಿಟ್ ಜಾರಿ ಮಾಡಿದ ರೀತಿಯಿಂದಲೇ ಆರಂಭವಾಯಿತು ಎನ್ನಬಹುದು. ಅಲ್ಲದೆ ಬ್ರೆಕ್ಸಿಟ್ ಜಾರಿಯ ಆರಂಭ ಮತ್ತು ಕೊವಿದ್ ಒಟ್ಟಿಗೆ ಬಂದಿದ್ದು ಇನ್ನಷ್ಟು ಆಳವಾಗಿ ಆರ್ಥಿಕವನ್ನು ಪ್ರಭಾವಿಸಿತು. ಬ್ರೆಕ್ಸಿಟ್ ನ ದೀರ್ಘಕಾಲೀನ ಪರಿಣಾಮಗಳು ಕೊವಿದ್ ಪರಿಣಾಮಗಳ ಇಮ್ಮಡಿಗಿಂತಲೂ ಹೆಚ್ಚು ತೀವ್ರ ಪರಿಣಾಮ ಬೀರಲಿವೆ ಎಂದು ಅಧಿಕೃತವಾಗಿ ಅಂದಾಜು ಮಾಡಲಾಗಿದೆ. ಬ್ರೆಕ್ಸಿಟ್ ಹಲವು ರೀತಿಯಲ್ಲಿ ಯು.ಕೆ ಆರ್ಥಿಕದ ಮೇಲೆ ದುಷ್ಪರಿಣಾಮ ಬೀರಿತು.



ಬ್ರೆಕ್ಸಿಟ್ ಮತ್ತು ‘ಮಿತವ್ಯಯ’ದ ಅಧ್ವಾನಗಳು

ಮೊದಲನೆಯದಾಗಿ ಅದು ಯು.ಕೆಯ ದೊಡ್ಡ ಮಾರುಕಟ್ಟೆಯಾಗಿದ್ದ ಯುರೋ ಮಾರುಕಟ್ಟೆ ಕಳೆದುಕೊಂಡಿತು. ಈ ನಷ್ಟವನ್ನು ಇತರ ದೇಶಗಳ ಜತೆ ದ್ವಿಪಕ್ಷೀಯ ಒಪ್ಪಂದಗಳಿಂದ ತುಂಬಿಕೊಳ್ಳಬಹುದು ಎಂದುಕೊಂಡದ್ದು ಹುಸಿಯಾಯಿತು. ನಿಕಟ ಸಹವರ್ತಿಯಾದ ಯು,ಎಸ್ ಜತೆಗೆ ಇನ್ನೂ ದ್ವಿಪಕ್ಷೀಯ ಒಪ್ಪಂದವಾಗಿಲ್ಲ. ಎರಡನೆಯದಾಗಿ ಯು.ಕೆ ಮತ್ತು ಯುರೋಪಿನ ನಡುವೆ ಇದ್ದ ಕಾರ್ಮಿಕರ ಮುಕ್ತ ಓಡಾಟ ಬಂದ್ ಆಗಿದ್ದು, ಕಾರ್ಮಿಕರ ಕೊರತೆ ವಿಪರೀತವಾಗಿ ಏರಿತು. ಬ್ರೆಕ್ಸಿಟ್, ಕೊವಿದ್ ಮೊದಲು ಇದ್ದ ಕಾರ್ಮಿಕ ಕೊರತೆ 8.23 ಲಕ್ಷದಿಂದ ಈ ವರ್ಷದ ಮೂರನೆಯ ತ್ರೈಮಾಸಿಕದಲ್ಲಿ 12.46 ಲಕ್ಷಕ್ಕೆ ಏರಿದೆ. ದೊಡ್ಡ, ಸಣ್ಣ ಎಲ್ಲಾ ರೀತಿಯ ಉದ್ಯಮಗಳ ಮೇಲೆ ಇದು ದುಷ್ಪರಿಣಾಮ ಬ ೀ ರಿ ದ ’ . ದೀರ್ಘಾವಧಿಯಲ್ಲಿ ರಫ್ತು, ಆಮದು ಎರಡೂ ಶೇ. 15ರಷ್ಟು ಕುಸಿಯಲಿದೆ, ಉತ್ಪಾದಕತೆ ಶೇ. 4ರಷ್ಟು ಕಡಿಮೆಯಾಗಲಿದೆ.

ಇದಲ್ಲದೆ ಬ್ರೆಕ್ಸಿಟ್ ಯು.ಕೆಯ ಒಳಗೂ, ಹೊರಗೂ ರಾಜಕೀಯ ಸಮಸ್ಯೆಗಳನ್ನೂ ಸೃಷ್ಟಿಸಿದೆ. ಯು.ಕೆ ಭಾಗವಾಗಿರುವ ಉತ್ತರ ಐರ್ಲೆಂಡ್ ಮತ್ತು ಯುರೋ ಕೂಟದ ಭಾಗವಾಗಿರುವ ಐರ್ಲೆಂಡ್ ನಡುವೆ ಕಸ್ಟಮ್ಸ್ ಗಡಿ ಅಲ್ಲಿನ ರಾಜಕೀಯ ಸಮಸ್ಯೆಗಳನ್ನು ಮರುಕಳಿಸಬಹುದು ಎಂಬ ಆತಂಕದಿಂದ ಪರಸ್ಪರ ಒಪ್ಪಲಾಗಿದ್ದ ನಿಬರ್ಂಧಗಳನ್ನು ಯು.ಕೆ ಏಕಪಕ್ಷೀಯವಾಗಿ ಬದಲಾಯಿಸ ಹೊರಟಿದೆ. ಇದಕ್ಕೆ ಯುರೋ ಕೂಟದಿಂದಲೂ, ಉತ್ತರ ಐರ್ಲೆಂಡಿನ ಕೆಲವು ರಾಜಕೀಯ ಪಕ್ಷಗಳಿಂದಲೂ ಆಕ್ಷೇಪ ವ್ಯಕ್ತವಾಗಿದೆ. ಯು.ಕೆ ಯಲ್ಲಿ ಇಡಿಯಾಗಿ ಬ್ರೆಕ್ಸಿಟ್ ಪರವಾಗಿ ಅಲ್ಪ ಬಹುಮತವಿದ್ದರೂ, ಸ್ಕಾಟ್ ಲ್ಯಾಂಡ್ ನಲ್ಲಿ ಬಹುಸಂಖ್ಯಾತರು ಬ್ರೆಕ್ಸಿಟ್ ವಿರುದ್ಧವಾಗಿದ್ದರು. ಬ್ರೆಕ್ಸಿಟ್ ನಂತರ ಸ್ಕಾಟ್ ಲ್ಯಾಂಡಿನಲ್ಲಿ ಯು.ಕೆ ಯಿಂದ ಹೊರ ಬಂದು ಸ್ವತಂತ್ರ ರಾಷ್ಟ್ರವಾಗಿ ಯುರೋ ಕೂಟ ಸೇರಲು ಒತ್ತಾಯ ಜಾಸ್ತಿಯಾಗುತ್ತಿದೆ.

ಕಳೆದ 12 ವರ್ಷಗಳ ಟೋರಿ ಆಳ್ವಿಕೆಯ ‘ಮಿತವ್ಯಯ’ ಎಂದು ಕರೆಯಲಾಗುವ ಉಗ್ರ ಬಲಪಂಥೀಯ ನೀತಿಗಳು ಬಡ–ಮಧ್ಯಮ ವರ್ಗಗಳನ್ನು ತೀವ್ರವಾಗಿ ಬಾಧಿಸಿವೆ. 2012–2019ರ ಅವಧಿಯಲ್ಲಿ ‘ಮಿತವ್ಯಯ’ದ ಸಮಾಜ ಕಲ್ಯಾಣ ಕ್ರಮಗಳಲ್ಲಿ ತೀವ್ರ ಕಡಿತಗಳನ್ನು ತಂದ ನೀತಿಗಳ ಫಲವಾಗಿ ಕನಿಷ್ಠ 3.35 ಲಕ್ಷ ಹೆಚ್ಚಿನ ಸಾವುಗಳು ಆಗಿವೆ ಎಂದು ಅಧ್ಯಯನ ತಿಳಿಸಿದೆ.

ಇದು ಸಾಲದೆಂಬಂತೆ ಬಡ–ಮಧ್ಯಮ ವರ್ಗಗಳ ಮೇಲೆ ಕೊವಿದ್ ಬಂದೆರಗಿ ಜೀವನ ಮಟ್ಟ ಇನ್ನಷ್ಟು ಕುಸಿದಿತ್ತು. ಅದರ ಮೇಲೆ ಉಕ್ರೇನ್ ಯುದ್ಧ ಮತ್ತು ರಶ್ಯಾದ ಮೇಲೆ ಹೊರಿಸಲಾದ ಆರ್ಥಿಕ ದಿಗ್ಬಂಧನಗಳು ಇಂಧನ–ವಿದ್ಯುತ್ ಮತ್ತು ಜೀವನಾವಶ್ಯಕ ವೆಚ್ಚದಲ್ಲಿ ಭಾರೀ ಏರಿಕೆ, ತೀವ್ರ ಹಣದುಬ್ಬರ ಬಡ–ಮಧ್ಯಮ ವರ್ಗಗಳನ್ನು ಕಂಗಾಲಾಗಿಸಿದೆ. ಸರಾಸರಿ ಯು.ಕೆ ಕುಟುಂಬಗಳ ಸರಾಸರಿ ಜೀವನ ವೆಚ್ಚ 2500 ಪೌಂಡಿನಷ್ಟು ಏರಿದೆ, ಆದಾಯ 40 ವರ್ಷಗಳಲ್ಲೇ ಕಡಿಮೆ ಮಟ್ಟಕ್ಕೆ ಕುಸಿದಿದೆ.

ಪ್ರಧಾನಿ ಸುನಕ್ ಬಿಕ್ಕಟ್ಟು ಹೇಗೆ ಪರಿಹರಿಸ್ತಾರೆ?

ಪ್ರಧಾನಿ ಬದಲಾದ ಮಾತ್ರಕ್ಕೆ ಬಿಕ್ಕಟ್ಟು ಪರಿಹಾರವಾಗುತ್ತಾ? ಅವರ ಬಳಿ ಬಿಕ್ಕಟ್ಟು ಪರಿಹಾರದ ಮಂತ್ರದಂಡ ಇದೆಯಾ? ಲಿಝ್ ತರಹದ ಹುಚ್ಚುತನ ಮಾಡಲಿಕ್ಕಿಲ್ಲ ಅಂತ ಬಿಟ್ಟರೆ, ಮೂಲಭೂತ ಟೋರಿ ಆರ್ಥಿಕ ನೀತಿಗಳನ್ನೆ ಬದಲಾಯಿಸದೆ ತತ್ಕಾಲದ ಅಥವಾ ದೀರ್ಘಗಾಮಿ ಪರಿಹಾರಗಳಾಗಲಿ ಇಲ್ಲ. ಈಗಾಗಲೇ ಹೇಳಿದ ಹಾಗೆ ಬ್ರೆಕ್ಸಿಟ್ ಇಂದಿನ ಬಿಕ್ಕಟ್ಟಿಗೆ ಒಂದು ಕಾರಣ. ಆದರೆ ರಿಷಿ ಸಹ ಬ್ರೆಕ್ಸಿಟ್ ಪರನೇ. ಬ್ರೆಕ್ಸಿಟ್ ನಿರ್ಣಯವನ್ನು ಅವರು ಪುನರ್ವಿಮರ್ಶೆ ಮಾಡಲಾರರು. ಬ್ರೆಕ್ಸಿಟ್ ಸಂಬಂಧಿತ ಉತ್ತರ ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ಸಮಸ್ಯೆಗಳ ಕುರಿತು ಯಾವುದೇ ಆಯ್ಕೆ ಅವರ ಬಳಿ ಇದ್ದಂತಿಲ್ಲ. ಕಲ್ಯಾಣ ಕ್ರಮಗಳ ಕಡಿತದ ಮಿತವ್ಯಯದ ನೀತಿಗಳ ಪುನರ್ವಿಮರ್ಶೆ ಮಾಡುವರೇ? ಅವರು ಆರೋಗ್ಯ ಸಚಿವರಾಗಿದ್ದ 2012–18ರಲ್ಲಿ ಎನ್.ಎಚ್.ಎಸ್. (ರಾಷ್ಟ್ರೀಯ ಆರೋಗ್ಯ ವ್ಯವಸ್ಥೆ) ಯಲ್ಲಿ ಹೂಡಿಕೆಯು, ಶಿಫಾರಸು ಮಾಡಲಾದ ಶೇ.4.3 ಹೆಚ್ಚಳದ ಬದಲು ಶೇ.1 ರ ಹೆಚ್ಚಳ ಮಾತ್ರ ಕಂಡಿತ್ತು. ಅವರು ಹಣಕಾಸು ಸಚಿವರಾಗಿ 2021ರಲ್ಲಿ ಮಾಡಿದ ಸಾಮಾಜಿಕ ಭದ್ರತೆಯಲ್ಲಿ ವೆಚ್ಚದ ಕಡಿತ 60 ಲಕ್ಷ ಬಡವರ ಹಲವು ಸವಲತ್ತುಗಳನ್ನು ಕಡಿತ ಮಾಡಿ 2 ಲಕ್ಷ ಮಕ್ಕಳು ಸೇರಿದಂತೆ 5 ಲಕ್ಷ ಜನರನ್ನು ಬಡತನಕ್ಕೆ ತಳ್ಳಿತು. ಅವರು ಈ ಮಾರ್ಚ್ ನಲ್ಲಿ ಮಂಡಿಸಿದ ಮಿನಿ ಬಜೆಟ್ ನಲ್ಲಿ ಕೆಲವು ಬಡವರಿಗೆ ಪರಿಹಾರ ನೀಡುವ ಕ್ರಮಗಳನ್ನು ಘೋಷಿಸಿದರು. ಅದು 8 ಬಡವರಲ್ಲಿ ಒಬ್ಬರಿಗೆ 2024ರ ಹೊತ್ತಿಗೆ ಅಲ್ಪ ಪರಿಹಾರ ನೀಡಬಹುದು ಅಷ್ಟೇ.

ಇಂದಿನ ಬಿಕ್ಕಟ್ಟು ಉಲ್ಬಣಗೊಳ್ಳಲು ಉಕ್ರೇನ್ ಯುದ್ಧ ಮತ್ತು ಆರ್ಥಿಕ ದಿಗ್ಬಂಧನ ಇನ್ನೊಂದು ಕಾರಣ. ರಿಷಿ ಉಕ್ರೇನ್ ಗೆ ಮಿಲಿಟರಿ ಸಹಾಯ ಪೂರೈಕೆ ನಿಲ್ಲಿಸಿ, ರಶ್ಯಾದ ಆರ್ಥಿಕ ದಿಗ್ಬಂಧನ ಹಿಂದಕ್ಕೆ ತೆಗೆದುಕೊಳ್ಳುವರೇ? ಅಥವಾ ಯುದ್ಧವಿರಾಮಕ್ಕೆ ಯು.ಎಸ್, ಮೇಲೆ ಒತ್ತಡ ಹಾಕುವರೇ? ಇವ್ಯಾವನ್ನೂ ರಿಷಿ ಮಾಡಲಾರರು. ಇವುಗಳಲ್ಲಿ ಎಲ್ಲವನ್ನೂ ಅಥವಾ ಕನಿಷ್ಠ ಯಾವುದನ್ನಾದರೂ ಮಾಡದೆ ರಿಷಿ ಬಿಕ್ಕಟ್ಟು ಪರಿಹಾರ ಮಾಡಲು ಸಾಧ್ಯವಿಲ್ಲ. ಅವರು ಬಿಳಿಯರಲ್ಲದ ಅಲ್ಪಸಂಖ್ಯಾತ ಸಮುದಾಯದ ಮೊದಲ ಪ್ರಧಾನಿ ಎಂಬುದೊಂದೇ ಅವರ ಹೆಗ್ಗಳಿಕೆ. ಮೊದಲ ಬಿಳಿಯರಲ್ಲದ ಅಲ್ಪಸಂಖ್ಯಾತ ಕರಿಯ ಅಧ್ಯಕ್ಷರಾಗಿ ಒಬಾಮಾ ಅವರಿಂದಲೂ ಭಾರೀ ಬದಲಾವಣೆ ನಿರೀಕ್ಷಿಸಲಾಗಿತ್ತು. ಅವರು ಮಧ್ಯಮ ಕುಟುಂಬದಿಂದ ಬಂದಿದ್ದರಿಂದ ಇನ್ನಷ್ಟು ಹೆಚ್ಚು ನಿರೀಕ್ಷೆ ಇತ್ತು. ಆ ಮೇಲೆ ಏನಾಯ್ತು ಎಂದು ಎಲ್ಲರಿಗೂ ತಿಳಿದಿದೆ. ಯು.ಎಸ್ ಮಿಲಿಟರಿ ಅತಿರೇಕಗಳನ್ನು ಸಹ ಅವರಿಗೆ ನಿಲ್ಲಿಸಲು ಸಾಧ್ಯತವಾಗಲಿಲ್ಲ. ರಿಷಿಯಂತೂ ಆಗರ್ಭ ಶ್ರೀಮಂತರು, ಪಕ್ಕಾ ಟೋರಿ. ಸರಕಾರದ ಮುಖ್ಯಸ್ಥ ವ್ಯಕ್ತಿಗಳು ಏನೇ ಇದ್ದರೂ, ಅವರಿಗೆ ಎಷ್ಟೇ ಅಧಿಕಾರವಿದ್ದರೂ, ಆಳುವ ವರ್ಗಗಳ ಆಣತಿ ಮೀರಲಾರರು. ಅಲ್ಪಸಂಖ್ಯಾತ ಹಿನ್ನೆಲೆಯಿಂದ ಬಂದವರು ಅಧಿಕಾರ ಉಳಿಸಿಕೊಳ್ಳಬೇಕಾದರೆ ಅವರನ್ನು ಸಂಪ್ರೀತಗೊಳಿಸಲು ಇನ್ನೂ ಹೆಚ್ಚು ಪ್ರಯತ್ನ ಮಾಡಬೇಕಾಗುತ್ತದೆ. ಹಾಗಾಗಿ ರಿಷಿ ಸುನಕ್ ಅವರಿಂದ ಭಾರೀ ನಿರೀಕ್ಷೆ ಇಟ್ಟುಕೊಳ್ಳಬೇಕಾಗಿಲ್ಲ. ■

➘ ಆಗುತ್ತದೆ. ಈ ಇಳಿಕೆಯ ಅರ್ಥವೆಂದರೆ ಅದು ಹಸಿವಿನ ಹೆಚ್ಚಳವೇ. ಈ ವಿದ್ಯಮಾನವು ಜೀವನ ನಿರ್ವಹಣಾ ವೆಚ್ಚದ ಏರಿಕೆಯನ್ನು ಮತ್ತು ನಿಜ ಆದಾಯದ ಇಳಿಕೆಯನ್ನು ಬಿಂಬಿಸುತ್ತದೆ. ಅದನ್ನೇ ಬಡತನದ ಹೆಚ್ಚಳ ಎನ್ನುವುದು.

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ನಿಜ ಆದಾಯದ ಹೆಚ್ಚಳವು ಅದನ್ನು ಖರ್ಚು ಮಾಡುವ ಸರಕುಗಳ ಬಳಕೆಯ ಬುಟ್ಟಿಯಲ್ಲಿರುವ ಪ್ರತಿಯೊಂದು ಸರಕಿನ (ಅಥವಾ ಅವುಗಳಲ್ಲಿ ಒಂದಕ್ಕೆ ಬದಲಾಗಿ ಮತ್ತೊಂದರ) ಬಳಕೆಯ ಮಟ್ಟವನ್ನು ಸ್ವಲ್ಪವಾದರೂ ಹೆಚ್ಚಿಸಬೇಕು. ನಿಜ ಆದಾಯದ ಹೆಚ್ಚಳವು ಆಹಾರ ಧಾನ್ಯಗಳ ಬಳಕೆಯ (ನೇರ ಮತ್ತು ಪರೋಕ್ಷ ಬಳಕೆಯ) ಹೆಚ್ಚಳದಲ್ಲಿ ಪರಿಣಮಿಸುತ್ತದೆ ಎಂಬುದನ್ನು ಭಾರತದ ಎಲ್ಲ ಜನ ವಿಭಾಗಗಳ ಮತ್ತು ದೇಶ ದೇಶಗಳ ದತ್ತಾಂಶಗಳು ತೋರಿಸುತ್ತವೆ. ಆದರೆ, ಭಾರತದಲ್ಲಿ ಆಗಿರುವಂತೆ, ಆಹಾರ ಧಾನ್ಯಗಳ ಒಟ್ಟು (ಪ್ರತ್ಯಕ್ಷ ಮತ್ತು ಪರೋಕ್ಷ) ಸೇವನೆಯು ಒಂದು ವೇಳೆ ಇಳಿಮುಖವಾಗಿದ್ದರೆ, ಜನಸಂಖ್ಯೆಯ ಹೆಚ್ಚು ಭಾಗದ ಜನರ ನಿಜ ಆದಾಯವು ಕುಸಿದಿರುತ್ತದೆ ಮತ್ತು ಈ ಕುಸಿತದಿಂದಾಗಿ ಬಡತನದ ಹೆಚ್ಚಳವಾಗಿರುತ್ತದೆ. ಆದ್ದರಿಂದ, ಹೆಚ್ಚುತ್ತಿರುವ ಹಸಿವು ಮತ್ತು ಹೆಚ್ಚುತ್ತಿರುವ ಬಡತನದ ನಡುವಿನ ಸಂಬಂಧವು ತರ್ಕಬದ್ಧವಾಗಿ ಉಳಿಯುತ್ತದೆ.

ಬಡತನವನ್ನು ಅಳೆಯಲು ನಿಗದಿಪಡಿಸಿದ "ಬಡತನ ರೇಖೆ"ಯ ಪ್ರಕಾರ ಒಂದು ನಿರ್ದಿಷ್ಟ ತಲಾದಾಯ ಮಟ್ಟದ ಕೆಳಗಿರುವ ಜನರನ್ನು ಬಡವರೆಂದು ಪರಿಗಣಿಸಲಾಗುತ್ತದೆ. ಜೀವನ–ವೆಚ್ಚ–ಸೂಚ್ಯಂಕವನ್ನು ಬಳಸಿಕೊಂಡು, ಈ "ಬಡತನದ ರೇಖೆ"ಯನ್ನು ಆಗಾಗ ಪರಿಷ್ಕರಿಸಲಾಗುತ್ತದೆ. ಆದರೆ, ಭಾರತದಲ್ಲಿ ಸಂಯೋಜಿಸಿರುವ ಜೀವನ–ವೆಚ್ಚ–ಸೂಚ್ಯಂಕವು ಶಿಕ್ಷಣ ಮತ್ತು ಆರೋಗ್ಯದಂತಹ ಸೇವೆಗಳ ಖಾಸಗೀಕರಣದಿಂದಾಗಿ ಉದ್ಭವವಾಗುವ ಜೀವನ ವೆಚ್ಚದ ಹೆಚ್ಚಳವನ್ನು ಪರಿಗಣಿಸುವುದಿಲ್ಲ. ಅಂದರೆ, ನಿಜ ಜೀವನದಲ್ಲಿ ಆಗುವ ಖರ್ಚುಗಳ ಏರಿಕೆಯನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಹಾಗಾಗಿ, ಜೀವನ–ವೆಚ್ಚ–ಸೂಚ್ಯಂಕವನ್ನು ಬಳಸಿಕೊಂಡು ಪರಿಷ್ಕರಿಸಿದ "ಬಡತನ ರೇಖೆ"ಯು ಯಾವ ಮಟ್ಟದಲ್ಲಿ ಇರಬೇಕಿತ್ತೊ ಅದಕ್ಕಿಂತಲೂ ಕೆಳಗಿನ ಮಟ್ಟದಲ್ಲೇ ಇರುತ್ತದೆ, ಯಾವಾಗಲೂ, ಮತ್ತು ಕೆಳಗಿಳಿಯುತ್ತಲೇ ಇರುತ್ತದೆ. ಈ ರೀತಿಯಲ್ಲಿ ಬಡತನದ ಅಗಾಧತೆಯನ್ನು ಕೀಳಂದಾಜು ಮಾಡಲಾಗುತ್ತದೆ. ಗಣ್ಯರು ಈ ಅಂದಾಜನ್ನು ಮತ್ತು ಇಳಿಕೆಯಾಗಿದೆ ಎಂದು ಹೇಳಲಾದ ಬಡತನದ ಅನುಪಾತವನ್ನು ಹಾಗೆಯೇ ಒಪ್ಪಿಕೊಳ್ಳುತ್ತಾರೆ. ಬಡತನದ ಅಂದಾಜುಗಳ ಈ ಅಪ್ರಾಮಾಣಿಕತೆಯನ್ನು ಜಾಗತಿಕ ಹಸಿವು ಸೂಚ್ಯಂಕವು ಬಹಿರಂಗಪಡಿಸಿದೆ. ■

NEW No. MAG(3)/NPP/205/2021-2022
JANASHAKTHI KANNADA VARA PATRIKE October 31-November 6, 2022 Price: Rs. 10/- Date of Publication: 28 October 2022 RNI No. KARKAN /2006/17926 Posted on 01-11-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2

ರಿಷಿ ಸುನಕ್ ಬಳಿ ಯು.ಕೆ ಬಿಕ್ಕಟ್ಟು ಪರಿಹಾರದ ಮಂತ್ರದಂಡ ಇದೆಯಾ?

ಈಗಿನ ಯುಕೆ ಆರ್ಥಿಕ ಬಿಕ್ಕಟ್ಟಿಗೆ ಟ್ರಸ್ ದುಸ್ಸಾಹಸ ಮಾತ್ರ ಕಾರಣವೇ? ಕೆಟ್ಟದಾಗಿದ್ದ ಆರ್ಥಿಕ ಪರಿಸ್ಥಿತಿಯನ್ನು ತಮ್ಮ ತಪ್ಪು ನೀತಿಗಳಿಂದ ಅವರು ಪ್ರಪಾತಕ್ಕೆ ತಳ್ಳಿದರು ಎಂಬುದು ನಿಜ. ಆದರೆ ಯು.ಕೆ ಆರ್ಥಿಕ ಬೆಳವಣಿಗೆ 1970ರ ದಶಕದಿಂದಲೇ ಮಂದವಾಗುತ್ತಾ ಬಂದಿದೆ. ಥ್ಯಾಚರ್ ಅವರ ಬಲಪಂಥಿಯ ನೀತಿಗಳು, 2008ರ ಆರ್ಥಿಕ ಮಹಾಕುಸಿತ, ಕಳೆದ 12 ವರ್ಷಗಳ ಟೋರಿ ಆಳ್ವಿಕೆಯ ಮಿತವ್ಯಯದ ಉಗ್ರ ಬಲಪಂಥೀಯ ನೀತಿಗಳು, 2016ರ ಬ್ರೆಕ್ಸಿಟ್, ಕೊವಿದ್ ಪರಿಣಾಮಗಳು, ಈಗ ಉಕ್ರೇನ್ ಯುದ್ಧ ಮತ್ತು ರಶ್ಯಾದ ಮೇಲೆ ಹೇರಲಾದ ಆರ್ಥಿಕ ದಿಗ್ಬಂಧನಗಳ ಒಟ್ಟು ಫಲವೇ ಇಂದಿನ ಬಿಕ್ಕಟ್ಟು ಎನ್ನುತ್ತಾರೆ ಆರ್ಥಿಕ ತಜ್ಞರು.

ಜಗದ ಸುತ್ತ
ವಸಂತರಾಜ ಎನ್.ಕೆ

ಕಳೆದ ಕೆಲವು ತಿಂಗಳುಗಳ ಕಾಲ ಯು.ಕೆ ನಿರಂತರವಾಗಿ ಸುದ್ದಿಯಲ್ಲಿತ್ತು. ಈ ಅವಧಿಯಲ್ಲಿ ಯು.ಕೆ ಎರಡು ರಾಜ–ರಾಣಿ, ಮೂರು ಪ್ರಧಾನಿ, ಆಳುವ ಟೋರಿ ಪಾರ್ಟಿಯಲ್ಲಿ ಮತ್ತು ಸರಕಾರದಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟು, ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಾಕ್ಷಿಯಾಗಿತ್ತು. ಭಾರತ ಮೂಲದ ಪೂರ್ವಜರನ್ನು ಹೊಂದಿದ ಹಿಂದೂ ರಿಷಿ ಸುನಕ್ ಪ್ರಧಾನಿಯಾಗಿದ್ದನ್ನು ಭಾರತದ ಮಾಧ್ಯಮಗಳು ಮತ್ತು ಸಂಘ ಪರಿವಾರ ಸಂಭ್ರಮಿಸಿದ್ದವು. ಈ ಸಂಭ್ರಮಕ್ಕೆ ಕಾರಣವಿದೆಯಾ? ಪ್ರಧಾನಿ ಸುನಕ್ ಯು.ಕೆ ಬಿಕ್ಕಟ್ಟು ಪರಿಹರಿಸ್ತಾರಾ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಕಳೆದ ಕೆಲವು ತಿಂಗಳುಗಳ ಘಟನಾವಳಿ ಆಗಿನ ಪ್ರಧಾನಿ ಬೋರಿಸ್ ಜಾನ್ಸನ್ ಅವರ 'ಕೋವಿದ್ ಪಾರ್ಟಿ ಹಗರಣ'ದೊಂದಿಗೆ ಆರಂಭವಾಯಿತು ಕೋವಿದ್ ಅವಧಿಯಲ್ಲಿ ತನ್ನ ಸರಕಾರವೇ ವಿಧಿಸಿದ್ದ ಕಠಿಣ ನಿರ್ಬಂಧಗಳನ್ನು ಮುರಿದು ಹಲವು ಸಹೋದ್ಯೋಗಿಗಳೊಂದಿಗೆ 'ಪಾರ್ಟಿ' ಮಾಡಿದ್ದು, ಅದರ ಬಗ್ಗೆ ಪಾರ್ಲಿಮೆಂಟಿಗೆ ಮತ್ತು ದೇಶಕ್ಕೆ ಸುಳ್ಳು ಹೇಳಿದ್ದು, 'ಪಾರ್ಟಿ' ಮಾಡಿದ್ದು ಪೋಲಿಸ್ ತನಿಖೆಯಿಂದ ಬಯಲಾಗಿದ್ದು, ಹಣಕಾಸು ಸಚಿವ ರಿಷಿ ಸುನಕ್ ರಿಂದ ಆರಂಭಿಸಿ ಹಲವು ಸಚಿವರು ರಾಜೀನಾಮೆ ಕೊಟ್ಟಿದ್ದು – ಈ ಘಟನಾವಳಿಗಳ ಕುರಿತು ಪಾರ್ಟಿಯ ಆಂತರಿಕ ತುಮುಲ, ಜನತೆಯ ಆಕ್ರೋಶದ ನಂತರ ಜಾನ್ಸನ್ ಪ್ರಧಾನಿ ಹುದ್ದೆಯಿಂದ ರಾಜೀನಾಮೆ ಕೊಡಬೇಕಾಯಿತು. ಮುಂದಿನ ಪ್ರಧಾನಿ ಯಾರಾಗಬೇಕೆಂಬುದು ಆಳುವ ಕನ್ಸರ್ವೇಟಿವ್ (ಟೋರಿ) ಪಾರ್ಟಿಯಲ್ಲಿ ತೀವ್ರ ಪೈಪೋಟಿಗೆ ಕಾರಣವಾಯಿತು.

ಲಿಝ್–ಸುನಕ್ ಪೈಪೋಟಿ

ಪ್ರಧಾನಿ ಆಯ್ಕೆಯ ಮೊದಲ ಸುತ್ತಿನ ಟೋರಿ ಪಾರ್ಲಿಮೆಂಟ್ ಸದಸ್ಯರಿಂದ ಚುನಾವಣೆಗೆ 8 ಅಭ್ಯರ್ಥಿಗಳಿದ್ದರು. ಅನುಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದ ರಿಷಿ ಸುನಕ್ ಮತ್ತು ಲಿಝ್ ಟ್ರಸ್ – ಇವರಲ್ಲಿ ಯಾರೂ ಹಿಂದೆ ಸರಿಯದ್ದರಿಂದ ಟೋರಿ ಪಕ್ಷದ ಸರ್ವಸದಸ್ಯರಿಂದ ಚುನಾವಣೆಯ ಎರಡನೆಯ ಸುತ್ತಿನ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ರಿಷಿ ಸುನಕ್ ಹಣಕಾಸು ಮಂತ್ರಿಯಾಗಿ ಪ್ರಸ್ತಾವಿಸಿದ್ದ ಶೇ. 19 ರಿಂದ ಶೇ.25ಕ್ಕೆ ಕಾರ್ಪೊರೆಟ್ ತೆರಿಗೆ ಏರಿಸಿದ್ದು ವಿವಾದಾಸ್ಪದ ವಿಷಯವಾಯಿತು. ರಿಷಿ ತೆರಿಗೆ ಏರಿಸಿದ್ದನ್ನು ಸಮರ್ಥಿಸಿಕೊಂಡರೆ, ಲಿಝ್ ತಾನು ಪ್ರಧಾನಿಯಾದರೆ ತೆರಿಗೆಯನ್ನು ಏರಿಸುವುದಿಲ್ಲವೆಂದರು. ತೆರಿಗೆ ಏರಿಸುವುದಿಲ್ಲ ಮಾತ್ರವಲ್ಲ, ತೆರಿಗೆ ಕಡಿತ ಮಾಡುತ್ತೇನೆ ಎಂದರು. ಟೋರಿ ಪಕ್ಷದ ಸದಸ್ಯರು ಶ್ರೀಮಂತರಿಗೆ ಕಾರ್ಪೊರೆಟ್ ಗಳಿಗೆ ತೆರಿಗೆ ಕಡಿಮೆ ಮಾಡಿದರೆ ಅವರು ಹೆಚ್ಚೆಚ್ಚು ಹೂಡಿಕೆ ಮಾಡ್ತಾರೆ. ಅದರಿಂದ ಆರ್ಥಿಕ ಬೆಳವಣಿಗೆಯಾಗುತ್ತದೆ. ಅದರ ಫಲ 'ಕೆಳಗೆ ಹರಿದು ಬಂದು' ಎಲ್ಲರಿಗೂ ಅದರ ಹಂಚಿಕೆಯಾಗ್ತದೆ ಎಂಬ ಬಲಪಂಥೀಯ ಬೋಳೆ ನಂಬಿಕೆಯವರಿಗೆ ಲಿಝ್ ನಿಲುವು ಸರಿಯೆನಿಸಿತು. ಅಲ್ಲದೆ ಜಾನ್ಸನ್ ಅವರ ಬಲಗೈ ಆಗಿದ್ದ ಸುನಕ್ ರಾಜೀನಾಮೆ ಕೊಡುವ ಮೂಲಕ 'ದ್ರೋಹ' ಮಾಡಿದರು ಎಂಬ ಪ್ರಚಾರ ಸಹ ರಿಷಿಗೆ ಮುಳುವಾಯಿತು. ಲಿಝ್ ಗೆದ್ದರು. ರಿಷಿ ಸೋತರು. ಈ ಚುನಾವಣೆಯ ಪ್ರಚಾರ ಟೋರಿ ಪಕ್ಷದ ಐಕ್ಯತೆಗೆ ಇನ್ನಷ್ಟು ಮುಳುವಾಯಿತು.

ಮಿನಿ ಬಜೆಟ್ ಅವಾಂತರ

ಲಿಝ್ ಟ್ರಸ್ ಪ್ರಧಾನಿಯಾಗುತ್ತಿದ್ದಂತೆ ತಾವು ನುಡಿದಂತೆ ನಡೆದರು. ಅವರ ಹೊಸ ಹಣಕಾಸು ಮಂತ್ರಿ ಕ್ವಾರ್ಟೆಂಗ್ ಮಿನಿ ಬಜೆಟ್ ಮಂಡಿಸಿದರು. ರಿಷಿ ಸುನಕ್ ಹಣಕಾಸು ಮಂತ್ರಿಯಾಗಿ ಪ್ರಸ್ತಾವಿಸಿದ್ದ ಶೇ. 19 ರಿಂದ ಶೇ.25ಕ್ಕೆ ಕಾರ್ಪೊರೆಟ್ ತೆರಿಗೆ ಹೆಚ್ಚಳವನ್ನು ರದ್ದು ಮಾಡಿದರು. ಮಾತ್ರವಲ್ಲ, 1.5 ಲಕ್ಷ ಪೌಂಡ್ ಗಿಂತ ಹೆಚ್ಚಿನ ಆದಾಯದ ಮಟ್ಟಕ್ಕೆ ಇದ್ದ ಶೇ.45 ತೆರಿಗೆ ದರವನ್ನೇ ರದ್ದು ಮಾಡಿದರು. ಈ ಎರಡು ಪ್ರಸ್ತಾವಗಳ ಒಟ್ಟು ತೆರಿಗೆ ಕಡಿತ 45 ಶತಕೋಟಿ ಪೌಂಡಿನಷ್ಟು ಆಯಿತು. ಬೊಕ್ಕಸಕ್ಕೆ ಈ ಆದಾಯ ನಷ್ಟ ತುಂಬಿಕೊಡುವಂಥ ಯಾವುದೇ ಪ್ರಸ್ತಾವ ಮಿನಿ

ಪುಟ 15 ಕ್ಕೆ

ಎಐಕೆಎಸ್ ಅಖಿಲ ಭಾರತ ಸಮ್ಮೇಳನದ ಲೋಗೋ ಬಿಡುಗಡೆ

ಅಕ್ಟೋಬರ್ 28, 2022 ರಂದು ಕಾಂ. ಹನನ್ ಮೊಲ್ಲಾ, ಎಐಕೆಎಸ್ ಪ್ರಧಾನ ಕಾರ್ಯದರ್ಶಿ, ಕಾಂ. ಅಶೋಕ್ ಧವಳೆ ಎಐಕೆಎಸ್ ಅಧ್ಯಕ್ಷರು, ಕಾಂ.ಅಮ್ರಾ ರಾಮ್ ಎಐಕೆಎಸ್ ಉಪಾಧ್ಯಕ್ಷರು, ಕಾಂ.ವಿಜುಕೃಷ್ಣನ್ ಹಾಗೂ ಕಾಂ.ಪಿ ಶಣ್ಮುಗಮ್ ಎಐಕೆಎಸ್ ಜಂಟಿ ಕಾರ್ಯದರ್ಶಿಗಳು ಮತ್ತು ಪಿ ಕೃಷ್ಣಪ್ರಸಾದ್ ಎಐಕೆಎಸ್ ಹಣಕಾಸು ಕಾರ್ಯದರ್ಶಿ ರವರು ದೇಶದ ರಾಜಧಾನಿ ದೆಹಲಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಎಐಕೆಎಸ್ ನ 35 ನೇ ಅಖಿಲ ಭಾರತ ಸಮ್ಮೇಳನದ ಲೋಗೋವನ್ನು ಬಿಡುಗಡೆ ಗೊಳಿಸಿ ಸಮ್ಮೇಳನವು 2022 ಡಿಸೆಂಬರ್ 13–16 ರವರೆಗೆ ಕೇರಳ ರಾಜ್ಯದ ತ್ರಿಶ್ಯೂರ್ ನಡೆಯಲಿದೆ ಎಂದರು.

ಎಐಕೆಎಸ್ ಸಂಘಟನೆಯ ಒಂದು ಕೋಟಿ 37 ಲಕ್ಷ ಸದಸ್ಯತ್ವವನ್ನು ಪ್ರತಿನಿಧಿಸಿ ದೇಶದ 24 ರಾಜ್ಯಗಳಿಂದ ಸುಮಾರು 800 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು, ಕಳೆದ ಒಂದು ವರ್ಷದಲ್ಲಿ ಸದಸ್ಯತ್ವ ಸುಮಾರು 20 ಲಕ್ಷದಷ್ಟು ಹೆಚ್ಚಳವಾಗಿದ್ದು "ಹೋರಾಟ, ಕ್ರೋಡಿಕರಣ, ಪರ್ಯಾಯದ ಕಡೆಗೆ ಮುನ್ನಡೆ" ಎಂಬುದು ಈ ಸಮ್ಮೇಳನದ ಘೋಷಣೆಯಾಗಿದೆ ಎಂದು ಅವರು ತಿಳಿಸಿದರು.



ಕಾರ್ಪೊರೇಟ್ ಪರವಾದ, ರೈತ ವಿರೋಧಿಯಾದ ಕರಾಳ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಆಳ್ವಿಕೆಯನ್ನು ಮಣಿಸಿದ 2020–21 ರ ವರ್ಷಗಳ ಕಾಲ ನಡೆದ ಐತಿಹಾಸಿಕ ಸಂಯುಕ್ತ ರೈತ ಚಳವಳಿ ನಂತರ ನಡೆಯುತ್ತಿರುವ ಈ ಸಮ್ಮೇಳನವು ಬಿಜೆಪಿ–ಆರ್.ಎಸ್.ಎಸ್. ಆಳ್ವಿಕೆಯ ರೈತ ವಿರೋಧಿ, ಜನ ವಿರೋಧಿ, ಕಾರ್ಪೊರೇಟ್ ಪರ, ಕೋಮುವಾದಿ ಹಾಗೂ ಸರ್ವಾಧಿಕಾರಿ ಧೋರಣೆಗಳ ವಿರುದ್ಧ ಸ್ವತಂತ್ರ ಮತ್ತು ಸಂಯುಕ್ತ ಹೋರಾಟಗಳನ್ನು ಬಲಗೊಳಿಸುವ ಉದ್ದೇಶಕ್ಕೆ ಪೂರಕವಾಗಿ ಅಗತ್ಯ ರಾಜಕೀಯ ಪ್ರಚಾರಾಂದೋಲನ ಮತ್ತು ಸಂಘಟನೆಯನ್ನು ಸಬಲಗೊಳಿಸುವ ಕುರಿತು ಚರ್ಚಿಸಲಿದೆ ಎಂದು ತಿಳಿಸಿದರು.

ಅಭೂತಪೂರ್ವ ಕಿಸಾನ್ ಲಾಂಗ್ ಮಾರ್ಚ್ ನ ರೈತ ಹೋರಾಟದ ಸ್ಪೂರ್ತಿ, ಕೃಷಿಯಲ್ಲಿ ಹಾಗೂ ರೈತ ಚಳವಳಿಯಲ್ಲಿ ಮಹಿಳೆಯರು ವಹಿಸುತ್ತಿರುವ ಮುಂಚೂಣಿ ಪಾತ್ರ ಚಿತ್ರಿಸಿರುವ ಲೋಗೋ ಬಿಡುಗಡೆ ಕೂಡ ಮಾಡಲಾಯಿತು.

ಸಮ್ಮೇಳನಕ್ಕೆ ಲೋಗೋ ಚಿತ್ರ ಆಹ್ವಾನಿಸಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಗೆ ಬಂದಿದ್ದ ಹಲವಾರು ಲೋಗೋಗಳಲ್ಲಿ ಕೇರಳ ರಾಜ್ಯದ ಎರ್ನಾಕುಲಂ ನ ಯುವ ಕಲಾವಿದ ಅಶ್ವಥ್ ರವರ ಚಿತ್ರ ಆಯ್ಕೆಯಾಗಿದ್ದು ಅವರಿಗೆ ಸಮ್ಮೇಳನದಲ್ಲಿ ಬಹುಮಾನ ವಿತರಿಸಲಾಗುವುದು ಹಾಗೂ ಸ್ಪರ್ಧೆಗೆ ಬಂದಿದ್ದ ಎಲ್ಲಾ ಲೋಗೋಗಳ ಪ್ರದರ್ಶನವನ್ನು ಸಮ್ಮೇಳನದಲ್ಲಿ ಏರ್ಪಡಿಸಲಾಗುವುದು ಎಂದು ತಿಳಿಸಿದ ಎಐಕೆಎಸ್ ನಾಯಕರು, ಲೋಗೋ ದಲ್ಲಿ ಇರುವ ಕೆಂಪು ಸೂರ್ಯ ಸಂಯುಕ್ತ ಹೋರಾಟಗಳ ವಿಜಯದ ಭರವಸೆಯ ಸಂಕೇತವಾಗಿದ್ದು, ರೈತಾಪಿ ಸಮುದಾಯವನ್ನು ದಿವಾಳಿಯಾಗಿಸುತ್ತಿರುವ ಕಾರ್ಪೊರೇಟ್ ಲೂಟಿಯ ನವ ಉದಾರವಾದಿ ಧೋರಣೆಗಳಿಗೆ, ದ್ವೇಷದ ಕೋಮುವಾದಿ ರಾಜಕೀಯಕ್ಕೆ ಪರ್ಯಾಯವಾಗಿ ಬಲಿಷ್ಠ ಕಾರ್ಮಿಕ–ರೈತ ಸಖ್ಯತೆ ಸಾಧಿಸಿ, ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಬಲವಾಗಿ ರಕ್ಷಿಸಿಕೊಳ್ಳುವ ಭರವಸೆಯ ಅಭಿವ್ಯಕ್ತಿ ಯಾಗಿದೆ ಎಂದು ವಿವರಿಸಿದರು.



35 ನೇ ಸಮ್ಮೇಳನದ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಬ್ರಿಟಿಷ್ ಸಾಮ್ರಾಜ್ಯಶಾಹಿ ಹಾಗೂ ಪಾಳೇಗಾರಿ ದಮನದ ವಿರುದ್ಧ ಹೋರಾಡಿದ್ದ ವೀರ ಸೇನಾನಿ ಬಿರ್ಸಾ ಮುಂಡ ರವರ ಜನ್ಮ ದಿನಾಚರಣೆ ದಿನವಾದ 15 ನವೆಂಬರ್ 2022 ರಂದು ದೇಶದ ಎಲ್ಲಾ ಗ್ರಾಮಗಳಲ್ಲಿ ಧ್ವಜ ದಿನಾಚರಣೆ ನಡೆಸಿ ಎಐಕೆಎಸ್ ಬಾವುಟ ಹಾರಿಸಲಾಗುವುದು. ಸಮ್ಮೇಳನದ ಭಾವುಟವು, ಪುನ್ನಪ್ರ ವಯಲಾರ್ ನಿಂದ ಧ್ವಜ ಸ್ತಂಭವು ಕಯ್ಯೂರಿನಿಂದ ಮೆರವಣಿಗೆ ಬರಲಿದ್ದು ಡಿಸೆಂಬರ್ 12 ರಂದು ತ್ರಿಶ್ಯೂರ್ ತಲುಪಲಿದೆ.

ಇದೇ ಹಿನ್ನೆಲೆಯಲ್ಲಿ ಎರಡು ಹುತಾತ್ಮ ಜ್ಯೋತಿ ಜಾಥಾಗಳು ಹೊರಡುತ್ತಿದ್ದು ತೆಲಂಗಾಣ ಸಶಸ್ತ್ರ ರೈತ ಹೋರಾಟದ ಸ್ಥಳವಾದ ಹಾಗೂ ಈ ಹೋರಾಟದ ಮೊದಲ ಹುತಾತ್ಮ ದೊಡ್ಡಿ ಕೊಮರಯ್ಯ ರವರ ಗ್ರಾಮವಾದ ಜಂಗಾವ್ ನಿಂದ ಹೊರಡುವ ಜಾಥದ ನೇತೃತ್ವವನ್ನು ಎಐಕೆಎಸ್ ಹಣಕಾಸು ಕಾರ್ಯದರ್ಶಿ ಕಾಂ.ಪಿ ಕೃಷ್ಣಪ್ರಸಾದ್ ವಹಿಸಿದ್ದರೆ ಮತ್ತೊಂದು ಜಾಥಾವು ಎಐಕೆಎಸ್ ಜಂಟಿ ಕಾರ್ಯದರ್ಶಿ ಕಾಂ.ವಿಜು ಕೃಷ್ಣನ್ ನೇತೃತ್ವದಲ್ಲಿ ಮೇಲ್ಜಾತಿ ಪಾಳೇಗಾರಿ ಭೂ ಮಾಲೀಕರು ಹಾಗೂ ಅವರ ಗೂಂಡಾಗಳಿಂದ 44 ಕೃಷಿ ಕೂಲಿಕಾರರು ಕೊಲೆಯಾಗಿದ್ದ ತಮಿಳುನಾಡಿನ ಕಿಲ್ವೆನ್ಮಣಿ ಯಿಂದ ಹೊರಟು ಸೇಲಂ ಮೂಲಕ ಸಾಗುತ್ತಾ ಅಲ್ಲಿ ಸೇಲಂ ಜೈಲ್ ಹುತಾತ್ಮರಿಗೆ ಗೌರವ ಸಲ್ಲಿಸಲಿದೆ. (1950 ಪೆಬ್ರವರಿ 11 ರಂದು ರೈತ ಚಳವಳಿಯ ನಾಯಕರು ಸೇರಿದಂತೆ 22 ಜನ ಸಂಗಾತಿಗಳು ಪೊಲೀಸ್ ಗೋಲಿಬಾರ್ ಗೆ ಹುತಾತ್ಮರಾಗಿದ್ದರು.) ಈ ಎರಡೂ ಜಾಥಾಗಳು ತಮ್ಮ ಮಾರ್ಗದ ಉದ್ದಕ್ಕೂ ಸಭೆಗಳನ್ನು ನಡೆಸಿಕೊಂಡು ಡಿಸೆಂಬರ್ 12 ರಂದು ಸಮ್ಮೇಳನದ ಸ್ಥಳವಾದ ತ್ರಿಶ್ಯೂರ್ ತಲುಪಲಿದೆ.

ಡಿಸೆಂಬರ್ 16 ರಂದು ಒಂದು ಲಕ್ಷ ರೈತರ ಬೃಹತ್ ರ್‍ಯಾಲಿ ಹಾಗೂ ಬಹಿರಂಗ ಸಭೆ ಮೂಲಕ ಸಮ್ಮೇಳನ ಸಮಾರೋಪಗೊಳ್ಳಲಿದ್ದು ಕೇರಳ ರಾಜ್ಯದ ಮುಖ್ಯಮಂತ್ರಿ ಕಾಂ.ಪಿಣರಾಯಿ ವಿಜಯನ್ ರವರು ಈ ಬಹಿರಂಗ ಸಭೆ ಉದ್ಘಾಟಿಸಲಿದ್ದು ಎಐಕೆಎಸ್ ನ ವಿವಿಧ ನಾಯಕರು ಸಭೆಯನ್ನು ಉದ್ದೇಶಿಸಿ ಮಾತಾನಾಡುವರು ಎಂದು ತಿಳಿಸಿದರು.

34 ನೇ ಅಖಿಲ ಭಾರತ ಸಮ್ಮೇಳನ ಐದು ವರ್ಷಗಳ ಹಿಂದೆ ಹರ್ಯಾಣದ ಹಿಸ್ಸಾರ್ ನಲ್ಲಿ 2017 ರ ಆಕ್ಟೋಬರ್ ರಲ್ಲಿ ನಡೆದಿತ್ತು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**